
ಕೊಡಗು ಸಂಗಾತಿ

ಮಾರ್ಚ್ 1 ರಿಂದ 31, 2003 | ಪಾಕ್ಷಿಕ ಪತ್ರಿಕೆ | (ಮಾಯಿ 17-30 ಸುಗ್ಗಿ 1-17)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R.No. KA/SK/MYS-88/2003 ಸಂಪುಟ : 6 ಸಂಚಿಕೆ : 23-24 ಪುಟಗಳು : 24 ಬೆಲೆ ರೂ. : 12-00




ಚಿತ್ರ : ದೀಪಕ್ ಪಟ್ಟಡ

ವಿಶ್ವ ಕ್ರಿಕೆಟ್ ಕಪ್ ಸಮರ - 2003

ಕ್ರಿಕೆಟ್ ಮೈದಾನದಲ್ಲಿರುವ ಆಟಗಾರರ ಸ್ಥಾನಗಳು.

ನಮ್ಮೆಲ್ಲ ಕುಲಬಾಂಧವರಿಗೂ ಮತ್ತು ಸ್ನೇಹಿತ ವರ್ಗಕ್ಕೂ ಶುಭಾಶಯಗಳು

ದಿನಾಂಕ 10-2-2003 ರ ಸೋಮವಾರ ನಮ್ಮ ಮಕ್ಕಳ ಮದುವೆ ಮಡಿಕೇರಿಯಲ್ಲಿರುವ ಕೆಳಗಿನ ಗೌಡ ಸಮಾಜದಲ್ಲಿ ನಡೆದ ಸಂದರ್ಭದಲ್ಲಿ ನೀವುಗಳು ಬಂದು ಹರಿಸಿ ಆಶೀರ್ವಾದ ಮಾಡಿದ್ದೀರಿ. ನಮ್ಮ ಸಂತೋಷದಲ್ಲಿ ಪಾಲ್ಗೊಂಡ ನೀವುಗಳಿಗೆ ನಮ್ಮ ಕುಲಗುರು ವೆಂಕಟರಮಣ ಸ್ವಾಮಿ ಮತ್ತು ಆದಿ ಕಾವೇರಿ ಮಾತೆ ಸಹ ಆಯಿರಾರೋಗ್ಯ ಸುಖ ಸಂಪತ್ತು ನೀಡಿ ಸಹಕರಿಸಲಿ ಎಂದು ಶುಭ ಹಾರೈಸುವೆವು.



ಚಿ॥ರಾ॥ ರಾಜೇಶ್

ಮತ್ತು

ಚಿ॥ಸೌ॥ ಚಿತ್ರಲೇಖಾ

ಯಿಂದ : ಶ್ರೀಮತಿ ಕೂಡಕಂಡಿ ಪ್ರೇಮಾ ಪೊನ್ನಪ್ಪ
W/o *ಲೇ॥ ಕೂಡಕಂಡಿ ಪೊನ್ನಪ್ಪ,*
ಅಡ್ವಕೇಟ್, ಪೆನ್‌ಶನ್ಸ್ ಲೈನ್, ಮಡಿಕೇರಿ
Ph. : 224178

ಯಿಂದ: ಶ್ರೀ ಬಿ. ಎಂ. ಎಲ್ಲಪ್ಪ, ಕೌನ್ಸಿಲರ್. ಮಡಿಕೇ
ಶ್ರೀಮತಿ ಶಿವಮ್ಮ ಎಲ್ಲಪ್ಪ,
ಮಡಿಕೇರಿ, ಮತ್ತು ಸಹೋದರ ಗಣೇಶ್.
Ph. : 224933

2003, ಮಾರ್ಚ್ 1 ರಿಂದ 31ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಕೋರಿಯರ್ ಸರ್ವೀಸ್ ಇತ್ಯಾದಿ	ಕೊಡಗು ಸಂಗಾತಿ,12058, ಸಂಗಾತಿ ನಿಲಯ,ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17.ಫೋನ್:0821/404290
	ಅಥವಾ ಕೆ.ಜಿ. ರಾಮಕೃಷ್ಣ, ಕಾವೇರಿ ಆಟೋಮೊಬೈಲ್ ಮುಖ್ಯರಸ್ತೆ, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 ಫೋನ್:518463
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್	ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : 08272/228047
	ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.

ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ :10 ಕುಟುಂಬ 18 ಗೋತ್ರದ ಭಾಷೆ ಮತ್ತು ಸಂಸ್ಕೃತಿಗೆ ಹೊಸ ಚಾಲನೆ

ದಿನಾಂಕ 2-2-2003 ರಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕೊಡಿಯಾಲ ಬೈಲು ಮಹಾತ್ಮಗಾಂಧಿ ಮಲ್ನಾಡ್ ಪ್ರೌಢಶಾಲೆಯ ಅಂಗಳದಲ್ಲಿ ನಡೆದಿರುವುದು ನಿಜಕ್ಕೂ ಸಂತಸಕರ ಬೆಳವಣಿಗೆಯಾಗಿದೆ. ತನ್ನ ಭಾಷೆ, ತನ್ನ ಸಂಸ್ಕೃತಿ, ತನ್ನ ಆಚಾರ, ತನ್ನ ವಿಚಾರ, ತನ್ನ ಪರಂಪರೆ ಒಟ್ಟಾರೆಯಾಗಿ ತನ್ನತನವನ್ನು ಉಳಿಸಿಕೊಳ್ಳಲು ಹೆಣಗುತ್ತಿರುವ ಪ್ರಯತ್ನವನ್ನು ಗೌಡ ಯುವ ಸಂಘಟಕರ ನೇತಾರ "ಮಾಸ್ಟರ್ ಮೈಂಡ್" ಎಂದೆ ಕರೆಯಲ್ಪಡುವ ಸಂಘಟನೆಯ ಶಿಲ್ಪಿ ಕೆ. ಆರ್. ಗಂಗಾಧರ ಮತ್ತುಸುಳ್ಯ ತಾಲ್ಲೂರಿನ ಗೌಡ ಯುವ ನೇತಾರರೂ ಮತ್ತು ಸಂಗಡಿಗರ ಪ್ರಯತ್ನ ಕುಷಿ ತರುವಂತಹುದು. ಇಂತಹ ಸಮಾವೇಶಗಳು ಆಗಿಂದಾಗ್ಯೆ ಜರುಗಿ ಪರಾವಲಂಬಿಯಾಗುವ ಈ ಸಂದರ್ಭದಲ್ಲಿ ಫೀನಿಕ್ಸ್ ಪಕ್ಷಿಯಂತೆ ಸಹಕಾರಿಯಾಗ ಬಲ್ಲದು.

ಇಂದಿನ ಕಂಪ್ಯೂಟರ್ ಯುಗದಲ್ಲಿ ಭಾಷೆ ಸಂಸ್ಕೃತಿಗಳು ತನ್ನಷ್ಟಕ್ಕೆ ತಾನೆ ತನಗರಿವಿಲ್ಲದೆ ತನ್ನತನವನ್ನು ಕಳೆದು ಕೊಳ್ಳುತ್ತಿರುವ ಇತ್ತೀಚಿನ ದಿನಗಳಲ್ಲಿ ಗೌಡರ ಯುವ ನೇತಾರರ ಸಂಘಟನೆಗಾಗಿ ಸಮಾವೇಶ ಬಹಳ ಅರ್ಥಪೂರ್ಣ ವಾದದ್ದು. ಭಾಷೆ ಮತ್ತು ಸಂಸ್ಕೃತಿಯನ್ನೂ ತುಚ್ಚ ಭಾವನೆಯಿಂದ ಕಾಣುವ ಶ್ರೀಮಂತ ವರ್ಗಕ್ಕೆ ಆಪತ್ಯವೆಸಿದರು ಪರವಾಗಿಲ್ಲ. ಇದಕ್ಕೆ ಅಪವಾದವೆಂಬಂತೆ ಇತ್ತೀಚೆಗೆ ಸುಳ್ಯದಲ್ಲಿ ಜರುಗಿದ ಬೃಹತ್ ಸಮ್ಮೇಳನದಲ್ಲಿ ಸುಮಾರು 12 ಸಾವಿರಕ್ಕಿಂತಲೂ ಹೆಚ್ಚು ಪ್ರತಿನಿಧಿಗಳು ಆಗಮಿಸಿದ್ದೆ ಸಾಕ್ಷಿಯಾಗಿದೆ.

ಹಾಗೆಯೇ ಇನ್ನೊಂದು ಗೌಡ ಹಿರಿಯರ ಸಮಾವೇಶ ದಿನಾಂಕ 19-1-2003ರಂದು ಮಂಗಳೂರಿನ ಕುವೆಂಪುನಗರದ ಕೂಳೂರಿನಲ್ಲಿ ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘದ ಆಶ್ರಯದಲ್ಲಿ ಗೌಡರ ಬೃಹತ್ ಸಮ್ಮೇಳನ ನಡೆಯಿತು. ಸುಮಾರು ಐವತ್ತು ಸಾವಿರಕ್ಕಿಂತಲೂ ಜನ ಪ್ರತಿನಿಧಿಗಳೂ ಭಾಗವಹಿಸಿದ್ದವು. ಇದರಲ್ಲಿ ಒಕ್ಕಲಿಗರ ಜಗದ್ಗುರುಗಳೆಂದು ಕರೆಯಲ್ಪಡುವ ಆದಿಚುಂಚನಗಿರಿ ಮಠದ ಮಹಾಸ್ವಾಮಿಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಆಶೀರ್ವಚನ ನೀಡಿದರೆ, ಗೌಡ ಮತ್ತು ಒಕ್ಕಲಿಗ ಗೌಡ ಜನಾಂಗದ ಗಣ್ಯರು, ಗಣ್ಯಾತಿಗಣ್ಯರು ಆಗಮಿಸಿದ್ದರು. ತಾರ ಸಮೂಹವೇ ಆಗಮಿಸಿತು. ವಿಚಾರ ಗೋಷ್ಠಿಗಳು ನಡೆದವು. ಆಕರ ಗ್ರಂಥಗಳು ಬಿಡುಗಡೆಗೊಂಡವು. ಹಲವಾರು ವಿಷಯಗಳು ಚರ್ಚಿಸಲ್ಪಟ್ಟವು. ಗೌಡ ಜನಾಂಗದ ಮುನ್ನೋಟದ ವಿಚಾರ ಗೋಷ್ಠಿಗಳು ನಡೆದವು. ಗೌಡ ಜನಾಂಗ ಮತ್ತು ರಾಜಕೀಯ, ಗೌಡ ಜನಾಂಗ ಮತ್ತು ಶಿಕ್ಷಣ, ಗೌಡ ಜನಾಂಗ ಮತ್ತು ಕೃಷಿ ಈ ಬಗ್ಗೆ ವಿಷಯಗಳು ಮಂಡಿಸಲ್ಪಟ್ಟವು.

ಗೌಡ ಜನಾಂಗವು ತನ್ನ ಬೃಹತ್ ಶಕ್ತಿಯನ್ನು ರಾಜಕೀಯ ವಾಗಿ ತೋರ್ಪಡಿಸಿಕೊಳ್ಳುವ ಅಚಲ ನಿರ್ಧಾರ ತಳೆದಂತಿತ್ತು ಈ ಸಮಾವೇಶಗಳು. ಒಂದು ಅಂದಾಜಿನಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಜನರಲ್ಲಿ 1/3 ಭಾಗದಷ್ಟು ಜನರು 10 ಕುಟುಂಬ ಮತ್ತು 18 ಗೋತ್ರದ ಹಾಗೂ ಗೌಡರು ಯಾನೆ ಒಕ್ಕಲಿಗರೆಂದು ತಿಳಿದು ಬಂದಿದೆ. ಹೀಗಿರುವಾಗ ಸಮಾರಂಭ ಸಮಾವೇಶಗಳು ಮಾಮೂಲು ತಾನೆ. ಪಶ್ಚಿಮ ಘಟ್ಟದ ಕರಾವಳಿ ತೀರದಲ್ಲಿ ಗೌಡ ಜನಾಂಗದ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ಪ್ರತಿನಿಧಿಸದಿರುವುದು ಮತ್ತು ಅವಕಾಶದಿಂದ ವಂಚಿತ ರಾಗಿರುವುದಕ್ಕೆ ಸಹ ಇಂತಹ ಬೃಹತ್ ಮೇಳವು ಕಾರಣ ವಿರಬಹುದೇನೊ?

ಇರಲಿ," ಒಂದು ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿ" ಯೆಂಬುದರಲ್ಲಿ ಸಂಗಾತಿಗೆ ಅಂದಿನಿಂದಲೂ ಬಲು ಪ್ರಿಯವಾದುದು.

ಗೌಡ ಬಂಧು ಮಿತ್ರರ ಕ್ಷೇಮಾಭಿವೃದ್ಧಿ ಸಂಘದ 3 ನೇ ವರ್ಷದ ವಾರ್ಷಿಕ ಸಭೆ

ಹಿಂದಿನ ವರ್ಷದಂತೆ ಸಂಘದ ವಾರ್ಷಿಕ ಸಭೆಯನ್ನು ಬೆಂಗಳೂರು ನಗರದ ವಿಶ್ವೇಶ್ವರಯ್ಯ ಹೊಸ ಬಡಾವಣೆಯ ಉಲ್ಲಾಳುವಿನ ಶ್ರೀ ವೈ. ವೆಂಕಪ್ಪ ಇವರ ನಿವಾಸದಲ್ಲಿ ದಿನಾಂಕ 9-2-2003 ರಲ್ಲಿ ನಡೆಸಲಾಯಿತು.

ಸಂಘದ ಕಾರ್ಯದರ್ಶಿ ಉಡುದೋಳಿರ ಎಲ್. ಸೋಮಪ್ಪ ಇವರ ನಿರೂಪಣೆ ಮತ್ತು ಶ್ರೀಮತಿ ಪಾರ್ವತಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯಲ್ಲಿ, ಸಂಘದ ಖಜಾಂಚಿ ಜೈನೀರ ಬಿ. ಧನಂಜಯ ಇವರು ಸಂಘದ ಪರಿಕಲ್ಪನೆ ಬಗ್ಗೆ ವಿವರ ನೀಡಿ ಮುಖ್ಯ ಅತಿಥಿಗಳನ್ನು ಮತ್ತು ಆಹ್ವಾನಿತರನ್ನು ಸ್ವಾಗತಿಸಿದರು. ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಜನಪ್ರಿಯ ಅಧ್ಯಕ್ಷರು ಹಾಗೂ ಕೊಡಗು ಗೌಡ ಜನಾಂಗದಲ್ಲಿ ಸರಳತೆಗೆ ಮತ್ತು ಸೌಜನ್ಯಕ್ಕೆ ಹೆಸರಾದ ಶ್ರೀ ದಂಬೆಕೋಡಿ ಎಸ್. ಆನಂದರವರು ತಮ್ಮ ಶ್ರೀಮತಿಯವರೊಂದಿಗೆ ಮುಖ್ಯ ಅತಿಥಿಗಳಾಗಿ ಸಭೆಯಲ್ಲಿ ಭಾಗವಹಿಸಿದ್ದು ಅಂದಿನ ವಿಶೇಷತೆಯಾಗಿತ್ತು.

ಕಾರ್ಯದರ್ಶಿ ಶ್ರೀ ಯು. ಎಲ್. ಸೋಮಪ್ಪನವರು ಸಂಘದ ವರದಿ ಮತ್ತು ಕಾರ್ಯಕ್ರಮಗಳ ಮಾಹಿತಿಗಳನ್ನು ಸಭೆಯಲ್ಲಿ ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ, ಶ್ರೀ ಎಂ. ಜಿ. ಉತ್ತಪ್ಪನವರು ಅಧ್ಯಕ್ಷರ ಭಾಷಣದಲ್ಲಿ, ಬಂಧು ಬಾಂಧವರಿಗೆ, ಸಂಘದ ಸದಸ್ಯರಾಗಿ ಸಹಕಾರ ನೀಡಿ ಸಂಘವನ್ನು ಅಭಿವೃದ್ಧಿಗೊಳಿಸಲು ವಿನಂತಿಸಿದರು.

ಪ್ರಾರಂಭದಿಂದಲೂ, ಸಂಘದ ಚಟುವಟಿಕೆಗೆ ಸಹಾಯ ಮತ್ತು ಸಹಕಾರ ನೀಡುತ್ತಿರುವ ಶ್ರೀ ವೈ. ವೆಂಕಪ್ಪ ಮತ್ತು ಪುಷ್ಪಲತಾ ದಂಪತಿಗಳನ್ನು ಸನ್ಮಾನಿಸಲಾಯಿತು. ಶ್ರೀ ಕಲ್ಲುಮುಟ್ಲು ಬಸಪ್ಪ, ಸಂಘದ ಸಂಕ್ಷಿಪ್ತ ಮಾಹಿತಿ ಮನವಿಯನ್ನು ಸಭೆಯಲ್ಲಿ ಮಂಡಿಸಿದರು.

ಶ್ರೀ ವೈ. ವೆಂಕಪ್ಪರವರು ವಂದನಾರ್ಪಣೆಯನ್ನು ಸಲ್ಲಿಸಿದರು. ಸಾಂಪ್ರದಾಯಿಕ ಭೋಜನದ ನಂತರ ಜೈನೀರ ಎಂ ಪ್ರಭುಶಂಕರ್ ತಂಡದವರು ಮನೋರಂಜನಾ ಕಾರ್ಯಕ್ರಮ ಮತ್ತು ಸ್ಪರ್ಧೆಗಳನ್ನು ನೀಡಿದರು.

ಸ್ಥಳೀಯ ಬಂಧು ಬಾಂಧವರು ಸಭೆಯಲ್ಲಿ ಭಾಗವಹಿಸಿ ಸಂಘದ ಚಟುವಟಿಕೆ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತ ಪಡಿಸಿದರು.

ವರದಿ : ಜೈನೀರ ಜಿ. ರಾಜಕುಮಾರ್

ಕೆಟ್ಟವರು ತಿನ್ನುವುದಕ್ಕಾಗಿ ಬದುಕುತ್ತಾರೆ. ಒಳ್ಳೆಯವರು ಬದುಕುವುದಕ್ಕಾಗಿ ತಿನ್ನುತ್ತಾರೆ.

ಕೇರಳ ಗಡಿನಾಡ ಗೌಡರಿಗೂ ಸುಳ್ಯ ಸೀಮೆಗೂ ಅವಿನಾಭಾವ ನಂಟು

ಭೌಗೋಳಿಕವಾಗಿ ಕೇರಳ ರಾಜ್ಯದಲ್ಲಿ ವಾಸವಾಗಿದ್ದರೂ ತಮ್ಮ ಭಾಷೆಯನ್ನೂ, ಸಂಸ್ಕೃತಿಯನ್ನು ಪೋಷಿಸಿ ಉಳಿಸಿ ಬೆಳೆಸಿಕೊಂಡು ತಾವು ವಾಸಿಸುವ ನಾಡಿನ ಸಂಸ್ಕೃತಿಯನ್ನು ಗೌರವಿಸಿ ಎರಡೂ ಭಾಷೆ, ಸಂಸ್ಕೃತಿಯ ಜೊತೆಗೆ ಬಾಳುತ್ತಾ ಅನೇಕ ಭಾಷೆ ಸಂಸ್ಕೃತಿಯ ಸಂಗಮ ಭೂಮಿಯಲ್ಲಿ ಕಲೆತು ಬೆರೆತು ಬಾಳುವ ಜನಸಮುದಾಯವೇ ಗಡಿನಾಡ ಗೌಡ ಜನಾಂಗ.

ಮೂಲತಃ ಸುಳ್ಯದವರಾದ ಈ ಜನತೆಯ ಇತಿಹಾಸವು ಇಲ್ಲಿಯ ಇತಿಹಾಸ ಪ್ರಸಿದ್ಧ ಮಂಞಿನಡ್ಕ ತುಳೂರ್ ವನತ್ ಭಗವತೀ ಕ್ಷೇತ್ರದ ಇತಿಹಾಸದೊಂದಿಗೆ ಹಾಸು ಹೊಕ್ಕಾಗಿದೆ. ಸುಳ್ಯ ಸೀಮೆ ಮತ್ತು ಸುಳ್ಯದ ಗೌಡರು ಈ ಕ್ಷೇತ್ರದ ಮಧ್ಯ ಸ್ಥಾನವನ್ನು ಪಡೆಯುತ್ತಾರೆ.

ಸ್ವಜಾತಿಯರು ಹೆಚ್ಚಾಗಿ ಇಲ್ಲದಿದ್ದ ಚೊತ್ರ ಬಲ್ಲಾಳರಿಗೆ ಆಚಾರ ಪ್ರಕಾರ ಹತ್ತಿರದ ಸಂಬಂಧವಿರುವ ಒಂದು ವಿಭಾಗವೆಂಬಂತೆ ಗೌಡ ಸಮೂಹವನ್ನು ಚೊತ್ರ ಬಲ್ಲಾಳ ಮತ್ತು ಅವರ ದಳಪತಿಗಳು ಸ್ವಜನಗಳಾಗಿ ಭಾವಿಸುವ ಕಾಲವೊಂದಿತ್ತು. ಈ ಸಂದರ್ಭದಲ್ಲಿ 6000 ಮನೆ ಗೌಡ ಕುಟುಂಬಗಳನ್ನು ಮೂಡು ಸೀಮೆಯಿಂದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳ ಸಹಾಯದಿಂದ ಕರೆದುಕೊಂಡು ಬಂದು ಒಂದೊಂದು ಭಾಗಕ್ಕೆ 600 ಒಕ್ಕಲು, 300 ಒಕ್ಕಲು, 60 ಒಕ್ಕಲು, 40 ಒಕ್ಕಲು ಎಂದು ಹೆಸರು ಕೊಟ್ಟು ವಾಸ ಮಾಡಿಸಿದ ಕಾಲದಲ್ಲಿ ಸುಳ್ಯ ಸೀಮೆಯ 6000 ಮನೆಯವರಿಂದ ಆಯ್ಕೆಮಾಡಿ, 10 ಮನೆ ಗೌಡ ಕುಟುಂಬಗಳನ್ನು ಕಾಟೂರು ದಳಪತಿಗಳು 'ಕಲಶಪಳ್ಳಿ' ಎಂದು ಕರೆಯಲ್ಪಡುವ ಕಲ್ಲಪಳ್ಳಿಯಲ್ಲಿ ವಾಸವಿರಿಸಿದರು.

ದೇಹ ಬಲವೂ, ತಿಳುವಳಿಕೆಯೂ ಸಾಕಷ್ಟು ಇದ್ದ ಇವರಿಗೆ ಭೂ ಸಂಪತ್ತನ್ನೂ ಧನಸಂಪತ್ತು, ಮತ್ತು ಇತರ ಸಂಪತ್ತು ಯಥೇಚ್ಛವಾಗಿ ಕೊಟ್ಟಿದ್ದರು. ಕ್ರಮೇಣ ಇವರು ಕಾಟೂರು ದಳಪತಿಗಳ ಇಷ್ಟ ಜನರಾದರು. ತುಳೂರ್‌ವನತ್ ಕೋವಿಲಗಂನ ಹಿರಿಮೆಗೂ, ಭವಿಷ್ಯತ್ತಿಗೂ ಬೇಕಾಗಿ ವಾಸ ಮಾಡಲ್ಪಟ್ಟವರಾದರು. ಭಗವತೀ ದೇವಾಲಯದ ಭೂಮಿಯಾಗಿದ್ದ ಕಲ್ಲಪಳ್ಳಿ ಪ್ರದೇಶವನ್ನು ಈ ಹತ್ತೊಕ್ಕಲು ಜನತೆಗೆ ವಹಿಸಿ ಕೊಡಲಾಯಿತು. ಭಗವತೀ ಕ್ಷೇತ್ರದ ಜಾತ್ರೆಯ ಸಂದರ್ಭದಲ್ಲಿ ತಾವು ಕೆಲಸ ಕಾರ್ಯಗಳಲ್ಲಿ ಸಹಕರಿಸುವುದು ಮಾತ್ರವಲ್ಲದೇ ಪೂರ್ಣಪ್ರಮಾಣದಲ್ಲಿ ತಮ್ಮ ಕೈಯಲ್ಲಾಗುವಷ್ಟು ಧನ ಸಹಾಯವನ್ನು ಇಂದಿಗೂ ಇವರು ಮಾಡುತ್ತಾ ಬಂದಿದ್ದಾರೆ.

ಹಿಂದೆ ಕಾಟೂರ್ ನಾಯರ್ ಕುಟುಂಬದವರು ಸತ್ತರೆ ಕಲ್ಲಪಳ್ಳಿಯ ಗೌಡರಿಗೆ ಸೂತಕ ಇತ್ತು ಎಂಬುದು ಐತಿಹ್ಯ! ತುಳೂರ್ ವನದ ಕ್ಷೇತ್ರದಲ್ಲಿ ಇಂದಿಗೂ ಗೌಡ ಜನತೆ ಪ್ರಮುಖ ಪಾತ್ರವನ್ನು ವಹಿಸಿದೆ.

ಕಾಲಚಕ್ರ ಉರುಳಿದರೂ ಮಂಞಿನಡ್ಕ ಕಾಟೂರಿಗೂ, ಕಲ್ಲಪಳ್ಳಿ ಗೌಡರಿಗೂ ಸುಳ್ಯ ಸೀಮೆಗೂ ಒಂದು ಅವಿನಾಭಾವ ಸಂಬಂಧ ಇಂದಿಗೂ ನೆಲೆನಿಂತಿದೆ. ಗಡಿನಾಡಿನ ಮಣ್ಣಿನ ಮಕ್ಕಳಾದ ಈ ಗೌಡ ಜನತೆಯು ತಮ್ಮ ಪ್ರತೀ ಕೆಲಸ ಕಾರ್ಯಗಳಿಗೂ ಸುಳ್ಯವನ್ನು ಅವಲಂಬಿಸುತ್ತದೆ. ಶೈಕ್ಷಣಿಕ ವಾಣಿಜ್ಯ ಕಾರ್ಯಗಳಿಗೆ ತಮ್ಮ ಮದುವೆ ಸಂಬಂಧಿ ಸಮಾಜಿಕ ಕಟ್ಟು ಪಾಡುಗಳ ಬೆಳೆಸುವಿಕೆ.... ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಗಡಿನಾಡ ಗೌಡರು ಸುಳ್ಯದೊಂದಿಗೆ ಅನನ್ಯವಾದ ಸಂಬಂಧವನ್ನಿರಿಸಿದೆ.

-ಗಂಗಾಧರ ಕಲ್ಲಪಳ್ಳಿ.

ವಿ. ಸೂ. : ಇಂತಹ ವಿವರಗಳು ಸಾಕಷ್ಟು ಬರಲಿ, ಗೌಡರ 18 ಗೋತ್ರಗಳ ಸಾಲಿನಲ್ಲಿ ನಾಯರ್ ಗೋತ್ರವು ಒಂದಾದುದರಿಂದ ಈ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯವಾಗಬೇಕಾಗಿದೆ.

ಕವನ : ಮರಿಬ್ಯಾಡ

ಎಲ್ಲಿಯಾದರು ಇರು ಎಂತಾದರು ಇರು
ನಮ್ಮ ಕುಲದೇವರನ್ನ ಎಂದೂ ಮರೀಬ್ಯಾಡ

ಯಾವ ದೇಶದಲ್ಲೆ ಇರು, ಯಾವ ಈರಿನ ಊರಿನಲ್ಲೆ ಇರು
ನೀನು ಹುಟ್ಟಿದ ಊರನ್ನು ಖಂಡಿತ ಮರಿಬ್ಯಾಡ

ಯಾವ ಭಾಷೆನ ಬೇಕಾದರೂ ಕಲಿ, ಯಾವ ಭಾಷೆನ ಬೇಕಾದರೂ ಆಡು
10 ಕುಟುಂಬ 18 ಗೋತ್ರದ ಅರೆಗನ್ನಡನ ನಿನೇಂದು ಮರಿಬ್ಯಾಡ

ಯಾವುದೆ ಪುಸ್ತಕನ ಕೊಳ್ಳು, ಯಾವುದೆ ಪತ್ರಿಕೆನ ಓದು
ಎಂದೂ ಕೊಡಗು ಸಂಗಾತಿನ ಓದದೆ ಇರಬ್ಯಾಡ

ಎಷ್ಟೇ ತಿನ್ನು ಎಷ್ಟೇ ಕುಡಿ ಎಷ್ಟೇ ಖರ್ಚು ಮಾಡಿದರೂ
ಕೊಡಗು ಸಂಗಾತಿಯ ಬಾಕಿ ಕೊಡಲು ಮರಿಬ್ಯಾಡ

ಎಲ್ಲಿ ಬೇಕಾದರೂ ಹೋಗು, ಯಾರ ಜೊತೆಯಲೇ ಸೇರು
ಗೌಡ ಜನಾಂಗದ ಐಕ್ಯತೆಯ ಸಂಘಟನೆಯನ್ನು ಮರಿಬ್ಯಾಡ

ಏನು ಬೇಕಾದರೂ ತಿಳಿ, ಏನು ಬೇಕಾದರೂ ಹೇಳು
ಕೊಡಗು ಸಂಗಾತಿ ಗೌಡರ ದಾರಿದೀಪ ಮರಿಬ್ಯಾಡ

ಈ ಲೇಖನ ನಿಮ್ಮ ಬುಕ್ಕ್‌ಗೆ ಸೂಟ್ ಆದರೆ
ಸೆಟ್ ಮಾಡಿ ಕೊಡಗ್ ಸಂಗಾತಿಲಿ ಪ್ರಿಂಟ್ ಮಾಡಿ

-ಕಟ್ರತನ ಯಂ ದೇವಯ್ಯ, ಮೂಡಿಗೆರೆ.

ಅಸಾಧ್ಯ ಎನ್ನುವ ಪದ ಇರುವುದು ಮೂರ್ಖರ ಶಬ್ಧಕೋಶದಲ್ಲಿ.

ರಾಮನಗರ ಬಳಿ ಬೆಟ್ಟದಲ್ಲಿ ಶಿಲಾಯುಗ ಅವಶೇಷ ಪತ್ತೆ

ರಾಮನಗರದಿಂದ ಆರು ಕಿ. ಮೀ. ದೂರವಿರುವ ಕೂನಗಲ್ ಬೆಟ್ಟದಲ್ಲಿ ನೂತನ ಶಿಲಾಯುಗದ ಕೆಲ ಅವಶೇಷಗಳು ಪತ್ತೆಯಾಗಿವೆ.

ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ಶ್ರಮದಾನ ನಡೆಸುತ್ತಿದ್ದಾಗ ಸಂಗ್ರಹಿಸಿರುವ ಈ ವಸ್ತುಗಳ ಬಗ್ಗೆ ಬಿ. ಆರ್. ಭಾರತಿ ಹಾಗೂ ಜಿ. ಮನೋಜ್ ಅವರ ಸಹಕಾರದೊಂದಿಗೆ ಪ್ರಾಚ್ಯವಸ್ತು ಸಂಶೋಧಕ ಡಾ. ಎಂ. ಭೈರೇಗೌಡ ವಿವರ ನೀಡಿದ್ದಾರೆ.

ಬೆಟ್ಟದ ಮೇಲಿನ ಅಂಗಡಿಮಾಳ, ಸೇರೆಗಾರರ ಒಡ್ಡು, ಕುಲುಮೆ ಒಡ್ಡುಗಳಲ್ಲಿ ಇತಿಹಾಸಪೂರ್ವ ಕಾಲದ ಶಿಲಾಯುದ್ಧಗಳ ವಸ್ತುಗಳು ಹೇರಳವಾಗಿದ್ದು, ನೂತನ ಶಿಲಾಯುಗದ್ದೆಂದು ಖಚಿತವಾಗಿ ಹೇಳಬಹುದಾದ ಕೈ ಕೊಡಲಿಗಳು, ಕ್ಲೀವರ್ ಪತ್ತೆಯಾಗಿವೆ. ಬೆಟ್ಟದ ಮೇಲೆ ಸ್ವಾಭಾವಿಕ ಗುಹೆ ಇದ್ದು ಕಲ್ಲಿನ ಮನೆ ಇರಬಹುದು ಎಂದು ಊಹಿಸಲಾಗಿದೆ.

ಈ ಪ್ರದೇಶದಲ್ಲಿ ಶಿಲಾಯುಗದ ಬೃಹತ್ ಸಮಾಧಿಗಳು ಕಂಡು ಬಂದಿವೆ. ತೆರೆದಿರುವ ಸಮಾಧಿಗಳಲ್ಲಿ ಮಡಿಕೆಗಳು, ಮಡಿಕೆ ಚೂರುಗಳು ಹೇರಳವಾಗಿ ದೊರೆತಿವೆ. ಈ ಮಡಿಕೆಗಳ ಜತೆಯಲ್ಲಿ ಒಂದು ಬಳೆ ಕೂಡಾ ಪತ್ತೆಯಾಗಿದೆ.

ಇಲ್ಲಿನ ಲೋಹ ಮಿಶ್ರಿತ ಬೆಂದ ಕಪ್ಪುಮಣ್ಣು ಗಮನಿಸಿದರೆ ಸುಸಜ್ಜಿತ ಕುಲುಮೆ ಇತ್ತು ಎಂದು ಹೇಳಬಹುದು. ಬೃಹತ್ ಶಿಲಾಯುಗದ ಸಮಾಧಿಗಳನ್ನು ಮತ್ತು ಕುಲುಮೆಯನ್ನು ಹೋಲಿಸಿ ಅಧ್ಯಯನ ಮಾಡಿದರೆ ಇಲ್ಲಿ ಶಿಲಾಯುಗದ ಆಯುಧಗಳನ್ನು ತಯಾರಿಸುತ್ತಿದ್ದರು ಎಂದು ಊಹಿಸಬಹುದು ಎಂದು ಭೈರೇಗೌಡ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಸಂಗ್ರಹಿಸಿರುವ ಪ್ರಾಚ್ಯ ವಸ್ತುಗಳಲ್ಲಿ ಭಕ್ತ ವಿಗ್ರಹವೂ ಸೇರಿದೆ. ಸುಮಾರು ಮೂರು ಅಂಗುಲ ಎತ್ತರದ ಪುರುಷ ವಿಗ್ರಹ ಇದಾಗಿದ್ದು, ಎರಡು ಕೈಗಳನ್ನು ಜೋಡಿಸಿ ಸಮಭಂಗಿಯಲ್ಲಿ ನಿಂತಿರುವಂತೆ ಕೆತ್ತಲಾಗಿದೆ.

ತಲೆ ಮೇಲೆ ಕಿರೀಟ ಹೋಲುವ ಶಿರಸ್ತ್ರಾಣವಿದೆ. ಮೊಣಕಾಲದವರೆಗೆ ಪಂಚೆ ಧರಿಸಿರುವ ಈ ವಿಗ್ರಹ 8-9 ಶತಮಾನಕ್ಕೆ ಸೇರಿರಬಹುದು ಎನ್ನಲಾಗಿದೆ.

ಶಾತವಾಹನರ ಕಾಲದ ಎಲ್ಲ ಲಕ್ಷಣಗಳನ್ನು ಹೊಂದಿರುವ ವೃತ್ತಾಕಾರದ ನಾಣ್ಯವೊಂದು ಸಿಕ್ಕಿದ್ದು ಒಂದು ಬದಿಯಲ್ಲಿ ಸೂರ್ಯಚಂದ್ರ, ಸರ್ಪದ ಗುರುತುಗಳಿವೆ. ಮತ್ತೊಂದು ಮುಖದಲ್ಲಿ ಅಸ್ಪಷ್ಟ ಚಿತ್ರಗಳು ಕಾಣುವ ಈ ನಾಣ್ಯ ಅರ್ಧ ಅಂಗುಲದಷ್ಟು ಅಗಲವಾಗಿದೆ.

ಶಾತವಾಹನರು, ಗಂಗರು, ನೊಳಂಬರು ಹಾಗೂ ಮೈಸೂರು ಒಡೆಯರು ಈ ಪ್ರದೇಶವನ್ನು ಆಳಿದ್ದರು. ಬೆಟ್ಟದ ಮೇಲೆ ಕೋಟೆಯ ಅವಶೇಷಗಳಿದ್ದು ವೀರಗಲ್ಲುಗಳೂ ಲಭ್ಯವಿದೆ.

ಆದ್ದರಿಂದ ಈ ಕ್ಷೇತ್ರದಲ್ಲಿ ಸರ್ವೇಕ್ಷಣ ಹಾಗೂ ಉತ್ಖನನ ನಡೆಸುವ ಅಗತ್ಯವಿದೆ. ಈ ನೆಲೆಗಲನ್ನು ಗುರುತಿಸಿ ಉತ್ಖನನ ನಡೆಸಿದರೆ ಪೂರ್ವ ಇತಿಹಾಸ ಕಾಲದಿಂದ ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸಕ್ಕೆ ಸಂಬಂಧಿಸಿದ ಸ್ತರಗಳು ಕ್ರಮವಾಗಿ ದೊರೆಯುವ ಸಾಧ್ಯತೆ ಇದೆ ಎಂದು ಭೈರೇಗೌಡರು ತಿಳಿಸಿದ್ದಾರೆ.

- ಸಂಗಾತಿ


ಶವಗಳ ಕಲಾಗಾರ

ತೈಪೆ ದೇಶದ ಕಲಾ ನಿರ್ದೇಶಕ ಸು ಪೊ-ಯುನ್ ಎಂಬಾತ ಶವಗಳ ಕಲಾ ಪ್ರದರ್ಶನ ಏರ್ಪಡಿಸಿದ್ದಾನೆ. ಈ ಪ್ರದರ್ಶನದಲ್ಲಿ ವಿವಿಧ ರೀತಿಯ ಹೆಣಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಈ ಹೆಣಗಳ ಮಾಲೀಕ ಜರ್ಮನಿಯ ವೈದ್ಯ ಗುಂತರ್‌ವಾನ್ ಏಗನ್ಸ್. ಈತ ಮರಣೋತ್ತರ ಪರೀಕ್ಷೆಗಾಗಿ ತನ್ನಲ್ಲಿಗೆ ಬಂದ ಶವಗಳನ್ನು ಸಂಸ್ಕರಿಸಿ ದೊಡ್ಡ ಸಂಗ್ರಹವನ್ನೇ ಮಾಡಿದ್ದಾನೆ. ಕೆಲವರು ಈತನಿಗೆ ಶವಗಳನ್ನು ದೇಣಿಗೆ ನೀಡಿದ್ದಾರೆ.

ಈ ಶವಗಳನ್ನು ಸಂಸ್ಕರಿಸಿ, ಸೂಕ್ಷ್ಮವಾಗಿ ಕೊಯ್ದು, ಶೀತಲೀಕರಿಸಿ, ಕೃತಕ ಬಣ್ಣ, ಪ್ಲಾಸ್ಟಿಕ್ ತುಂಬಿ ಸಿಂಗರಿಸಲಾಗಿದೆಯಂತೆ. ಇದಲ್ಲದೆ ಮೂಳೆಗಳು, ಅಂಗಾಂಗಗಳು ಬಿಡಿ ಬಿಡಿಯಾಗಿ ನೋಡಲು ಲಭ್ಯ. ಲಕ್ಷಾಂತರ ಜನ ಈ ಕಲಾಪೂರ್ಣ ಶವಗಳನ್ನು ನೋಡಿ ಮೆಚ್ಚಿದ್ದಾರಂತೆ. ಸು ಪೊ-ಯುನ್ ಈ ಪ್ರದರ್ಶನವನ್ನು ಏಷ್ಯಾಕ್ಕೆ ತರಲು ಉದ್ದೇಶಿಸಿದ್ದಾನಂತೆ. ಈ ಪ್ರದರ್ಶನವನ್ನು ಕನ್ನಡ ಕವಿಗಳು ನೋಡಿದ್ದರೆ 'ಶವಗಾರವಲ್ಲವಿದು ಕಲೆಯ ಬಲೆಯು" ಎಂದು ಉದ್ಗರಿಸುತ್ತಿದ್ದರೋ ಏನೋ!

ಮಮ್ಮಿ



ಚೀನಾದ ಕ್ಸಿಂಜಿಯಾಂಗ್‌ನ ಜಾಗುನ್‌ಲಕ್ ಪ್ರಾಚೀನ ಗೋರಿಗಳಿಂದ ಕ್ರಿಸ್ತ ಪೂರ್ವ 800 ವರ್ಷಗಳಷ್ಟು ಹಳೆಯದಾದ ಮಗುವಿನ ಮಮ್ಮಿಯನ್ನು ಹೊರ ತೆಗೆಯಲಾಗಿದೆ. ಬೀಜಿಂಗ್‌ನ ರಾಷ್ಟ್ರೀಯ ಇತಿಹಾಸ ವಸ್ತು ಪ್ರದರ್ಶನಾಲಯದಲ್ಲಿ ಇಡಲಾಗಿರುವ ಇದನ್ನು ಮಹಿಳೆಯೊಬ್ಬಳು ಕುತೂಹಲದಿಂದ ವೀಕ್ಷಿಸುತ್ತಿದ್ದಾಳೆ.

- ಸಂಗಾತಿ

ಪ್ರತಿಯೊಬ್ಬ ವ್ಯಕ್ತಿಯೂ ಒಳ್ಳೆಯ ಹಿಂದೂ, ಒಳ್ಳೆಯ ಮುಸ್ಲಿಂ, ಒಳ್ಳೆಯ ಕ್ರಿಶ್ಚಿಯನ್ ಆಗಬೇಕು.

ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಗ್ರಂಥಾಲಯಗಳು ಅತ್ಯುತ್ತಮ ಅಡಿಪಾಯ.

ಖ್ಯಾತ ಕಾದಂಬರಿಕಾರ ಎಸ್. ಎಲ್. ಭೈರಪ್ಪ ನುಡಿ



ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಜನತೆಯಲ್ಲಿನ ಜ್ಞಾನದ ಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಸುಭದ್ರ ರಾಷ್ಟ್ರವೊಂದರ ನಿರ್ಮಾಣಕ್ಕೆ ಅತ್ಯುತ್ತಮ ಅಡಿಪಾಯ ಹಾಕಿದಂತಾಗುತ್ತದೆ ಎಂದು ಹಿರಿಯ ಕಾದಂಬರಿಕಾರ, ಸಾಹಿತಿ ಎಸ್. ಎಲ್. ಭೈರಪ್ಪ ಅವರು ಇತ್ತೀಚೆಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ರಾಮಕ್ಕ ಪದ್ಮಕ್ಕ ಸೇವಾನಿಧಿ, ತಾಳತ್‌ಮನೆ ನೇತಾಜಿ ಯುವಕ ಮಂಡಲಗಳ ಸಂಯುಕ್ತ ಆಶ್ರಯದಲ್ಲಿ ಮಡಿಕೇರಿಯ ಶ್ರೀ ಲಕ್ಷ್ಮೀನರಸಿಂಹ ಕಲ್ಯಾಣ ಮಂಟಪದಲ್ಲಿ ನಡೆದ ಸಾರ್ವಜನಿಕ ಗ್ರಂಥಾಲಯ ಬಳಗ ಪ್ರತಿನಿಧಿಗಳ ಏಳನೆಯ ವಾರ್ಷಿಕ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಮುಂದುವರಿದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಶಿಕ್ಷಣ ಮಟ್ಟಕ್ಕೆ ಹೋಲಿಸಿದರೆ ನಮ್ಮ ದೇಶದ ವಿದ್ಯಾಭ್ಯಾಸದ ಗುಣಮಟ್ಟ ಬಹಳಷ್ಟು ಕೆಳಮಟ್ಟದಲ್ಲಿದೆ ಎಂದು ವಿಷಾದಿಸಿದ ಅವರು, ಉತ್ತಮ ಪುಸ್ತಕಗಳನ್ನು ಓದುವ ಅಭಿರುಚಿ ನಮ್ಮಲ್ಲಿ ಕಾಣದಿರುವದೇ ಇದಕ್ಕೆಲ್ಲಾ ಕಾರಣ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ಟಿ. ವಿ. ಮತ್ತಿತರ ಮನರಂಜನಾ ಮಾಧ್ಯಮಗಳಿಂದ ಪುಸ್ತಕಗಳನ್ನು ಓದುವ ಅಭಿರುಚಿ ಕಡಿಮೆಯಾಗುತ್ತಿದೆ. ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ಪುಸ್ತಕಗಳ ಬಗ್ಗೆ ಮಾಹಿತಿ ನೀಡಬೇಕಾದ ಗುರುಗಳಿಗೆ ಓದುವ ಹವ್ಯಾಸ ಇರುವದಿಲ್ಲ. ರಾಜ್ಯದ ಬಹುತೇಕ ಶಾಲೆ ಹಾಗೂ ಕಾಲೇಜುಗಳಲ್ಲಿ ಗ್ರಂಥಾಲಯಗಳ ಕೊರತೆಯಿದೆ. ಕೆಲವೆಡೆ ಗ್ರಂಥಾಲಯಗಳಿದ್ದರೂ, ಅದರಲ್ಲಿರುವ ಉತ್ತಮ ಪುಸ್ತಕಗಳ ಕುರಿತು ಗ್ರಂಥಪಾಲಕರಿಗಾಗಲಿ, ಉಪನ್ಯಾಸಕರಿಗಾಗಲಿ ಮಾಹಿತಿ ಇರುವುದಿಲ್ಲ. ಇಂತಹವರಿಂದ ವಿದ್ಯಾರ್ಥಿಗಳಿಗೆ ಯಾವ ರೀತಿಯ ಮಾರ್ಗದರ್ಶನ ಲಭಿಸಿತು ಎಂದು ನೊಂದು ನುಡಿದರು.

ಗ್ರಂಥಾಲಯಗಳು ಕೇವಲ ಕಥೆ ಕಾದಂಬರಿಗಳಿಗೆ ಮಾತ್ರ ಮೀಸಲಾಗಿಲ್ಲ. ಕೃಷಿ, ವಿಜ್ಞಾನ, ಸಮಾಜಶಾಸ್ತ್ರ, ಮಾನವ ಶಾಸ್ತ್ರ ಇವೇ ಮುಂತಾದ ವಿಷಯಗಳಿಗೂ ಸಂಬಂಧಪಟ್ಟಂತಹ ಪುಸ್ತಕಗಳೂ ಇಲ್ಲಿ ಲಭ್ಯವಿರಬೇಕು ಎಂದ ಅವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತಮ್ಮ ಬಿಡುವಿನ ವೇಳೆಯಲ್ಲಿ ಸಾಧ್ಯವಾದಷ್ಟು ಉತ್ತಮ ಪುಸ್ತಕಗಳನ್ನು ಓದುವ ಅಭ್ಯಾಸವನ್ನಿರಿಸಿಕೊಳ್ಳಬೇಕು ಎಂದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕೆ ಗುರುಗಳನ್ನು ಅವಲಂಬಿಸಿರುವುದಿಲ್ಲ. ಬದಲಾಗಿ ಗುರುಗಳ ಮಾರ್ಗದರ್ಶನ ಪಡೆದು ಗ್ರಂಥಾಲಯಗಳಲ್ಲಿ ದೊರಕುವ ಪುಸ್ತಕಗಳನ್ನು ಸ್ವ ಅಧ್ಯಯನ ನಡೆಸುವ ಮೂಲಕ ತಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಿರುವದು ಕಂಡು ಬರುತ್ತಿದೆ ಎಂದು ವಿವರಿಸಿದ ಅವರು, ಹಿಂದೆ ಗುರುಕುಲ ಮಾದರಿಯ ಶಿಕ್ಷಣ ವ್ಯವಸ್ಥೆಯಲ್ಲಿ ಈ ರೀತಿಯ ಶಿಕ್ಷಣ ಪದ್ಧತಿ ಭಾರತದಲ್ಲೂ ಪ್ರಚಲಿತದಲ್ಲಿತ್ತು ಎಂದು ನುಡಿದರು.

ಪುಸ್ತಕ ಖರೀದಿಯಲ್ಲಿ ಭ್ರಷ್ಟಾಚಾರ ಎಲ್ಲೆ ಮೀರಿದೆ

ಪ್ರಸ್ತುತ ಸರಕಾರಿ ಸ್ವಾಮ್ಯದ ಬಹುತೇಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಒದಗಿಸುವ ಸಂದರ್ಭ, ಯಾವುದೇ ಪ್ರಯೋಜನಕ್ಕೆ ಬಾರದ ಪುಸ್ತಕಗಳನ್ನು ಖರೀದಿಸುವ ಕೆಟ್ಟ ಸಂಪ್ರದಾಯ ಬೆಳೆದು ಬಂದಿದೆ ಎಂದು ಖ್ಯಾತ ಸಾಹಿತಿ ಎಸ್. ಎಲ್. ಭೈರಪ್ಪ ವಿಷಾದಿಸಿದ್ದಾರೆ. ಇತ್ತೀಚೆಗೆ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ಅವರು, ಆ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಗ್ರಂಥಾಲಯಗಳಿಗೆ ಪುಸ್ತಕ ಖರೀದಿಗೆ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದ್ದರೂ, ಈ ಸಮಿತಿ ತಮ್ಮ ಅಭಿಮಾನಿಗಳ ಪುಸ್ತಕಗಳಿಗೆ ಹೆಚ್ಚಿನ ಒತ್ತು ನೀಡುವುದರಿಂದ ಇದರಲ್ಲಿ ಉತ್ತಮ ಸಾಹಿತಿಗಳಿಗೆ ಸಾಕಷ್ಟು ವಂಚನೆಯಾಗುತ್ತಿದೆ ಎಂದು ಆರೋಪಿಸುತ್ತಾ ಮುಂದುವರಿದು, ಪ್ರಸಕ್ತ ಮಕ್ಕಳಿಗೆ ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವಂತಹ ಮಾತೃಭಾಷೆಯಲ್ಲಿಯೇ ರಚಿತವಾದ ಹಲವಾರು ಉತ್ತಮ ಕೃತಿಗಳಿದ್ದರೂ ಕೂಡ ಪರಭಾಷೆಯ ಕೃತಿಗಳನ್ನು ಬಲಾತ್ಕಾರವಾಗಿ ಅವರ ಮೇಲೆ ಹೇರಲಾಗುತ್ತಿರುವದು ವಿಷಾದನೀಯ ಎಂದರು.

ನೈಜ ಆಸಕ್ತಿಯಿಂದ ಕೂಡಿದ್ದಲ್ಲ

ಬಡ ವ್ಯಕ್ತಿ ಒಪ್ಪೊತ್ತಿನ ಅನ್ನ ಉಂಡರೆ ಆತ ಯೋಗಿಯಲ್ಲ, ಅಂತೆಯೇ ಅಭಾವದಿಂದ ಸೃಷ್ಟಿಯಾಗಿರ ತಕ್ಕಂತಹ ಯಾವುದೇ ಆಸಕ್ತಿಗಳು ನೈಜ ಆಸಕ್ತಿಯಿಂದ ಕೂಡಿದ್ದಲ್ಲ ಎಂದು ಸಮಾರಂಭದಲ್ಲಿ ಉಪಸ್ಥಿತರಿದ್ದ ಮತ್ತೋರ್ವ ಭಾಷಣಕಾರ ಕೆ. ಪಿ. ಬಾಲಸುಬ್ರಹ್ಮಣ್ಯ ಅವರು ಅಭಿಪ್ರಾಯ ಪಟ್ಟರು.

8ನೇ ಪುಟಕ್ಕೆ

ಕಾವೇರಿ ಮ್ಯಾರಥಾನ್ ಸ್ಪರ್ಧೆ : ಜಯದಾಖಲಿಸಿದ ಅಂತರಾಷ್ಟ್ರೀಯ ಪಟು ಚೆಣ್ಣಪ್ಪ



ಭಾಗಮಂಡಲದಲ್ಲಿ ಕಾವೇರಿ ಪದವಿ ಪೂರ್ವ ಕಾಲೇಜಿನ ವತಿಯಿಂದ 25-1-2003 ರಲ್ಲಿ ಏರ್ಪಡಿಸಲಾಗಿದ್ದ ಕೊಡಗು ಕಾವೇರಿ ಮ್ಯಾರಥಾನ್ 2003 ಟ್ರೋಫಿಯನ್ನು ಅಂತರಾಷ್ಟ್ರೀಯ ಮ್ಯಾರಥಾನ್ ಪಟು, ಜಿಲ್ಲೆಯ ಮರಗೋಡುವಿನ ನಿವಾಸಿ ಹೊಸೊಕ್ಲು ಚೆಣ್ಣಪ್ಪ ಅವರು ಪಡೆದುಕೊಂಡರು. ಕೇವಲ 1 ಗಂಟೆ 55 ನಿಮಿಷಗಳಲ್ಲಿ 32 ಕಿ. ಮೀ. ಅಂತರವನ್ನು ಚೆಣ್ಣಪ್ಪ ಅವರು ಕ್ರಮಿಸಿದರು.

ಬೆಳಿಗ್ಗೆ ಕಾಟಕೇರಿಯಿಂದ ಆರಂಭಗೊಂಡ ಪುರುಷರ ಮುಕ್ತ ಮ್ಯಾರಥಾನ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಸುಮಾರು83 ಮಂದಿ ಪಾಲ್ಗೊಂಡಿದ್ದರು. 78 ಮಂದಿ 32 ಕಿ. ಮೀ. ಅಂತರವನ್ನು ಕ್ರಮಿಸಿ, ಗುರಿ ತಲುಪಿದರು. ಐವರು ಸ್ಪರ್ಧಿಗಳು ಅರ್ಧದಿಂದಲೇ ಸ್ಪರ್ಧೆಯಿಂದ ಹೊರಬಂದರು. 2 ಗಂಟೆ 03 ನಿಮಿಷದಲ್ಲಿ ಗುರಿ ಮುಟ್ಟಿದ ಧಾರವಾಡ ಜಿಲ್ಲೆಯ ನಿವಾಸಿ ಬಾಲಕೃಷ್ಣ ಜಿ. ಅವಲಕ್ಕಿ ಅವರು ದ್ವಿತೀಯ ಸ್ಥಾನ ಪಡೆದರು. ಹುಬ್ಬಳ್ಳಿಯ ಟಿ. ಎಂ. ತೋಟಗೇರ್ ಅವರು 2 ಗಂಟೆ 06 ನಿಮಿಷದಲ್ಲಿ ಅಂತರವನ್ನು ಕ್ರಮಿಸಿ, ತೃತೀಯ ಸ್ಥಾನಗಳಿಸಿದರು. 2 ಗಂಟೆ 09 ನಿಮಿಷದಲ್ಲಿ ಕುದುರೆ ಮುಖದ ಬಿ. ಬಾಗಣ್ಣ ಹಾಗೂ 2 ಗಂಟೆ 11 ನಿಮಿಷದಲ್ಲಿ ಮಡಿಕೇರಿ ಪೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ವಿದ್ಯಾರ್ಥಿ ತೇಜಸ್ ಅವರು ಗುರಿ ಮುಟ್ಟಿ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನವನ್ನು ಪಡೆದರು.

ಮಹಿಳೆಯರ ಮುಕ್ತ ಮ್ಯಾರಥಾನ್ ಸ್ಪರ್ಧೆಯಲ್ಲಿ 1 ಗಂಟೆ 31 ನಿಮಿಷದಲ್ಲಿ 20 ಕಿ. ಮೀ. ದೂರವನ್ನು ಕ್ರಮಿಸಿದ ಚೆಂಬುವಿನ ಬಿ. ಬಿ. ಕುಸುಮಾವತಿ ಅವರು ಪ್ರಥಮ ಸ್ಥಾನ ಪಡೆದರು. ಬೆಳಿಗ್ಗೆ ಕಾರುಗುಂದದಿಂದ ಆರಂಭಗೊಂಡ ಸ್ಪರ್ಧೆಯಲ್ಲಿ 19 ಮಂದಿ ಪಾಲ್ಗೊಂಡಿದ್ದರು. 17 ಮಂದಿ ಗುರಿ ಮುಟ್ಟಿಸಿದರು. 1 ಗಂಟೆ 38 ನಿಮಿಷದಲ್ಲಿ ಅಂತರವನ್ನು ಕ್ರಮಿಸಿದ ಮದೆನಾಡುವಿನ ಕೆ. ಡಿ. ಕವಿತ ದ್ವಿತೀಯ ಸ್ಥಾನ ಗಳಿಸಿದರು. ಬೆಟ್ಟತ್ತೂರುವಿನ ಲೀಲಾವತಿ ಅವರು 1 ಗಂಟೆ 41 ನಿಮಿಷದಲ್ಲಿ ಗುರಿ ಮುಟ್ಟಿ ತೃತೀಯ ಸ್ಥಾನ ಪಡೆದರು. ತಿಪಟೂರಿನ ಸುಮ 1 ಗಂಟೆ 41 ನಿಮಿಷ, 42 ಸೆಕೆಂಡಿನಲ್ಲಿ ಹಾಗೂ ಚೇರಂಬಾಣೆಯ ಡಿ. ಜಿ. ಪವಿತ್ರ 1 41 ನಿಮಿಷ, 44 ಸೆಕೆಂಡಿನಲ್ಲಿ ಗುರಿ ಮುಟ್ಟಿ ಕ್ರಮವಾಗಿ ನಾಲ್ಕನೇ ಮತ್ತು ಐದನೇ ಸ್ಥಾನ ಗಳಿಸಿದರು.

ಪ್ರೌಢಶಾಲೆ ಮತ್ತು ಕಾಲೇಜು ಯುವಕರ 4X6 ಕಿ. ಮೀ. ರಿಲೇಯಲ್ಲಿ ಮದೆ ಮಹೇಶ್ವರ ಕಾಲೇಜು ತಂಡಗಳು ಪ್ರಥಮ ಹಾಗೂ ತೃತೀಯ ಸ್ಥಾನ ಪಡೆದರೆ, ಭಾಗಮಂಡಲದ ಕಾವೇರಿ ಕಾಲೇಜಿನ ತಂಡ ದ್ವಿತೀಯ ಸ್ಥಾನ ಪಡೆಯಿತು. 24 ಕಿ. ಮೀ. ದೂರದ ಈ ಸ್ಪಧೆಯು ಬೆಟ್ಟಗೇರಿಯಿಂದ ಆರಂಭಗೊಂಡಿತ್ತು. ಸುಮಾರು 13ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. 20 ಕಿ. ಮೀ. ಅಂತರದ ಯುವತಿಯರ ಸ್ಪರ್ಧೆಯಲ್ಲಿ ಮದೆ ಮಹದೇಶ್ವರ ಕಾಲೇಜು ತಂಡಗಳು ಪ್ರಥಮ ಹಾಗೂ ತೃತೀಯ ಸ್ಥಾನಗಳಿಸಿದರೆ, ಭಾಗಮಂಡಲದ ಕಾವೇರಿ ಕಾಲೇಜು ತಂಡ ದ್ವಿತೀಯ ಸ್ಥಾನ ಪಡೆಯಿತು. ಕಾರುಗುಂದದಿಂದ ಈ ಸ್ಪರ್ಧೆ ಆರಂಭಗೊಂಡಿತು. ಸುಮಾರು 9 ತಂಡಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

ಮಧ್ಯಾಹ್ನ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ ನಡೆಯಿತು. ಸ್ಪರ್ಧೆಯ ಪ್ರಾಯೋಜಕರಾದ, ಮೂಲತಃ ತಲಕಾವೇರಿಯ ನಿವಾಸಿಯಾಗಿದ್ದು, ಪ್ರಸ್ತುತ ಅಮೇರಿಕಾದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಭಾಸ್ಕರ್ ಆಚಾರ್ ಅವರು ವಿಜೇತ ಪುರುಷರಿಗೆ ಟ್ರೋಫಿ ಹಾಗೂ ನಗದನ್ನು ವಿತರಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸ್ಪರ್ಧೆಯ ಪ್ರಾಯೋಜಕರಾದ ಬೆಂಗಳೂರಿನ ಉದ್ಯಮಿ ಟಿಟ್ಟು ಸುಬ್ಬಯ್ಯ ಅವರು, ಮಹಿಳಾ ವಿಜೇತರಿಗೆ, ಜಿಲ್ಲಾಧಿಕಾರಿ ಬಿ. ಎಸ್. ಪಾಲಾಕ್ಷ ಅವರು ವಿಜೇತ ಯುವಕರ ತಂಡಕ್ಕೆ ಹಾಗೂ ಹಿರಿಯ ಮ್ಯಾರಥಾನ್ ಏಷ್ಯಡ್ ಓಟಗಾರ ಹೊಸೂರು ಕೆ. ಸೀತರಾಂ ಅವರು ವಿಜೇತ ಯುವತಿಯರ ತಂಡಕ್ಕೆ ಟ್ರೋಫಿ ಹಾಗೂ ನಗದನ್ನು ವಿತರಿಸಿದರು. ಭಾಗವಹಿಸಿದ ಎಲ್ಲ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ನೀಡಲಾಯಿತು.

ಈ ಸಂದರ್ಭ ಮಾತನಾಡಿದ ಜಿಲ್ಲಾಧಿಕಾರಿ ಬಿ. ಎಸ್. ಪಾಲಾಕ್ಷ ಅವರು, ಸಂಯೋಜಕರ ಕೋರಿಕೆಯಂತೆ ಮಡಿಕೇರಿಯಿಂದ ಭಾಗಮಂಡಲದವರೆಗಿನ ರಸ್ತೆಯನ್ನು 'ಅಧಿಕೃತ ಮ್ಯಾರಾಥಾನ್' ರಸ್ತೆಯಾಗಿ ಘೋಷಿಸಲು ಸಂಬಂಧಿಸಿದವರೊಂದಿಗೆ ವ್ಯವಹರಿಸುವದಾಗಿ ಭರವಸೆಯಿತ್ತರು.

ಟಿಟ್ಟು ಸುಬ್ಬಯ್ಯ ಅವರು ಮಾತನಾಡಿ, ಮ್ಯಾರಾಥಾನ್ ಸ್ಪರ್ಧೆಯನ್ನು ಜೀವಂತವಾಗಿರಿಸಲು ಪ್ರತಿಯೊಬ್ಬರೂ ಪ್ರಾಯೋಜಕರಾಗಬೇಕು. ಪ್ರಚಾರಪಡಿಸಬೇಕು ಎಂದು ಕರೆ ನೀಡಿದರು. ಡಾ. ಭಾಸ್ಕರ್ ಆಚಾರ್ ಅವರು ಮಾತನಾಡಿ, ಮುಂದಿನ ಸಾಲಿನಿಂದ ಪೂರ್ಣ ಮ್ಯಾರಥಾನ್ ಸ್ಪರ್ಧೆ ಏರ್ಪಡಿಸಲಾಗುವದೆಂದರು. ಹಿರಿಯ ಮ್ಯಾರಥಾನ್ ಪಟು ಹಾಗೂ ದಕ್ಷಿಣ ವಲಯ ರೈಲ್ವೇಸ್‌ನ ಹೊಸೂರು ಕೆ. ಸೀತರಾಂ ಅವರು ಈ ಸ್ಪರ್ಧೆಯ ವಿಜೇತರಿಗೆ ಪ್ರತಿವರ್ಷ ಬಹುಮಾನ ವಿತರಿಸಲು ರೂ. 10 ಸಾವಿರ ದಾನ ನೀಡುವದಾಗಿ ಪ್ರಕಟಿಸಿದರು. ಅಧ್ಯಕ್ಷತೆ ವಹಿಸಿದ್ದ ಕಾವೇರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಪಾಣತ್ತಲೆ ವಿಶ್ವನಾಥ್ ಅವರು, ಸ್ಪರ್ಧೆಯ ಯಶಸ್ಸಿಗೆ ಸಹಕರಿಸಿದವರಿಗೆ ಕೃತಜ್ಞತೆ ಅರ್ಪಿಸಿದರು. ಈ ಸಂದರ್ಭ ಭಾಸ್ಕರ್ ಆಚಾರ್ ಅವರು ಅಮೇರಿಕಾದಲ್ಲಿರುವ ಅವರ ಸ್ನೇಹಿತರು ಆರೋಗ್ಯ ಸಂಬಂಧಿಸಿದ

8ನೇ ಪುಟಕ್ಕೆ

'ಚುಂಚಶ್ರೀ' ಪ್ರಶಸ್ತಿ ಪುರಸ್ಕೃತ ಡಾ॥ ಸೂರ್ಯನಾಥ ಕಾಮತ್



ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ತಮ್ಮ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಸಮಾಜದ ವಿವಿಧ ಕ್ಷೇತ್ರ ಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಐವರು ಗಣ್ಯರನ್ನು ಗುರುತಿಸಿ ಅವರಿಗೆ 'ಚುಂಚಶ್ರೀ' ಪ್ರಶಸ್ತಿ ನೀಡಿ ಪುರಸ್ಕರಿಸುತ್ತಾರೆ. ತಲಾ ಇಪ್ಪತ್ತು ಸಾವಿರ ರೂಪಾಯಿ ನಗದು, ಪ್ರಶಸ್ತಿ ಫಲಕವನ್ನೊಂದಿರುವ ಈ ಬಾರಿಯ 'ಚುಂಚಶ್ರೀ' ಪ್ರಶಸ್ತಿಗೆ ಬಾಜನರಾದ ಉನ್ನತ ವ್ಯಕ್ತಿತ್ವವನ್ನು ಹೊಂದಿರುವ ಖ್ಯಾತ ಇತಿಹಾಸ ಸಂಶೋಧಕ ಡಾ॥ ಸೂರ್ಯನಾಥ ಕಾಮತ್ ರ ಜೀವನ ಸೇವೆ ಸಾಧನೆಯ ಕಿರು ಪರಿಚಯ ಇಲ್ಲಿದೆ.

ಸಂಶೋಧನೆ ಹಾಗೂ ಸಾಹಿತ್ಯ ಕೃಷಿಯನ್ನು ಏಕ ಕಾಲದಲ್ಲಿ ನಡೆಸಿಕೊಂಡು ಹೋಗುವುದು ಅತೀವ ಕಷ್ಟ ಸಾಧ್ಯವಾದುದು. ಆದರೂ ಈ ಎರಡರಲ್ಲೂ ಒಳ್ಳೆಯ ಸಾಧನೆ ಮಾಡಿ ಕೀರ್ತಿಗೆ ಬಾಜನರಾದವರು ಡಾ|| ಸೂರ್ಯನಾಥ ಕಾಮತರು.

ಕಾಮತರು ಸಾಹಸಕ್ಕೆ ಹೆಸರಾದ ಸಾರಸ್ವತ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ 1937 ರಲ್ಲಿ ಜನಿಸಿದರು. ಬಂಟ್ವಾಳದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸ ಮಾಡಿದರು. ಮುಂದೆ ಮಂಗಳೂರಿನಲ್ಲಿ ಇಂಟರ್ ಮಿಡಿಯೇಟ್ ಮುಗಿಸಿ ಹೆಚ್ಚಿನ ಓದಿಗಾಗಿ ಧಾರವಾಡಕ್ಕೆ ಹೋದರು. ೧೯೫೯ ರಲ್ಲಿ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಖ್ಯಾತ ಇತಿಹಾಸ ವಿದ್ವಾಂಸಕಾದ ಡಾ|| ಬಿ. ಎ. ಸಾಲೆತ್ತೂರರು ಕಾಮತರ ಗುರು. ಇತಿಹಾಸದಲ್ಲಿ ಆಳವಾಗಿ ಅಧ್ಯಯನ ನಡೆಸಿದ್ದ ಕಾಮತರು ಶಿಕ್ಷಣ ಮುಂದುವರಿಸಿ ಪಿ. ಹೆಚ್. ಡಿ. ಪಡೆಯಬೇಕೆಂದು ನಿರ್ಧರಿಸಿದರು. ಒಮ್ಮೆ ನಿರ್ಧಾರ ಮಾಡಿದ ಮೇಲೆ ಏನೇ ತೊಂದರೆ ಬಂದರೂ ಅದನ್ನು ಸಾಧಿಸುವ ಛಲ ಇವರದು. ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ 'ವಿಜಯನಗರ ಕಾಲದಲ್ಲಿ ತುಳುನಾಡು' ಎಂಬ ವಿಷಯದಲ್ಲಿ ಸಂಶೋಧನೆ ಮಾಡಿ ಪಿ. ಹೆಚ್. ಡಿ. ಪದವಿಯನ್ನುಪಡೆದರು.

ಕಾಮತರಿಗೆ ಚಿಕ್ಕಂದಿನಿಂದಲೇ ಸಾಹಿತ್ಯದ ಮೇಲೆ ಅಪಾರ ಮಮತೆ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುವಾಗಲೇ ಬರವಣಿಗೆ ಯಲ್ಲಿ ತೊಡಗಿದ್ದ ಇವರು ದೊಡ್ಡ ಸಾಹಿತಿ ಯಾಗಬೇಕೆಂಬ ಕನಸನ್ನು ಕಾಣುತ್ತಿದ್ದರು. ಮುಂದೆ ಮಿತ್ರವಾಣಿ ಎಂಬ ಕೈಪತ್ರಿಕೆಗೆ ಸಂಪಾದಕರೂ ಆದರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ 'ಬೆಳಗಿನ ತಾರೆಗಳು' ಎಂಬ ಇವರ ಕಥಾ ಸಂಕಲನ ಇವರಿಗೆ ಒಳ್ಳೆಯ ಹೆಸರು ತಂದಿತು. ಪತ್ರಿಕೋದ್ಯಮ ಇವರನ್ನು ಕೈಬೀಸಿ ಕರೆಯಿತು. ಮುಂಬಯಿಯ ಫ್ರೀಪ್ರೆಸ್ ಜರ್ನಲ್‌ನಲ್ಲಿ ಕೆಲಸ ಮಾಡಿದರಲ್ಲದೆ ಕನ್ನಡ ಮಾಸಿಕ 'ಉತ್ಥಾನ' ಹಾಗೂ 'ಪ್ರಜಾವಾಣಿ' ಪತ್ರಿಕೆಯಲ್ಲಿ ಕೆಲಸ ಮಾಡಿ ಪತ್ರಿಕೋದ್ಯಮಿ ಎನಿಸಿದರು.

ಕಾಮತರು ೧೯೬೮ ರಲ್ಲಿ ಬೆಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಇತಿಹಾಸದ ಉಪನ್ಯಾಸಕರಾಗಿ ಶಿಕ್ಷಕ ವೃತ್ತಿಯನ್ನಾರಂಭಿಸಿದರು. ಮುಂದೆ ಇದೇ ವಿಭಾಗದಲ್ಲಿ ರೀಡರ್ ಆಗಿಯೂ ಸೇವೆ ಸಲ್ಲಿಸಿದರು. ಆಳವಾದ ಪಾಂಡಿತ್ಯ ಪಡೆದಿದ್ದ ಇವರು ವಿದ್ಯಾರ್ಥಿಗಳ ಮೇಲೆ ಅಪಾರ ಪ್ರಭಾವ ಬೀರಿದರು. ಯಾವುದೇ ವೃತ್ತಿಯಲ್ಲಿದ್ದರೂ ಕಾಮತರ ಸಾಹಿತ್ಯ ಕೃಷಿ ನಿರಂತರವಾಗಿ ಸಾಗಿತು. ಥೇಮ್ಸ್‌ನಿಂದ ಗಂಗೆಗೆ, ಕೃಷ್ಣದೇವರಾಯ, ಮುಳ್ಳಿನ ಹಾದಿ, ಈಸಿ ಜಯಿಸಿದರು ಇವು ಕಾಮತರ ಕಾದಂಬರಿಗಳು, 'ಬೆಳಗಿದ ತಾರೆಗಳು' ಇದು ಇವರ ಮೊದಲ ಕಥಾಗುಚ್ಛ ನಂತರ ಕರ್ನಾಟಕ ಇತಿಹಾಸ ಕಥಾ ಮಂಜರಿ, ವಿಜಯನಗರದ ಕಥೆಗಳು ಮೊದಲಾದ ಏಳು ಕಥಾ ಸಂಕಲನಗಲನ್ನು ಬರೆದಿದ್ದಾರೆ. ಸ್ವತಃ ಇತಿಹಾಸಕಾರರಾದ ಇವರು ಕರ್ನಾಟಕದ ಸಂಕ್ಷಿಪ್ತ ಇತಿಹಾಸ ಮೊದಲಾಗಿ ಅನೇಕ ಇತಿಹಾಸ ಕೃತಿಗಳನ್ನು ಹೊರ ತಂದಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಕುರಿತು ಕಾಮತರು ಇಂಗ್ಲಿಷಿನಲ್ಲಿ ಬರೆದಿರುವ ಗ್ರಂಥ ಮೌಲಿಕವಾದ ಕೃತಿ. ಸೂರ್ಯನಾಥ ಕಾಮತರು ಮಧ್ಯಕಾಲೀನ ಮತ್ತು ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ವಿಶೇಷ ಪರಿಣತಿಯನ್ನು ಪಡೆದವರು. ಮೂರು ಸಂಪುಟಗಳ ೮೫೦ ಸ್ವಾತಂತ್ರ್ಯ ಹೋರಾಟಗಾರರ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸುಮಾರು 3200 ಪುಟಗಳನ್ನು ಒಳಗೊಂಡಿದ್ದು ಅತ್ಯಂತ ಉಪಯುಕ್ತವಾದ ಕೃತಿ ಎನಿಸಿದೆ. ಇದು ಕೇವಲ ಹೋರಾಟದ ಕಥೆಯಾಗದೆ ಶತಮಾನದ ಜನ ಜೀವನದ ನಾನಾ ಮುಖಗಳನ್ನು ಪರಿಚಯಿಸುತ್ತದೆ. ಇದಲ್ಲದೆ ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಮೊದಲಾದ ಹಲವಾರು ಕೃತಿಗಳನ್ನೂ ರಚಿಸಿದ್ದಾರೆ.

ಕಾಮತರ ಸೇವಾ ಕ್ಷೇತ್ರ ಬಹುಮುಖವಾದದು. ೧೯೮೧ರಿಂದ ೧೯೯೫ ರ ವರೆಗೆ ರಾಜ್ಯ ಸರ್ಕಾರದ ಕರ್ನಾಟಕ ಗೆಜೆಟೀರ್‌ನಲ್ಲಿ ಮುಖ್ಯ ಸಂಪಾದಕರಾಗಿ ಹಲವಾರು ಗೆಜೆಟೀರ್‌ಗಳನ್ನು ಸಂಪಾದಿಸಿ ಅಮೂಲ್ಯವಾದ ... ಸಲ್ಲಿಸಿದ್ದಾರೆ. ಜೊತೆ ಜೊತೆಗೆ ಕೆಲ ಕಾಲ ...

ಪತ್ರಾಗಾರ ಇಲಾಖೆಯ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ.

ಕಾಮತರು ಬೆಂಗಳೂರಿನ ಮಿಥಿಕ್ ಸೊಸೈಟಿಯ ತ್ರೈಮಾಸಿಕದ ಸಂಪಾದಕರಾಗಿ ೧೯೭೭ರಿಂದಲೂ ಕೆಲಸ ಮಾಡುತ್ತಿರುವವರಲ್ಲದೆ ೧೯೯೩ರಿಂದ ಅದರ ಅಧ್ಯಕ್ಷರಾಗಿಯೂ ಸಾರ್ಥಕವಾದ ಸೇವೆ ಸಲ್ಲಿಸುತ್ತಿದ್ದಾರೆ. ಕಲ್ಕತ್ತಾದ ರಾಜಾರಾಮ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ಅಧ್ಯಕ್ಷ ರಾಗಿಯೂ ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷರಾಗಿಯೂ ದೆಹಲಿಯ ಐಸಿಎಸ್‌ಆರ್‌ನ ಸದಸ್ಯರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಇತಿಹಾಸಕಾರರಾಗಿ, ಸಂಶೋಧಕರಾಗಿ ಸಾಹಿತಿಗಳಾಗಿ ಕಾಮತರು ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ಸಂಪಾದಿಸಿ,ಭಾಷಾಂತರಿಸಿ ಕನ್ನಡ ಸಾರಸ್ವತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಇದಲ್ಲದೆ ಇವರ ಸಂಶೋಧನಾತ್ಮಕ ವಿದ್ವತ್ಪೂರ್ಣ ಲೇಖನಗಳು ಖ್ಯಾತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ದೂರದರ್ಶನದಲ್ಲಿ ಮೂಡಿ ಬಂದ ಒಂದಿಷ್ಟು ಇತಿಹಾಸ ಇವರ ಹೆಸರನ್ನು ಮನೆ ಮಾತಾಗಿಸಿದೆ.

ಶ್ರೀ ಆದಿಚುಂಚನಗಿರಿ ಮಠದ ಆಶ್ರಯದಲ್ಲಿ ಒಕ್ಕಲಿಗರ ಪ್ರಾಚೀನ ಇತಿಹಾಸದ ಐದು ಅಧ್ಯಾಯಗಳನ್ನು ಬರೆದು ಉತ್ತಮ ಕೆಲಸ ಮಾಡಿದ್ದಾರೆ. ಸೂರ್ಯನಾಥ ಕಾಮತರದು ಹೋರಾಟದ ಬದುಕು ಎಂದರೆ ಅತಿಶಯೋಕ್ತಿಯಲ್ಲ. ಯಾವುದೇ ಕಾರ್ಯ ವನ್ನು ಕೈಗೆತ್ತಿಕೊಂಡರೂ ಅದಕ್ಕೆ ಎಷ್ಟೆ ಅಡ್ಡಿ ಆತಂಕಗಳು ಒದಗಿದರೂ ಅದನ್ನು ಪೂರೈಸುವ ಜಾಯಮಾನ ಇವರದು. ಒಂದು ಸಂಸ್ಥೆ ಮಾಡಬೇಕಾದ ಕೆಲಸವನ್ನು ತಾವು ಒಬ್ಬರೇ ನಿರ್ವಹಿಸಿ ಯಶಸ್ವಿಯಾಗಿರುವುದು ಅವರ ಸಾಹಸಕ್ಕೆ ನಿದರ್ಶನ. ಅನೇಕ ಸಂದರ್ಭಗಳಲ್ಲಿ ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಹಿಡಿದ ಕೆಲಸವನ್ನು ಗುರಿಮುಟ್ಟಿಸಿದ್ದಾರೆ. ಇಷ್ಟೆಲ್ಲಾ ಸಾಧನೆ ಮಾಡಿದ್ದರೂ ಅವರದು ಸರಳ ಜೀವನ. ಇವರು ಸಮರ್ಥವಾಗಿ ವಿಷಯವನ್ನು ಪ್ರತಿಪಾದಿಸಬಲ್ಲ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಹೀಗೆ ವೈವಿಧ್ಯಮಯವಾಗಿ ಸೇವೆಸಲ್ಲಿಸಿದ ಕಾಮತರಿಗೆ ಸಂದ ಗೌರವ, ಪ್ರಶಸ್ತಿಗಳು ಹಲವಾರು. ೧೯೭೩ ರಲ್ಲಿ ಇವರ ಕರ್ನಾಟಕದ ಇತಿಹಾಸ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಥಮ ಬಹುಮಾನ, ಜಾನ್ ಫ್ಲೀಟ್-ಜೀವನ ಮತ್ತು ಕಾರ್ಯಎಂಬುದಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಸಂಶೋಧನಾ ಬಹುಮಾನ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವಾರ್ಷಿಕ ಬಹುಮಾನ- ಮೊದಲಾದವುಗಳನ್ನು ಪಡೆದಿದ್ದಾರಲ್ಲದೆ ರಾಜ್ಯ ಸರ್ಕಾರದಿಂದಲೂ ಗೌರವಿಸಲ್ಪಟ್ಟಿದ್ದಾರೆ.

ಕಾಮತರು ಇತಿಹಾಸಕಾರರಾಗಿ, ಸಂಶೋಧಕರಾಗಿ, ಸಾಹಿತಿಗಳಾಗಿ ನಾಡಿಗೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಬಹುಮುಖ ಸೇವೆಯನ್ನು ಗುರುತಿಸಿ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಇವರಿಗೆ 'ಚುಂಚಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

ಕೃಪೆ - ಭೋಗನಂಜಪ್ಪ, ಆದಿಚುಂಚನಗಿರಿ ಪತ್ರಿಕೆ.

ವಿ.ಸೂ : ಸಂಪಾದಕರಾಗಿ ಒಕ್ಕಲಿಗರ ಇತಿಹಾಸ ರಚನೆಯ ಕಾಲದಲ್ಲಿ ಕೊಡಗಿನ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗೌಡರ ಪರಿಚಯವನ್ನು ನೀಡುವಂತೆ ಕೊಡಗು ಸಂಗಾತಿಯನ್ನು **ಡಾ॥ ಸೂರ್ಯನಾಥ ಕಾಮತ್**‌ರವರು ವಿನಂತಿಸಿದ ಪ್ರಕಾರ ಹಲವಾರು ಮಾಹಿತಿಗಳನ್ನು ನೀಡಲಾಗಿತ್ತು.

6ನೇ ಪುಟದಿಂದ

ಕಾರ್ಯಕ್ರಮಕ್ಕಾಗಿ ನೀಡಿದ ರೂ. 12,200 ಮೊತ್ತವನ್ನು ಅಶ್ವಿನಿ ಆಸ್ಪತ್ರೆಯ ಕಾರ್ಯದರ್ಶಿ ಬಿ. ಜಿ. ವಸಂತ್ ಅವರಿಗೆ ಹಸ್ತಾಂತರಿಸಿದರು.

ಬಹುಮಾನ ವಿತರಣೆಗೆ ಮುನ್ನ ಜಿಲ್ಲೆಯ ವಿವಿಧ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸಮಾರಂಭವು ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದ ಆವರಣದಲ್ಲಿ ಜರುಗಿತು. ಈ ಮುನ್ನ ಬೆಳಿಗ್ಗೆ ಪುರುಷರ ಮ್ಯಾರಥಾನ್ ಸ್ಪರ್ಧೆಯನ್ನು ಕಾಟಕೇರಿಯಲ್ಲಿ ಮದೆ ಮಹೇಶ್ವರ ಕಾಲೇಜಿನ ಪ್ರಾಂಶುಪಾಲ ಬಾರಿಯಂಡ ಆರ್. ಜೋಯಪ್ಪ ಅವರು, ಬೆಟ್ಟಗೇರಿಯಲ್ಲಿ ಯುವಕರ ರಿಲೇಯನ್ನು ಬೆಟ್ಟಗೇರಿಯ ಉದಯ ಪ್ರೌಢಶಾಲೆಯ ಅಧ್ಯಕ್ಷ ಎನ್. ಗೋಪಾಲ ಅವರು, ಕಾರುಗುಂದದಲ್ಲಿ ಮಹಿಳೆಯರ ಮ್ಯಾರಥಾನ್ ಸ್ಪರ್ಧೆಯನ್ನು ಗ್ರಾಮಪಂಚಾಯ್ತಿ ಸದಸ್ಯ ಬಿದ್ದಂಡ ಮಧು ಮಾದಪ್ಪ, ಯುವತಿಯರ ರಿಲೇಯನ್ನು ಬೆಳೆಗಾರ ಎನ್. ಡಿ. ಚರ್ಮಣ ಅವರು ಉದ್ಘಾಟಿಸಿದರು.

- ಸಂಗಾತಿ

5ನೇ ಪುಟದಿಂದ

ಗ್ರಾಮೀಣ ಪ್ರದೇಶದಲ್ಲಿ ಬೇರಾವ ಮನರಂಜನೆಗಳಿಗೂ ಅವಕಾಶವಿಲ್ಲದಿದ್ದಂತಹ ಸಂದರ್ಭ, ಗ್ರಂಥಾಲಯವನ್ನು ಆಶ್ರಯಿಸುವ ಮಂದಿ ನಿಜವಾದ ಆಸಕ್ತಿಯಿಂದ ಅಲ್ಲಿಗೆ ಬರುತ್ತಿಲ್ಲ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದ ಅವರು, ನಮ್ಮಲ್ಲಿ ಗ್ರಂಥಾಲಯವಿದೆ ಎಂಬುದು ಮುಖ್ಯವಲ್ಲ, ಬದಲಾಗಿ ಅದು ಎಷ್ಟು ಪ್ರಯೋಜನಕಾರಿಯಾಗಿದೆ ಎಂಬುದು ಮುಖ್ಯ ಎಂದರು. ಮುಂದುವರಿದು, ಪುಸ್ತಕ ಎನ್ನುವದು ಪ್ರದರ್ಶನದ ವಸ್ತುವಲ್ಲ. ಪ್ರಸ್ತುತ ಬಹುತೇಕ ಮಂದಿ ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಆದರೆ ಇದು ಪುಸ್ತಕ ಸಂಸ್ಕೃತಿಯಲ್ಲ. ಬದಲಾಗಿ ಸರಕು ಸಂಸ್ಕೃತಿ ಎಂದು ವಿಶ್ಲೇಷಿಸಿದರು.

ಸಭೆಯಲ್ಲಿ 'ಆಯ್ದ ವ್ಯಕ್ತಿಗೆ ಆಯ್ದ ಪುಸ್ತಕ' ಕುರಿತು ಬಳ್ಳಾರಿಯ ಕುವೆಂಪು ಗ್ರಂಥಾಲಯ ಬಳಗದ ಅಧ್ಯಕ್ಷ ಹುರಕಡ್ಲಿ ಶಿವಕುಮಾರ್, "ಗ್ರಂಥಾಲಯದತ್ತ ಒಂದು ಪಯಣ ಕುರಿತು ಮೈತ್ರಿ ಕಲಾ ಬಳಗದ ನಿರ್ದೇಶಕ ಗಣಪತಿ ಕಂಚೀಪಾಲ, ಸ್ವಾಮಿ ವಿವೇಕಾನಂದ ಕಲಾ ಸಾಹಿತ್ಯ ಬಳಗದ ಅಧ್ಯಕ್ಷ ವನರಾಗ ಶರ್ಮ ಹಾಗೂ 'ಎಲ್ಲರಿಗೂ ಗ್ರಂಥಾಲಯ' ಕುರಿತು ಡಾ. ಕೆ. ಎನ್. ಪ್ರಸಾದ್ ಮಾತನಾಡಿದರು.

- ಸಂಗಾತಿ

ಅವಮಾನ ಹೋಗಲಾಡಿಸಿ, ಅವಕಾಶ ಪಡೆಯಲು ಸಂಘಟನೆ ಸಹಕಾರಿ

ಸುಳ್ಯದಲ್ಲಿ ಗೌಡ ಯುವ ಸಮಾವೇಶ ಉದ್ಘಾಟಿಸಿ ಪರಿಷತ್ ಸಭಾಪತಿ ಬಿ. ಎಲ್. ಶಂಕರ್ ಪ್ರತಿಪಾದನೆ

ಮೂಲತಃ ಕೃಷಿಕರಾಗಿರುವ ನಮ್ಮ ಜನಾಂಗದವರು ಭೂಮಿಯಷ್ಟೇ ಸಹನೆ ಉಳ್ಳವರು. ನಮ್ಮ ಸಹನೆಯನ್ನು ಕೆಲವರು ದೌರ್ಬಲ್ಯ ಎಂದು ತಿಳಿದುಕೊಂಡದ್ದರಿಂದ ಸಮಾಜಕ್ಕೆ ದೊರೆಯಬೇಕಾದ ಮಾನ್ಯತೆ ದೊರೆಯುವಾಗ ತಡವಾಗುತ್ತಿದೆ. ಆದುದರಿಂದ ನಾವು ಜಾಗೃತರಾಗಿ ಸಂಘಟಿತರಾಗುವುದು ಅನಿವಾರ್ಯ. ಅವಮಾನವನ್ನು ಹೋಗಲಾಡಿಸಿ, ಅವಕಾಶಗಳನ್ನು ಪಡೆಯಲು ಸಂಘಟನೆ ಸಹಕಾರಿ ಯಾಗುತ್ತದೆ" ಎಂದು ರಾಜ್ಯ ವಿಧಾನ ಪರಿಷತ್ತಿನ ಸಭಾಪತಿ ಬಿ. ಎಲ್. ಶಂಕರ್ ನುಡಿದಿದ್ದಾರೆ.

ಸುಳ್ಯ ತಾಲ್ಲೂಕು ಗೌಡರ ಯುವ ಸೇವಾ ಸಂಘದ ಆಶ್ರಯದಲ್ಲಿ ಅಭೂತಪೂರ್ವವಾಗಿ ಸಂಘಟಿಸಲ್ಪಟ್ಟ ಗೌಡ ಯುವ ಸಮಾವೇಶವನ್ನು ಫೆ. 2 ರಂದು ಸುಳ್ಯದ ಕೊಡಿಯಾಲ ಬೈಲಿನಲ್ಲಿ ಮಹಾತ್ಮಾ ಗಾಂಧಿ ಮಲ್ನಾಡ್ ಪ್ರೌಢಶಾಲೆಯ ಆವರಣದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸೂರ್ಯ ವಂಸಸ್ಥರಾದ ಇಕ್ಷ್ವಾಕು ಕುಲದವರಾದ ಗಂಗರು, ರಾಷ್ಟ್ರ ಕೂಟರು,ಕದಂಬರು, ಕೆಂಪೇಗೌಡ ವಂಶಸ್ಥರೆಂಬ ಹೆಗ್ಗಳಿಕೆ ಹೊಂದಿದ ಗೌಡ ಜನಾಂಗದವರು ತಮಗಿರುವ ಸವಾಲುಗಳನ್ನು ಎದುರಿಸಿಕೊಂಡು ಸ್ವಸಾಮರ್ಥ್ಯವನ್ನು ವೃದ್ಧಿಸಿಕೊಂಡು ಮತ್ತೊಮ್ಮೆ ಇತಿಹಾಸ ನಿರ್ಮಿಸಲು ಮುಂದಾಗಬೇಕು. ಭೂಮಿಯೊಂದಿಗೆ ಒಡನಾಟ ನಿರ್ಮಿಸಲು ಮುಂದಾಗಬೇಕು. ಭೂಮಿಯೊಂದಿಗೆ ಒಡನಾಟದಿಂದಿರುವ ಇವರಿಗೆ ಸಹನೆ ಭೂಮಿಗಿರುವಷ್ಟೇ ಇದೆ. ಇದನ್ನು ಇವರ ದೌರ್ಬಲ್ಯವೆಂದು ದೂರಿದವರೂ ಇದ್ದಾರೆ. ಅವಮಾನ ಅಸಹನೆ, ಅವಕಾಶ ವಂಚನೆ ಇವೆಲ್ಲವನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಸಮ್ಮೇಳನವು ಸಮಸ್ಯೆಗಳಿಗೆ ಉತ್ತರವಾಗಬೇಕೆಂದು ಬಿ. ಎಲ್. ಶಂಕರ್ ಆಶಿಸಿದರು.

1837 ರಲ್ಲಿ ಈ ದೇಶದ ಸ್ವಾತಂತ್ರ್ಯ ಹೋರಾಟ ಸುಳ್ಯದ ಕೆದಂಬಾಡಿ ರಾಮಗೌಡರ ನೇತೃತ್ವದಲ್ಲಿ ಸುಳ್ಯದ ಮಣ್ಣಿನಲ್ಲಿ ಆರಂಭವಾಯಿತು. ಇವರು ಮಂಗಳೂರಿನಿಂದ ಬ್ರಿಟಿಷರನ್ನು ಓಡಿಸಿ 13 ದಿನಗಳ ಕಾಲ ಮಂಗಳೂರಲ್ಲಿ ಆಡಳಿತ ನಡೆಸಿದ್ದರು. ಅಂದು ಆರಂಭಗೊಂಡ ಸಾಹಸದ ಹಸುವು ಇಂಗಿಲ್ಲ ಎನ್ನುವುದಕ್ಕೆ ಇಂದಿನ ಸಮ್ಮೇಳನವೇ ಸಾಕ್ಷಿ. ತಾಂತ್ರಿಕತೆಯನ್ನು ಅಭಿವೃದ್ಧಿಗೆ ಬಳಸಿಕೊಳ್ಳಲು ನಾವು ಸಮರ್ಥರಿದ್ದೇವೆ ಎಂಬುದನ್ನು ತೋರಿಸುವ ಅವಕಾಶ ಇಂದು ಇಲ್ಲಿ 'ಗೌಡ ವೆಬ್‌ಸೈಟ್' ಆರಂಭಗೊಳ್ಳುವ ಮೂಲಕ ಲಭಿಸಿದೆ. ಸುಳ್ಯದ ಜನತೆ ರಾಷ್ಟ್ರದ ಗಮನವನ್ನು ಸೆಳೆಯುವಂತಹ ಕಾರ್ಯಗಳನ್ನು ಹಿಂದಿನಿಂದಲೂ ಮಾಡುತ್ತಿದ್ದಾರೆ. ಈಗ ಶಿಕ್ಷಣ ರಂಗದಲ್ಲಿ ಕುರುಂಜಿಯವರು ಅದನ್ನು ಮಾಡುತ್ತಿದ್ದಾರೆ." ಎಂದ ಬಿ. ಎಲ್. ಶಂಕರ್"ಪಾಶ್ಚಾತ್ಯ ಸಂಸ್ಕೃತಿ ಹೆಚ್ಚು ವ್ಯಾಪಕಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಜನ ಸಂಸ್ಕೃತಿಯನ್ನು ಕಾಪಾಡಲು ನಾವು ಶ್ರಮಿಸುವುದು ಅಗತ್ಯ" ಎಂದರು.

ಅಶೋಕ್ ಎಡಮಲೆಯವರು ರೂಪಿಸಿದ ಯುವ ಗೌಡ ವೆಬ್‌ಸೈಟನ್ನು ಶಂಕರ್ ಉದ್ಘಾಟಿಸಿದರು.

ಡಿ.ವಿ. ಎಂಪಿ ಯಾಗಲಿ - ದಂಬೆಕೋಡಿ ಆನಂದ

ಬೆಂಗಳೂರಿನ ದ. ಕನ್ನಡ ಮತ್ತು ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ದಂಬೆಕೋಡಿ ಆನಂದರು ಗೌಡ ಯುವ ಸೇವಾ ಸಂಘದ ಸ್ಮರಣ ಸಂಚಿಕೆ "ಬಾಂಧವ್ಯ" ವನ್ನು ಬಿಡುಗಡೆ ಮಾಡಿ ಮಾತನಾಡಿ " ಸಂಘಟನೆ ತುಂಬಾ ಅಗತ್ಯವಾಗಿದೆ. ಕೊಡಗಿನಲ್ಲಿ ವರ್ಷಕ್ಕೊಂದು ಬಾರಿ ನಮ್ಮ ಜಾತಿ ಬಾಂಧವರ ಕ್ರೀಡಾ ಕೂಟಗಳನ್ನು ಆಯೋಜಿಸುತ್ತಿದ್ದು ಇದರಿಂದ ಸಂಘಟನೆ ಹೆಚ್ಚಾಗುತ್ತದೆ. ನಮ್ಮ ಹತ್ತು ಕುಟುಂಬ ಹದಿನೆಂಟು ಗೋತ್ರ ದವರಾದ ಶಾಸಕ ಡಿ. ವಿ. ಸದಾನಂದರನ್ನು ಮುಂದಿನ ಚುನಾವಣೆಯಲ್ಲಿ ಲೋಕಸಭಾ ಸದಸ್ಯರನ್ನಾಗಿಸಬೇಕೆಂದು ತನ್ನ ವೈಯಕ್ತಿಕ ಅಭಿಪ್ರಾಯವನ್ನು" ಸೂಚಿಸಿದರು.

ರಾಮಚಂದ್ರ ಗೌಡ

ಬಂಟಮಲೆ ಪ್ರಕಾಶನ ಹೊರತಂದಿರುವ ಯಶವಂತ ಕುಡೆಕಲ್ಲು ರವರ ಕವನ ಸಂಕಲನ ತೊಂಬರ ಮತ್ತು ಗುತ್ತಿಗಾರಿನಲ್ಲಿ 1995 ರಲ್ಲಿ ನಡೆದ ಪ್ರಥಮ ಗೌಡಗನ್ನಡ ಕವಿಗೋಷ್ಠಿಯ ಪದ್ಯಗಳನ್ನೊಳಗೊಂಡ "ಸಡಗರ" ಪುಸ್ತಕಗಳನ್ನು ಬಿಡುಗಡೆಗೊಳಿಸಿದ ಮುಖ್ಯ ಅತಿಥಿ ವಿಧಾನ ಪರಿಷತ್ ಸದಸ್ಯ ರಾಮಚಂದ್ರ ಗೌಡರು ಮಾತನಾಡಿ "ನಾವು ಬಲವಂತರಾಗಬೇಕು ಶಕ್ತಿಯುತರಾಗಬೇಕು. ಇಲ್ಲದಿದ್ದರೆ ಇನ್ನೊಬ್ಬರನ್ನು ನಮಗೆ ರಕ್ಷಿಸಲು ಆಗುವುದಿಲ್ಲ. ದೇಶ ತನಗೆ ಬೇಕಾದಷ್ಟು ಕೃಷಿ ಉತ್ಪನ್ನಗಳನ್ನು ಬಳಸಿಕೊಂಡು ವಿದೇಶಕ್ಕೆ ರಫ್ತು ಮಾಡುವಷ್ಟರ ಮಟ್ಟಿಗೆ ಸ್ವಾವಲಂಭಿಗಳಾಗಲು ಒಕ್ಕಲಿಗರಾದ ಗೌಡ ಜಾತಿಯವರ ಕೊಡುಗೆಯೇ ಕಾರಣ" ಎಂದರು.

ಡಾ. ಸಿ. ವಿಠಲ್

ಕುರುಂಜಿ ವೆಂಕಟ್ರಮಣ ಗೌಡರನ್ನು ಸನ್ಮಾನಿಸಿ ಮಾತನಾಡಿದ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಾ. ಸಿ. ವಿಠಲ್ "ಒಕ್ಕಲಿಗ ಜನಾಂಗದವರು ದಾನ ಧರ್ಮಗಳಿಗೆ ಹಿಂದಿನಿಂದಲೇ ಹೆಸರುವಾಸಿಯಾದವರು. ನಾವು ಇವತ್ತು ಗುಣಮಟ್ಟದ ಶಿಕ್ಷಣಕ್ಕೆ ಒತ್ತು ಕೊಡಬೇಕು. ಎಲ್ಲರೂ ಡಾಕ್ಟರ್ ಇಂಜಿನಿಯರ್ ಗಳಾಗಲು ಪ್ರಯತ್ನಿಸುವ ಬದಲು ಒಗ್ಗಟ್ಟಾಗಿ ಬೇರೆ ಬೇರೆ ಉದ್ಯೋಗಾವಕಾಶಗಳ ಬಗ್ಗೆ ಚಿಂತಿಸಬೇಕು" ಎಂದರು.

ಸುಳ್ಳಿಗೆ ಸಾವಿರ ದಾರಿ ಸತ್ಯಕ್ಕೆ ಒಂದೇ ದಾರಿ.

ವಿದ್ಯೆಯೇ ಅಭಿವೃದ್ಧಿ - ಕುರುಂಜಿ

ಸಭಾಧ್ಯಕ್ಷತೆ ವಹಿಸಿದ್ದ ಕುರುಂಜಿ ವೆಂಕಟ್ರಮಣ ಗೌಡರು ಮಾತನಾಡಿ "ಯುವ ಶಕ್ತಿ ಏನು ಎಂಬುದು ಇಂದು ಎಲ್ಲರಿಗೂ ಅರ್ಥವಾಗಿದೆ. ಮುಂದಿನ ಅಭಿವೃದ್ಧಿಗೆ ಇದು ತುಂಬಾ ಅಗತ್ಯ. ಶಿಕ್ಷಣ ಅತ್ಯಂತ ಶ್ರೇಷ್ಠವಾದದ್ದು. ಜೀವನದಲ್ಲಿ ಆದಷ್ಟು ಹೆಚ್ಚು ದುಡಿಮೆ ಮಾಡಿ ಖರ್ಚನ್ನು ಕಡಿಮೆ ಮಾಡಿದಾಗ ನಮ್ಮ ಅಭಿವೃದ್ಧಿಯಾಗುತ್ತದೆ" ಎಂದರು.

ಸಮ್ಮೇಳನಕ್ಕಿಂತ ಮೊದಲು ಡಾ. ಕೆ. ವಿ. ರೇಣುಕಾ ಪ್ರಸಾದ್‌ರವರು ರಾಷ್ಟ್ರಧ್ವಜವನ್ನು ಎಂ. ಪಿ. ಉಮೇಶರು ಸಮಾವೇಶ ಧ್ವಜವನ್ನು ಆರೋಹಿಸಿದರು. ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ನಿತ್ಯಾನಂದ ಮುಂಡೋಡಿ ಸ್ವಾಗತಿಸಿ, ಕಾರ್ಯಾಧ್ಯಕ್ಷ ಡಿ. ಬಿ. ಬಾಲಕೃಷ್ಣ ಪ್ರಸ್ತಾವಿಕ ಭಾಷಣ ಮಾಡಿದರು. ಎಸ್. ಆರ್. ಸೂರಯ್ಯ ಸಂದೇಶ ವಾಚನಗೈದರು. ಕೆ. ಆರ್. ಗಂಗಾಧರ್ ವಂದಿಸಿದರು. ಯು. ಸುಬ್ರಾಯ ಗೌಡ ಹಾಗೂ ಕೆ.ಟಿ. ವಿಶ್ವನಾಥ ಕಾರ್ಯಕ್ರಮ ನಿರೂಪಿಸಿದರು.

ಸಾಧಕರಿಗೆ ಸನ್ಮಾನ :

ಯುವ ಸಮಾವೇಶದ ಅಪರಾಹ್ನದ ಕಾರ್ಯಕ್ರಮದಲ್ಲಿ ಗೌಡ ಜನಾಂಗದ ಹಿರಿಯ ಕಿರಿಯ ಸಾಧಕರನ್ನು ಸನ್ಮಾನಿಸಲಾಯಿತು. ಕುರುಂಜಿ ವೆಂಕಟ್ರಮಣ ಗೌಡರು ಸನ್ಮಾನಿಸಿದರು. ಡಾ. ಕೆ. ಚಿನ್ನಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಡಿ. ವಿ. ಸದಾನಂದ ವೇದಿಕೆಯಲ್ಲಿದ್ದರು.

ಸನ್ಮಾನ ಪಡೆದವರು

ಹಿರಿಯ ವಿಭಾಗ : ಪ್ರೊ. ಕೋಡಿ ಕುಶಾಲಪ್ಪ ಗೌಡ (ಸಾಹಿತ್ಯ) ಟಿ. ಜಿ. ಮುಡೂರು (ಸಾಹಿತ್ಯ) ಡಿ. ಜಿ. ನಡ್ಕ (ಜಾನಪದ) ಕೇದಗಡಿ ಗುಡ್ಡಪ್ಪ ಗೌಡ (ಯಕ್ಷಗಾನ) ಎಂ. ಮೀನಾಕ್ಷಿ ಗೌಡ (ಸಮಾಜ ಸೇವೆ) ಡಾ. ಎಂ. ಬಿ. ಆನಂದ (ವೈದ್ಯಕೀಯ).

ಯುವ ವಿಭಾಗ : ಡಿ. ವಿ. ಶಿವರಾಮ (ಆಡಳಿತ) ಡಾ. ಕೆ. ವಿ ಚಿದಾನಂದ (ವೈದ್ಯಕೀಯ) ಯು. ಪಿ. ಜಯಪ್ರಕಾಶ್ (ಜನಪ್ರತಿ ನಿಧಿ), ಕೆ. ವಿ. ವೆಂಕಟ್ರಮಣ (ಇಂಗ್ಲೀಷ್ ಸಾಹಿತ್ಯ) ಮೋಹನ್ ಸೋನಾ (ಕಲೆ) ಎಂ. ಎಸ್. ಗೀತಾ (ನಾಟಕ) ಡಾ. ಡಿ. ಎಸ್. ಶೇಷಪ್ಪ (ವಿಜ್ಞಾನ) ಕೆ. ಸಿ. ಜಯರಾಮ (ಗೃಹ ರಕ್ಷಕ ದಳ) ಎಂ. ಬಿ. ಜಯರಾಮ (ಸಾರ್ವಜನಿಕ ಸಂವಹನ) ಮತ್ತು ಓಂ ಪ್ರಕಾಶ್ (ಆಡಳಿತ)

ಪುರಸ್ಕಾರ ವಿಭಾಗ

ಭರತ್ ಮುಂಡೋಡಿ, ಎಸ್. ಎಂ. ಮನ್ಮಥ, ಧನಂಜಯ ಅಡ್ಪಂಗಾಯ, ಕ್ಯೊಂಗಾಜೆ ರಾಮಕೃಷ್ಣ ಗೌಡ (ಜನಪ್ರತಿ ನಿಧಿಗಳು), ಎಂ. ಬಿ. ಧನಂಜಯ (ಬ್ಯಾಂಕಿಂಗ್), ಡಾ|| ಯು. ಪಿ. ಶಿವಾನಂದ (ಪತ್ರಿಕೋದ್ಯಮ), ಜಾಕೆ ಮಾಧವ ಗೌಡ (ಸಹಕಾರ), ತುಕರಾಮ ಏನೆಕಲ್ಲು (ನಾಟಕ), ಕೊಂಗೋಡಿ ರವೀಂದ್ರನಾಥ (ಶಿಕ್ಷಣ) ಅಡ್ಕಲೆ ಹೊನ್ನಪ್ಪ ಗೌಡ (ಶಿಕ್ಷಣ) ಕುಮಾರಿ ಮೌಲ್ಯ ಬಾಲಾಡಿ (ಸಾಸ್ಕೃತಿಕ), ಸುಬ್ರಹ್ಮಣ್ಯ ಕೊಡಿಯಾಲ (ಕ್ರೀಡೆ), ಕಾರ್ತಿಕ್ ಕೂಜುಗೋಡು (ಕ್ರೀಡೆ, ಬಾಲಕೃಷ್ಣ ಪೊಳಂಜ (ಕ್ರೀಡೆ)

ಗ್ರಾಮೀಣ ಪ್ರತಿಭೆ ವಿಭಾಗ : ಮೋನಪ್ಪ ಮಾಸ್ತರ್ ಸಣ್ಣ ಮನೆ, ಮಡಿಯಾರು ಕೃಷ್ಣಪ್ಪ, ಹೂಯ್ಯ ಗೌಡ ಕಂಜಿಪಿಲಿ ಶ್ರೀಮತಿ ಕೆಂಚಮ್ಮ ಏನೆಕಲ್ಲು (ನಾಟಿ ವೈದ್ಯರು), ಅಂಬೆಕಲ್ಲು ಪದ್ಮಯ್ಯ, ಯಾಪಾರೆ ಕೇಪಣ್ಣ (ಪಾಕ ಶಾಲಿಗರು), ಶಿವಣ್ಣ ಗೌಡ ಕುರುಂಜಿ (ಕಂಬಳ), ರುಕ್ಮಯ್ಯ ಗೌಡ ಮುಪ್ಪೇರ್ಯ (ಗ್ರಾಮೀಣ ವಿದ್ಯುತ್ ತಂತ್ರಜ್ಞ), ಕುಮಾರಿ ಸಹನಾ ಮೂಲೆ ಮಜಲು (ಬಾಲ ಪ್ರತಿಭೆ) ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಡಾಕ್ಟರೇಟ್ ಮಾಡಿದ ಡಾ|| ಶಿವಕುಮಾರ್ ಹೊಸೊಳಿಕೆ, ಡಾ. ದಾಮೋದರ ಗೌಡ ನಾರಾಲು, ಡಾ. ಕೆ. ಜ್ಯೋತಿ ದಾಮೋದರ ಡಾ. ರೇವತಿ ನಂದನ್, ಡಾ|| ಕೆ. ಬಿ. ಪುರುಷೋತ್ತಮ, ಡಾ||ಶಶಿಕುಮಾರ್ ಕೆ. ಸಿ. ಇವರುಗಳನ್ನು ಸನ್ಮಾನಿಸಲಾಯಿತು.

ಸಮ್ಮೇಳನದೆಡೆಗೆ ಹರಿದು ಬಂದ ಜನಸಾಗರ

ಸುಳ್ಯ ನಗರದಿಂದ ಕೊಡಿಯಾಲಬೈಲು ವರೆಗಿನ 2 ಕಿ. ಮೀ. ಉದ್ದದ ರಸ್ತೆಯಲ್ಲಿ ಫೆ. 2 ರಂದು ಬೆಳಿಗ್ಗೆಯಿಂದ ತೊಡಗಿ ವಸ್ತುತಃ ವಾಹನಗಳ ಸಾಲು ಸಾಲೇ ಸಾಗುತ್ತಿದ್ದವು. ಅಗಲ ಕಿರಿದಾದ ರಸ್ತೆಯಲ್ಲಿ ಎರಡು ಸಾಲುಗಳಲ್ಲಿ ಹೋಗಿ ಬರುತ್ತಿದ್ದ ವಾಹನಗಳಿಂದಾಗಿ ರಸ್ತೆ ಆಗಾಗ ಬ್ಲಾಕ್ ಆಗುತ್ತಿತ್ತು. ಬೆಳಿಗ್ಗೆಯಿಂದಲೇ ಸಭಾಂಗಣಕ್ಕೆ ಪ್ರವಾಹ ದೋಪಾದಿಯಲ್ಲಿ ಜನ ಹರಿದು ಬರುತ್ತಿದ್ದರು.

10-30 ಕ್ಕೆ ಸರಿಯಾಗಿ ಸಮ್ಮೇಳನದ ಉದ್ಘಾಟನಾ ಸಮಾರಂಭ ಆರಂಭವಾಗುವಾಗ 8 ಸಾವಿರಕ್ಕಿಂತ ಹೆಚ್ಚು ಜನರು ಸಭಾಂಗಣದಲ್ಲಿದ್ದರು. ಉದ್ಘಾಟನಾ ಭಾಷಣದ ವೇಳೆಗೆ ಕಿಕ್ಕಿರಿದು ಜನ ತುಂಬಿ ಸುಮಾರು 12 ಸಾವಿರದ ಸಂಖ್ಯೆಯನ್ನು ದಾಟಿತು.

ಹಳೆಗೇಟಿನ ಶ್ರೀನಿವಾಸ ಮಾಸ್ತರರ ನೇತೃತ್ವದಲ್ಲಿ ಸಭಾ ವೇದಿಕೆಯನ್ನು ಆಕರ್ಷಕವಾಗಿ ಅಲಂಕರಿಸಲಾಗಿತ್ತು. ವೇದಿಕೆಯ ಮುಂಭಾಗದಲ್ಲಿ ಕೃತಕ ಕೊಳ ನಿರ್ಮಿಸಿ ಜಲಪಾತ ಮತ್ತು ಕಾರಂಜಿಯನ್ನು ನಿರ್ಮಿಸಲಾಗಿತ್ತು.

ವೇದಿಕೆಯ ಇಕ್ಕೆಲೆಗಳಲ್ಲಿ ಇರಿಸಿದ್ದ ಅಕ್ಕಿ ಮುಡಿಗಳಲ್ಲಿ ಜೀವಂತ ಪಾರಿವಾಳಗಳನ್ನು ಕುಳ್ಳಿರಿಸಲಾಗಿತ್ತು.

ಸಮ್ಮೇಳನವನ್ನು ಜ್ಯೋತಿ ಬೆಳಗಿಸುವುದರ ಮೂಲಕ ವಲ್ಲದೆ ತೆಂಗು ಮತ್ತು ಕಂಗಿನ ಹಿಂಗಾರ ಅರಳಿಸಿ ಉದ್ಘಾಟನೆ ಮಾಡಲಾಯಿತು.

ಸಮ್ಮೇಳನಕ್ಕೆ ಅತಿಥಿಗಳನ್ನು ಮೆರವಣಿಗೆಯಲ್ಲಿ ಕರೆ ತರಲಾಯಿತು. ಬ್ಯಾಂಡ್ ವಾಲಗ ಮತ್ತು ಪೂರ್ಣ ಕುಂಬ ಸ್ವಾಗತದ ವ್ಯವಸ್ಥೆ ಮಾಡಲಾಗಿತ್ತು.

ಸಭಾಂಗಣದಲ್ಲಿ ಎಂಟು ಕ್ಲೋಸ್ಡ್ ಸರ್ಕ್ಯೂಟ್ ಟಿ.ವಿ.

ಅಳವಡಿಸಿ ಕುಳಿತಲ್ಲಿಯೇ ವೇದಿಕೆಯಲ್ಲಿದ್ದವರನ್ನು ಸ್ಪಷ್ಟವಾಗಿ ಕಾಣುವಂತೆ ಮಾಡಲಾಗಿತ್ತು.

ಆಕರ್ಷಕವಾಗಿ ನಿರ್ಮಿಸಲ್ಪಟ್ಟಿದ್ದ ಸುದ್ದಿ ಮಾಹಿತಿ ಕೇಂದ್ರದ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಅಲ್ಲಿ ಕಂಪ್ಯೂಟರ್‌ನಲ್ಲಿ ತಾಲೂಕಿನ ಸಮಗ್ರ ಮಾಹಿತಿಯ ಪ್ರದರ್ಶನ ವ್ಯವಸ್ಥೆ ಮಾಡಲಾಗಿತ್ತು. ಗೌಡ ವೆಬ್ ಸೈಟ್ ಪ್ರದರ್ಶನವನ್ನು ಕೂಡ ಸುದ್ದಿ ಸೆಂಟರ್ ಸ್ಟಾಲ್‌ನಲ್ಲಿ ಏರ್ಪಡಿಸಲಾಗಿತ್ತು.

ಎ.ಪಿ. ಎಂ. ಸಿ. ಸ್ಟಾಲ್‌ನಲ್ಲಿ ಜನಶ್ರೀ ವಿಮಾ ಯೋಜನೆಯ ಬಗ್ಗೆ ಇತರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯ ಮಾಡಲಾಗಿತ್ತು.

ಗೌಡ ಯುವ ಶಕ್ತಿ ದೊಡ್ಡ ತೋಟ ಇವರು ಉಚಿತವಾಗಿ ಮಜ್ಜಿಗೆ ವಿತರಿಸುತ್ತಿದ್ದರು. ಹಲವಾರು ವಾಣಿಜ್ಯ ಸಂಸ್ಥೆಗಳ ಪ್ರದರ್ಶನ ಮಳಿಗೆಗಳಿದ್ದವು. ಸಭಾಂಗಣದ ಸುತ್ತಲೂ ನಿರ್ಮಿಸಲಾಗಿದ್ದ ಈ ಪ್ರದರ್ಶನ ಮಳಿಗೆಗಳಿಗೆ ಜನ ಮುಗಿಬಿದ್ದು ವೀಕ್ಷಿಸುತ್ತಿದ್ದರು.

ಸಮ್ಮೇಳನ ನಡೆಯುವ ಸ್ಥಳವಾದ ಕೊಡಿಯಾಲ್ ಬೈಲಿಗೆ ಸುಳ್ಯದಿಂದ ಹೋಗುವ ಬರುವ ಜನರ ಅನುಕೂಲಕ್ಕಾಗಿ ಕೆ. ವಿ.ಜಿ. ವಿದ್ಯಾಸಂಸ್ಥೆಯ 2 ಮಿನಿಬಸ್‌ಗಳು ನಿರಂತರವಾಗಿ ಓಡಾಡಿಕೊಂಡಿದ್ದವು.

ಸಮ್ಮೇಳನದ ಸಭಾಂಗಣದ ಸುತ್ತಲೂ ಡ್ರಮ್‌ಗಳನ್ನು ಇರಿಸಿ ಕುಡಿಯುವ ನೀರು ಒದಗಿಸುವ ವ್ಯವಸ್ಥೆ ಮಾಡಲಾಗಿತ್ತು.

ಸಮ್ಮೇಳನದ ಹೊರ ಭಾಗದಲ್ಲಿ ವಿಷ್ಣು ಮೂರ್ತಿ ದೇವಸ್ಥಾನದ ಪಕ್ಕದ ಖಾಲಿ ಸ್ಥಲದಲ್ಲಿ ನಿಲ್ಲಿಸಲ್ಪಟ್ಟ ವಾಹನಗಳ ಸಾಲು ಸಾಲು ಆಕರ್ಷಕವಾಗಿ ಕಾಣುತ್ತಿತ್ತು. ದೊಡ್ಡಣ್ಣ ಬರೆಮೇಲುರವರ ನೇತೃತ್ವದಲ್ಲಿ ಸುವ್ಯವಸ್ಥಿತವಾಗಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು.

ಚಿಕನ್ ಕರಿ - ವೆಜಿಟೇಬಲ್ ಕೂರ್ಮ

12 ಸಾವಿರಕ್ಕೂ ಅಧಿಕ ಜನವಿದ್ದುದರಿಂದ ಮಧ್ಯಾಹ್ನ 12-30 ಕ್ಕೆ ಊಟದ ವ್ಯವಸ್ಥೆ ಆರಂಭಿಸಲಾಯಿತು. ಭೋಜನಕ್ಕೆ ಇಡ್ಲಿ, ಚಿಕನ್ ಕರಿ, ವೆಜಿಟೇಬಲ್ ಕೂರ್ಮ, ಅನ್ನ, ಸಾಂಬಾರು, ಪಲ್ಯ ಮತ್ತು ಮಜ್ಜಿಗೆ ಇತ್ತು. ಊಟಕ್ಕಾಗಿ 10 ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಅದರಲ್ಲಿ ಮೂರು ಕೌಂಟರ್‌ಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿತ್ತು.

- ಸಂಗಾತಿ

ನಗೆ ಹನಿಗಳು :

ಗಿರಿ : ಯಾಕೆರ ಹರಿ ನಿನ್ನ ಹೆಂಣ್‌ನ ಕೈನ ಅಸ್ಪ್ ಗಟ್ಟಿಲಿ ಹಿಡ್ಕೊಂಡೊಳ

ಹರಿ : ನಾನೊಂದ್ ಕೆಲ್ಸ ಹೇಳ್ತೆ

ಗಿರಿ : ಆ ಕೆಲ್ಸಕ್ಕೂ ಹೆಂಣ್‌ನ ಕೈ ಹಿಡ್ಡಕ್ಕು ಎಂಥರ ಸಂಬಂಧ

ಹರಿ : ನೀನ್ ಫಸ್ಟ್ ಕೆಳ್ಗೆ ಬಿದ್ದ ಸೆಟ್ಟ್‌ಗನ ಎತ್ತಿ ದೂರ ಬಿಸಾಕ್

-ಕೊಟ್ಟಕೇರಿಯನ ಉಷಾ, ಬಲಂಬೇರಿ

ಮೇಜರ್ ಜನರಲ್ ಮೂವೇರ ಸಿ. ನಂಜಪ್ಪ ಅವರಿಗೆ ದ್ವಿತೀಯ ಬಾರಿಗೆ ಅತಿ ವಿಶಿಷ್ಟ ಸೇವಾ ಪದಕ ವಿಜೇತ



ಕೊಡಗು ಜಿಲ್ಲೆಯ ಸೇನೆಯ ವಿವಿಧ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿ ಪ್ರಸ್ತುತ ನವದೆಹಲಿಯ ಸೇನಾ ಮುಖ್ಯ ಕೇಂದ್ರದಲ್ಲಿ ನೇಮಕಾತಿ ವಿಭಾಗದ ಹೆಚ್ಚುವರಿ ಮಹಾ ನಿರ್ದೇಶಕರಾಗಿರುವ ಮೇಜರ್ ಜನರಲ್ ಮೂವೇರ ಸಿ. ನಂಜಪ್ಪ ಅವರಿಗೆ ದ್ವಿತೀಯ ಬಾರಿಗೆ ಅತಿ ವಿಶಿಷ್ಟ ಸೇವಾ ಪದಕ ಲಭ್ಯವಾಗಿದೆ.

ಜಿಲ್ಲೆಯ ಬಲ್ಲಮಾವಟಿ ಗ್ರಾಮದ ಮೂವೇರ ಚಿಣ್ಣಪ್ಪ ಅವರ ಪುತ್ರನಾಗಿ 1945 ರಲ್ಲಿ ಜನಿಸಿದ ನಂಜಪ್ಪ ಅವರು 1967 ರಲ್ಲಿ ಭಾರತೀಯ ಸೇನೆ ಸೇರಿದರು. 1971 ರ ಭಾರತ -ಪಾಕ್ ಯುದ್ಧದಲ್ಲಿ ಪಾಲ್ಗೊಂಡು 'ಮೆನ್‌ಶನ್ ಡಿಸ್‌ಪ್ಯಾಚೆಸ್' ಪ್ರಶಸ್ತಿ ಪಡೆದಿದ್ದ ಶ್ರೀಯುತರು 87-88ರ ಅವಧಿಯಲ್ಲಿ ಶ್ರೀಲಂಕಾ ಶಾಂತಿ ಪಾಲನಾ ಪಡೆಯಲ್ಲಿ ಕಾರ್ಯನಿರ್ವಹಿಸಿ 1989 ರಲ್ಲಿ 'ಯುದ್ಧ ಸೇವಾ ಪದಕ' ಪಡೆದಿದ್ದರು.

1995-96 ರ ಸಾಲಿನಲ್ಲಿ ಜಮ್ಮು-ಕಾಶ್ಮೀರದ ಗಡಿ ಪ್ರದೇಶದಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಎಂ. ಸಿ. ನಂಜಪ್ಪ ಅವರ ಸೇವೆಯನ್ನು ಪರಿಗಣಿಸಿ 1998 ಜನವರಿ 26 ರಂದು ಪ್ರಥಮ ಬಾರಿಗೆ 'ಅತಿ ವಿಶಿಷ್ಟ ಸೇವಾ ಪದಕ' ವನ್ನು ಪ್ರಕಟಿಸಲಾಗಿತ್ತು. 1998-2000 ರ ವರೆಗೆ ಕರ್ನಾಟಕ, ಕೇರಳ, ಗೋವಾ ಸೇನಾ ವಲಯದ ನೇಮಕಾತಿ ವಿಭಾಗದ ಉಪ ಮಹಾ ನಿರ್ದೇಶಕರಾಗಿ ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದ ನಂಜಪ್ಪ ಅವರು, 2001 ನೇ ಸಾಲಿನಲ್ಲಿ ಜಮ್ಮು-ಕಾಶ್ಮೀರದಲ್ಲಿ ತೋರಿದ ಅಪ್ರತಿಮ ಸೇವೆಗಾಗಿ ಮೇಜರ್ ಜನರಲ್ ಹುದ್ದೆಗೆ ಬಡ್ತಿ ಪಡೆದಿದ್ದಾರೆ. ಇದೀಗ 2002 ನೇ ಸಾಲಿಗೆ ಮತ್ತೆ 'ಅತಿ ವಿಶಿಷ್ಟ ಸೇವಾಪದಕ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ತಮ್ಮ ಸೇವಾವಧಿಯಲ್ಲಿ 4 ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿರುವ ಕರ್ನಾಟಕದ ಏಕೈಕ ಸೇನಾಧಿಕಾರಿಯಾಗಿರುವ ಮೇಜರ್ ಜನರಲ್ ನಂಜಪ್ಪ ಅವರು 2 ಬಾರಿ ಅತಿ ವಿಶಿಷ್ಟ ಸೇವಾ ಪದಕ ಪಡೆದು ಕೊಡಗಿಗೆ ಕೀರ್ತಿ ತಂದಿದ್ದಾರೆ. ಶ್ರೀಯುತರು ಅತ್ಯುನ್ನತ ಸ್ಥಾನಕ್ಕೆ ಏರಲಿ ಎಂದು ಸಂಗಾತಿ ಶುಭ ಹಾರೈಸುತ್ತದೆ.

- ಸಂಗಾತಿ

ಸಂಗಾತಿಗೆ ಚಂದಾ ಕಳ್ಸಿ ಸಹಕರಿಸಿ.

ಮನುಷ್ಯನಿಂದ ಮನುಷ್ಯ ಹುಟ್ಟುವ ಹಾಗೆ ಪುಸ್ತಕದಿಂದ ಪುಸ್ತಕ ಹುಟ್ಟುತ್ತದೆ.

ದಿನಾಂಕ 2-2-2003 ಸುಳ್ಯಲಿ ತಾಲೂಕು ಮಟ್ಟದ ಗೌಡ ಯುವ ಸಮಾವೇಷ ನಡ್ತ್.

ಆಗ ಸಡಗರ ಪುಸ್ತಕ ಬಿಡುಗಡೆ ಆತ್ - ಆ ಪುಸ್ತಕದ ಸಂಪಾದಕನ ಮಾತ್.

ನಾವುಗೆ ನಮ್ಮದೇ ಆದ ಭಾಷೆ ಉಟ್ಟು. ನಾವು ನಮ್ಮ ಭಾಷೆಗಾಗಿ ಎಂದೂ ತಲೆ ಕೆಡ್ಸಿಕಂಡವ್ವೇ ಅಲ್ಲ. ಅದರ ಕಲ್ಯೇಕೆ ಬೇಕಾಗಿ ಯಾವ ಶಾಲೆಗೂ ಹೋತ್ಲೆ. ಯಾರ ಹಕ್ಕಲೇನೂ ಹೋಗಿ ನಂಗೆ ಅದರ ಕಲ್ಸಿಕೊಡಿಂತ ದಮ್ಮಯ್ಯಾ ಹಾಕಿತ್ಲೆ. ನಾವುಗೆ ಅದೇ ಭಾಷೆ ಬೇಕೂಂತ ಹಟ ಹಿಡ್ದ್ ಈ ಭೂಮಿಗೆ ಬಾತ್ಲೆ. ಆದರೆ ನಾವು ಬೆಳ್ಕಂಡ್ ಬಂದಾಂಗೆ ಅದ್ ನಮ್ಮೊಟ್ಟಿಗೆ ಬಂದುಟು. ನಮ್ಮ ಎಲ್ಲಾ ಕೆಲ್ಸನ ಸರ್ಯಾಗಿ ಮಾಡಿಕೊಟ್ಟುತು. ಇಂದ್ ನಮ್ಮ ಕೆಲ್ಸಕೇ ನೀ ಅಗತ್ಯ ಇಲ್ಲೇಂತ ಹೇಳುವಷ್ಟು ಕೃತಘ್ನರಾಗುವ ಅಗತ್ಯನೂ ಇಲ್ಲೇ. ಅಲ್ದೆ ನಮ್ಮ ಭಾಷೆ ಬಗ್ಗೆ ನಮ್ಮಲ್ಲಿ ವ್ಯಾಮೋಹ ಬೇಕೂಂತಲೂ ನನ್ನ ಅಭಿಪ್ರಾಯ ಅಲ್ಲ. ನಾವುಗೆ ನಮ್ಮವರ ಬಗ್ಗೆ ನಮ್ಮ ಭಾಷೆ, ಸಂಸ್ಕೃತಿ, ಒಳ್ಳೆ ಪರಂಪರೆ ಬಗ್ಗೆ ಅಭಿಯಾನ, ಪ್ರೀತಿ ಇದ್ದರೆ ಸಾಕ್, ಅದೇ ನಮ್ಮೊಳಗೆ ಇರುವ ಶಕ್ತಿ. ಅದೇ ನಮ್ಮ ಆಸ್ತಿ.

ಇಂದ್ ಭಾಷೆ ಬಗ್ಗೆ ಬಾರಿ ಚರ್ಚೆ, ವಿವಾದ, ತಕರಾರ್ ನಡೀತಾ ಉಟ್ಟು. ಎಲ್ಲವೂಕೂ ಅವರವರ ಬಾಸೆ ದೊಡ್ಡದ್, ಹಂಗಾಗಿ ನಾವ್ಗೆ ನಮ್ಮ ಬಾಸೆನೇ ದೊಡ್ಡದ್‌ತ ನನ್ನ ಅಭಿಪ್ರಾಯ ಅಲ್ಲ. ಹಂಗಾಗಿ ಬಾಸೆ ಬಗ್ಗೆ ನಮ್ಮವರಲ್ಲಿ ನಾ ಕಂಡ್‌ಕಂಡ ಕೆಲವು ವಿಚಾರನ ದಾಖ್ಲೆ ಮಾಡುವ ಪ್ರಯತ್ನ ಇದ್.

ತುಳು ಭಾಷೆ ಗೌಡ್ರ ಬಂಜ :

ನಮ್ಮವರ ಪೈಕಿ, ಮಂಡೆಕೋಲುಂದ, ಜಾಲ್ಸೂರು, ಕನಕಮಜಲು, ಐವರ್ನಾಡು, ಬೆಳ್ಳಾರೆ, ಎಣ್ಮೂರು, ಎಡಮಂಗ್ಲ, ಪಂಜ, ಕೇನ್ಯ ಬಳ್ಪದವರೆಗೆ, ಅಂದರೆ ಪುತ್ತೂರು ತಾಲೂಕು ಗಡಿ ಕರೆನ ಪ್ರದೇಶಲಿರುವ ಗೌಡ್‌ಗ ತುಳು ಮಾತಾಡೊವು. ಆ ಊರ್‌ಗಳೇ ತುಳು ಪ್ರದೇಶವಾಗಿರುವ ಕಾರಣ, ಮತ್ತೆ ಅಲ್ಲಿರುವ ಬಂಟ್ರ್, ಬಿಲ್ಲೊವು, ದಲಿತ್‌ರ ಮನೆ ಬಾಸೆನೂ ತುಳುವೇ ಆಗಿರುವ ಕಾರಣ ಗಟ್ಟಂದ ಇಳ್ದ್ ಬಂದ ಗೌಡ್ರೂ ಅಲ್ಲಿಗೆ ಹೊಂದಿಕಂಡ್ ತುಳು ಮಾತಾಡಿಕೆ ಸುರು ಮಾಡ್ದೋಂತ ಗೊತ್ತಾಗ್ತಾ ಉಟ್ಟು. ತುಳು ಮಾತಾಡುವುಕೆ ಶಾಲೆ ಕನ್ನಡ ಮಾತಾಡ್‌ಕನ ಕೆಲವು ಉಚ್ಚಾರ ದೋಷ ಅದೆಂತ ಅವುಕೆ ಗೊತ್ತಾತ್. ಉದಾಹರಣೆಗೆ 'ಳು'ಗೆ 'ಲು' ಉಚ್ಚಾರ ಮಾಡಿವೆ. ಈಗ ಅಪಾರ್ಥ ಆದೆ. ಕೇಳ್ದ ಜನ ನೆಗಾಡಿವೆ. ಜನ ನಮ್ಮ ಹಲ್ಕಿ ಮಾಡ್ದಾಂತ ಹೇಳಿ ಬೇಜಾರ ಹುಟ್ಟಿಕೆ ಸುರಾತ್. ಈ ಮೇಲೆ ಹೇಳ್ದ ಉದಾಹರಣೆ ತೆಲುಗು ಮಾತಾಡೊವರಲ್ಲೂ ನಾವು ಕಾಂಬಕೆ ಸಾಧ್ಯ ಉಟ್ಟು. ತೆಲುಗಿನವು ಕನ್ನಡ ಮಾತಾಡಿರೆನೂ ಹೀಂಗೆ ಮಾತಾಡಿವೆ. ತುಳು, ಕನ್ನಡ, ತೆಲುಗು, ಮಲ್ಯಾಳ, ತಮಿಳು, ದ್ರಾವಿಡ ಬಾಸೆಗ, ಒಂದೇ ಮೂಲದವು. ಒಂದೇ ಮನೆಗೆ ಸೆರ್ದವೂಂತ ತಿಳ್ದವೇ ಹೇಳಿವೆ. ಆದರೆ ತುಳುಗೆ ಲಿಪಿ ಇಲ್ಲೆ. ಅದರ 'ಡಯಲೆಕ್ಟ್‌ಂತ' ಹೇಳಿವೆ. ಹಾಂಗೆನೇ ಅರೆಗನ್ನಡ ಕೂಡಾ ಒಂದು 'ಡಯಾಲೆಕ್ಟ್'. ನಮ್ಮ ಬಾಸೆಗನೂ ಪ್ರತ್ಯೇಕ ಲಿಪಿ ಇಲ್ಲೆ. ಇದ್ ಕನ್ನಡನೇ ಆದರೂ ನಮ್ಮ ಸಾಲೆ ಕನ್ನಡಲಿ ಇದರ ಬರೆಕನ ಬಾರಿ ಬಂಜ ಆದೆ. ಕೆಲವು ಬರ್‍ಯಕೆ ಒಷ್ಯ ಬಂಜ ಆದೆ. ಹಾಂಗೆನೇ ಓದಿ ಓದಿ ರೂಢಿ ಆದಮೇಲೆ ಬಂಜ ಆಕಿಲೆ. ಈ ರೀತಿಲಿ ತುಳು ಗೌಡ್ರುಗಳಿಗೆ ಅವರದ್ದೇ ಬಾಸೆನ ಬಗ್ಗೆ ಅಭಿಮಾನ ಕಮ್ಯಾತ್. ಶಾಲೆ ಕನ್ನಡ ಮಾತಾಡಿಕೆ ಸುರು ಮಾಡ್ಯೊಳ.

ತುಳು ಗೌಡ್ರುಗ ಬೇಕುಂತಲೇ ಬಾಸೆನ ಬುಟ್ಟೊಳೊ. ಈ ಬೆಳವಣಿಗೆ ಆದ್ದ್ ತೀರಾ ಇತ್ತೀಚೆಗೆ. ಅಂದರೆ ಮಕ್ಕ ಸಾಲೆಗೆ ಹೋಕೆ ಸುರಾದ ಮೇಲೆ. ಮತ್ತೆ ಅವರಲ್ಲಿ ಕೆಲವು ಪೇಟೆಕರೆನ ಕೆಲ್ಸ ಮಾಡಿಕೆ ಸುರು ಮಾಡ್ದ ಮೇಲೆ ಅದಕ್ಕಿಂತ ಹಿಂದೆ ತುಳು ಬಾಸೆ, ಮನೆ ಬಾಸೆ ಅವುಕೆ ಒಂದು ಸಮಸ್ಯೆ ಆಗಿ ಕಂಡಿತ್ಲೇಂತ ಹೇಳಕಾದ್ದೆ. ಹಾಂಗಾಗಿ ಮನೆಂದ ಹೊರಗೆ ಹೋಗಿ ನೌಕರಿ ಚಾಕ್ರಿ ಮಾಡಿಕೆ ಸುರು ಮಾಡ್ದವ್ ಹೊರಗೆಂದ ಹೊರಗೆ ಮನೆ ಮಾಡಿಕಂಡ್, ಅವರ ಮಕ್ಕಳೊಟ್ಟಿಗೆ ಸಾಲೆ ಕನ್ನಡ ಮಾತಾಡಿಕೆ ಸುರು ಮಾಡ್ದೊ. ಯಾಕೆಂತೇಳಿರೆ ಸಾಲೆಗಳಲ್ಲಿ ಅವುಕೆ ಆದ ಅವಮಾನ ಅವರ ಮಕ್ಕಳಿಗೂ ಆದ್ ಬೇಡಂತಳೇ ಎಂತ ಹೇಳೊಕಾದ್ದೆ. ಇವು ರಜೆಲಿ ಮನೆಗೆ ಬಂದ್ ಮನೆವರೊಟ್ಟಿಗೆ ಮಾತಾಡ್ಕನ ಬರಿ ರಗಳೆ ಕಂಡದೆ. ಯಾರೋ ಬೇರೆ ಜಾತಿಯವು ನಮ್ಮ ಮನೆ ಒಳಗಿದ್ದಾಂಗೆ. ಕೆಲವು ಸರ್ತಿ ಏನಾದ್ದೆಂತ ಹೇಳಿರೆ ಅರೆಬಾಸೆ ಮಾತಾಡುವ ಕಡೆಂದ ಹೆಣ್ಣ್ ತಂದರೆ (ಉದ್ಯೋಗಲಿರುವ ತುಳು ಗೌಡ್ರು) ಒಬ್ಬಂಗೆ ತುಳು ಬಾದುಲೆ ಮತ್ತೊಬ್ಬಂಗೆ ಅರೆಬಾಸೆ ಬಾದುಲೆ. ಹಾಂಗೆ ಆಕನ ಈ ಶಾಲೆ ಬಾಸೆಲಿ ಮಾತ್ನಾಡ್ದ ಇಬ್ಬೊರಿಗೂ ಅನುಕೂಲ ಆಗಿದ್ದದೆ. ಆಚಾರಕ್ಕೂ ಆತ್ ನೀತಿಗೂ ಆತ್! ಅವರ ಮನ್ಸ್‌ಲಿ ನಾವು ಉಳ್ದವರ್‌ಗಿಂತ ಮೇಲೆಯೊಳೊ ಭಾವನೆ ಬಾಕೆ ಸುರಾತ್. ಆಗ ಇದೊಂದು ಅಂತಸ್ತ್‌ನ ಪ್ರಶ್ನೆ ಆಕೆ ಸುರಾತ್.

ಈ ಸಂಗತಿ ತುಳು ಗೌಡ್ರಿಗೆ ಮಾತ್ರ ಇರದೆ ಅರೆ ಬಾಸೆ ಮಾತಾಡುವ ಕೆಲವು ಮನೆಗಳ್ಳು ಕಾಣಕ್. ಸುರು ಸುರುಲಿ ಮಾಸ್ಟ್ರಾದ ನಮ್ಮವರ ಮನೇಲಿ ಸಾಲೆ ಬಾಸೆ ಮಾತಾಡಿಕೆ ಸುರು ಆಗಿತ್ತ್. ಈಗ ಇಂಗ್ಲೀಷ್ ಮೀಡಿಯಂ ಸಾಲೆಗೆ ಮಕ್ಕಳ ಕಳ್ಸವವರಲ್ಲು ಒಂದು ರೀತಿಯ 'ಸುಪಿಯಾರಿಟಿ ಕಾಂಪ್ಲೆಕ್ಸ್' ಇದ್ದ ಹಾಂಗೆ ಸಾಲೆ ಕನ್ನಡ ಮಾತಾಡಿರೆ ಅದೊಂದು ಮೇಲ್ಮಟ್ಟದ ಸಂಗ್ತಿಂತ ಅನ್ಸಿಕೆ ಸುರಾಗಿತ್ತ್.

ಇಂಗ್ಲೀಷ್ ಸಾಲೆ ಮತ್ತು ಅದರ ರಗಳೆ :

ಇಂಗ್ಲೀಷ್ ನಾವುಗೆ ಬೇಕು. ನಮ್ಮ ಮಕ್ಕ ಇಂಗ್ಲೀಷ್ ಕಲ್ಯೊಕು. ಯಾಕೆಂತ ಹೇಳಿರೆ ನಮ್ಮ ಮಕ್ಕ ಇನ್ನ್ ಮುಂದೆ ಜಾಗತಿಕ ಮಟ್ಟಲಿ ಸ್ಪರ್ಧೆ ಎದುರ್‍ಸೊಕಾದೆ. ಮನೆ ಒಳಗೆ, ಊರೊಳಗೆ ಮಾತ್ರ ವ್ಯವಹಾರ ಮಾಡಿ ಬೊದ್ಕಿಕಾದುಲೆ.

ಮದುವೆ ದರ್ಪದ ಆಳ್ವಿಕೆಯಲ್ಲ. ಹೃದಯದ ಮಿಡಿತ.

ಕಂಪ್ಯೂಟರ್ ಮನೆ ಅಂಗಳಕೆ ಬಂದುಟು. ನಾವುಗೆ ಬೇಕಾದೊವು ಬೇರೆ ಯಾವುದೋ ದೇಶಲಿ ಇರುವೊ, ಅವರೊಟ್ಟಿಗೆ ನಮ್ಮ ಮಕ್ಕ ವ್ಯವಹಾರ ಮಾಡೊಕು. ಹಾಂಗಾಗಿ ಬಾಸೆ ಬೇಕಾದು ವ್ಯವಹಾರಕ್ಕಾಗಿ ಮಾತ್ರ. 'ಇಂಗ್ಲೀಷ್ ಕಲಿ, ಕನ್ನಡಲಿ ಕಲಿ', ಅಂತ ಅನಂತಮೂರ್ತಿ ಹೇಳ್ದ ಹಾಂಗೆ. ನಾವು ಅರೆಬಾಸೆ ಗೌಡ್ರುಗ ಇಂಗ್ಲೀಷ್‌ನ ಮತ್ತೆ ಕನ್ನಡಲಿ ಕಲಿ, ಆದರೆ ಅರೆಗನ್ನಡಲಿ ಕಲಿ ಅಂತ ಹೇಳೊಕಾದೆ.

ಇಂಗ್ಲೀಷ್ ಸಾಲೆಗ ಅಣ್ಬನಾಂಗೆ ಹುಟ್ಟಾ ಒಳೊ. ಪೇಟೆಲಿ ಜಾಸ್ತಿ. ಈಗೀಗ ಹಳ್ಳಿಲಿ ಕೂಡಾ. ಯಾವುದೇ ದೇಶದ ಬಾಸೆ, ಯಾರ್‍ದೊ ಮನೆದ್ದ್, ನಾಲ್ಕ್ ಶಬ್ಧ ನಮ್ಮ ಮಕ್ಕಳ ಬಾಯಿಂದ ಬಿದ್ದರೆ ಜೀವನ ಸಾರ್ಥಕ ಆತ್ತ ನಂಬುವ ಜನ ಇಂದೊಳೊ. ಇದ್ ಸೆರೆಕಾಂಬೊದುಲೆ. ಇಂಗ್ಲೀಷ್‌ಲಿ ಕಲ್ಯೋದು ಸಬ್ದಗಳ ಮಾತ್ರ; ಬಾಸೆ ಅಲ್ಲ. ಬಾಸೆಂತೇಳ್ರೆ ಅದರ್‌ಲಿ ನಮ್ಮ ಒಳಗೆ ಹುಟ್ಟುವ ಎಲ್ಲಾ ಅನ್ನಿಕೆಗಳನೂ ಶಬ್ದಲಿ ಹೇಳಿಕೆ ಗೊತ್ತುಬೇಕು. ಇಂಗ್ಲೀಷ್ ಎಷ್ಟೇ ಕಲ್ತರೂ ಕಾಗದ ಬರ್‍ಯಕ್, ಪಟ್ಟಿ ಮಾಡಕ್, ಆದರೆ ಪದ್ಯ ಬರೆಕೆ, ಕತೆ ಬರ್‍ಯೆಕೆ ಆದುಲೆ. ನಮ್ಮ ದೇಶಲಿ ಲಾಯ್ಕ್ ಇಂಗ್ಲೀಸ್ ಮಾತಾಡೊವು ಬೇಕಾದಷ್ಟ್ ಜನ ಒಳೊ. ಆದ್ರೆ ಸಾಹಿತ್ಯ ಸೃಷ್ಟಿ ಮಾಡ್ದೊವು ಬೆರಳ್‌ಲಿ ಲೆಕ್ಕ ಮಾಡುವಷ್ಟ್ ಮಾತ್ರ. ಹಂಗಾರೆ ಬಾಸೆಗೆ ಎಷ್ಟ್ ಮಹತ್ವ ಉಟ್ಟೂಂತ ಗೊತ್ತಾದೆ.

ಬಾಸೆಗೊಂಡು ನೆಲೆ ಉಟ್ಟು. ಆಗ ಮಾತ್ರ ಬೆಲೆ ಉಟ್ಟು. ನಾವು ಇನ್ನೊಬ್ಬನ ಜಾಗಲಿ ಹೋಗಿ ಬರಕ್. ಆದ್ರೆ ಮನೆ ಕಟ್ಟಿ ನಿಲ್ಲಿಕಾದುಲೆ. ನಾವುಗೆ ನಮ್ಮ ಮನೆನೇ ಬೇಡಾಂತ ಹೇಳಿ ತಿರ್‍ಗಿಕಾದುಲೆ. ನಮ್ಮ ನೆಮ್ಮದಿ ನಮ್ಮ ಮನೇಲಿ ಮಾತ್ರ. ಒಂದು ಬಾಸೆ ನಮ್ಮದೂಂತ ಆಕುಂತಾದರೆ ಬಾರಿ ಕಾಲ ಬೇಕಾದೆ. ಅದ್ ನೂರಿನ್ನೂರ್ ವರ್ಸಲಿನೂ ಆದುಲೆ. ಅದ್ ರಕ್ತಲಿ ಹರ್‍ದ್ ಬರುವಂತಹದ್ದ್. ನಾವದರ ಕಾಲ್‌ಲಿ ಒದ್ದರೆ ಅದರಿಂದ ನಾವ್‌ಗೇ ದೋಷ. ಅದ್ ಗೊತ್ತಾಕನ ಬೆಳಗಾದೆ.

ಇಂಗ್ಲೀಸ್‌ನ ಬಗ್ಗೆ ಬೇರೆವು ಹೇಳ್ದ್ ಇಂದ್ ಬೇಕಾದಷ್ಟ್ ಉಟ್ಟು. ಆದರೂ ನಮ್ಮೊವು ಅದರ ಹಿಂದೆ ಬಿದ್ದೊಳೊ. ನಾವು ಬೇರೆ ಬಾಸೆಗಳ ಬಗ್ಗೆ ಹೆಚ್ಚು ಮಂಡೆ ಬೆಚ್ಚ ಮಾಡ್ದಕ್ಕಿಂತ ನಮ್ಮ ಬಾಸೆನ ಬಗ್ಗೆ, ಅದರ ಅಗತ್ಯದ ಬಗ್ಗೆ ಹೆಚ್ಚ್ ತಿಳ್ಕಣೊಕು.

ಮನೆ ಬಾಸೆನ ಬೆಲೆ ಏನ್ ?

ಯಾವುದೇ ಮನೆ ಬಾಸೆ ಇರ್‍ಲಿ. ಆ ಬಾಸೆಗೆ ಅದರದ್ದೇ ಆದ ಬೆಲೆ ಉಟ್ಟು. ಆ ಬಾಸೆ ಮಾತಾಡೊವ್ಕೆ ಅದೇ ಸರಿ. ಮಕ್ಕಳ ಬೆಳವಣಿಗೆ ಮತ್ತೆ ಬಾಸೆ ಸಂಬಂಧದ ಬಗ್ಗೆ ವಿಜ್ಞಾನಿಗ ಈಗ ಕೆಲವು ಬಾರಿ ದೊಡ್ಡ ಸಂಗತಿಗಳ ಹೇಳಿವೆ. ಕೂಸುನ ಬೌದ್ಧಿಕ ವಿಕಾಸ ಅದರ 4 ನೇ ವರ್ಷಕ್ಕೆ ಶೇ. 50% ಮತ್ತೇ 8 ವರ್ಷ ಆಕನ ಶೇ80% ಮತ್ತೆ 18 ವರ್ಷ ಆಕನ ಶೇ 100% ಆದೆಂತ ಹೇಳ್‌ವೆ. ಹಾಂಗಾಗಿ 18 ವರ್ಷದ ಮೇಲೆ ಅದ್ ದೊಡ್ಡದಾತ್. ಮೆದುಳ್‌ನ ಬೆಳವಣಿಗೆ ಕೂಸುವ ಹತ್ತ್‌ನೇ ವರ್ಷಕ್ಕೆ 90% ಮತ್ತೆ 12 ನೇ ವರ್ಷಕ್ಕೆ ಪೂರ್ತಿ ಆದೆ. ಹಾಂಗಾಗಿ ಮಕ್ಕ ಬಾಸೆ, ಬುದ್ಧಿ ಕಲ್ಯೊದು, ಮೆದುಳ್‌ನ ಬೆಳವಣಿಗೆ ಸಣ್ಣದರಲ್ಲೇ ಹೆಚ್ಚಾಗಿ ಆಗಿಹೋಗಿದ್ದದೆ. ಆ ಹೊತ್ತುಲಿ ಕಲ್ತ ಬಾಸೆ ಬಾರೀ ಶಕ್ತಿಶಾಲಿ ಆಗಿದ್ದದೆ.

ಕೂಸುನ ಸೂರೂನ ನಾಲ್ಕು ವರ್ಷದೊಳಗೆ ಬಾಸೆ ಕಲ್ಯೊದು ಒಂದು ಸ್ವಾಭಾವಿಕ ಪ್ರಕ್ರಿಯೆಂತ 'ಟೈಮ್‌ಲೈಫ್' ವರದಿ ಮಾಡ್ದೆ. ಮಕ್ಕ ಅವರ ಸುರೂನ ಆರ್ ತಿಂಗಳ್‌ಲಿ ಎಪ್ಪತ್ತ್ ತರದ ಶಬ್ದ ಹೊರಡ್ಸ್‌ವೆ ಗಡ. ಈ ಬೇರೆ ಬೇರೆ ಎಪ್ಪತ್ತ್ ಶಬ್ದಗಳ ಜೋಡ್ಸಿ ಇಡೀ ಜಗತ್ತ್‌ಲಿ ಇರುವ ಎಲ್ಲಾ ಬಾಸೆಗಳ ಮಾತಾಡಿಕಾದ್ದೆಗಡ. ಮಕ್ಕ ಅವರವರ ಪರಿಸರಲಿ ಇರುವ ಸ್ವರಗಳ ಮತ್ತು ಶಬ್ದಗಳ ಹೆಕ್ಕಂಡ್ ಹೇಳಿಕೆ ಸುರುಮಾಡಿವೆ. ಹಾಂಗಾಗಿ ಮಕ್ಕ ಸೂರೂನ ನಾಲ್ಕು ವರ್ಷದೊಳಗೆ ಯಾವುದೇ ಮತ್ತು ಎಷ್ಟೇ ಬಾಸೆನ ಕೂಡಾ ಕಲ್ತವೆ. ಬಾಸೆ ಕಲ್ಯಕೆ ಅವುಕ್ಕೆ ಯಾವುದೇ ಬಂಜ ಇಲ್ಲೆ. ಈ ಪ್ರಾಯಲಿ ನಮ್ಮ ಮಕ್ಕ ಮನೆ ಬಾಸೆ ಕಲ್ಯೊಕು, ಅದ್ಕೆ ನಾವು ಅವಕಾಶ ಕೊಡುಕು. ಅದರ್‌ಂದ ಲಾಭನೆ ಹೊರತ್ ನಷ್ಟ ಇಲ್ಲೆ.

ನಮ್ಮ ಮಕ್ಕ ನಾಲ್ಕು ವರ್ಷದವರೆಗೆ ಮನೇಲೇ ಇದ್ದವೆ. ಆಗ ಅವು ಆಯ್ಯನ ಒಟ್ಟಿಗೇ ಹಚ್ಚಿರ್‍ದು. ಹಾಂಗಾಗಿ ಅವುಕೆ ಅಯ್ಯೆನ ಬಾಸೆ ಹೆಚ್ಚ್ ಸಿಕ್ಕುದು. ಅದರಿಂದಾಗಿ ಅಯ್ಯನೇ ಸುರುನ ಗುರೂಂತ ತಿಳ್ದವ್ ಹೇಳಿವೆ. ಈ ಹೊತ್ತ್‌ಲಿ ಕಲ್ತ ಬಾಸೆಲಿ ಎಲ್ಲಾ ಸಿಕ್ಕಿದೆ. ಬೆಳ್ದ್ ಬಂದ ಪ್ರದೇಶದ ಕಲೆ, ಸಾಂಸ್ಕೃತಿಕ ಪ್ರಕಾರಗಳು, ವಿಷಯ, ವಸ್ತು ವಿಚಾರ ಸೇರಿಹೋಗಿದ್ದದೆ. ಇದೇ ಕಾರಣಂದಾಗಿ ಗೌಡರ್‌ಗೆ ಅರೆಗನ್ನಡ ಭಾಷೆ ಮನೆ ಬಾಸೆ, ಅದೇ ಅವರ ಶಕ್ತಿ ಕೂಡ.

ಕನ್ನಡಲಿ ಹೇಳಿಕಾಗದರ ಅರೆಬಾಸೆಲಿ ಹೇಳಿಕಾದೆ :

ಮನೆಬಾಸೆ ಹೆಚ್ಚ್ ಸಮರ್ಥವಾಗಿರುವ ಕಾರಣ, ಅದರ್‌ಲಿ ಯಾವುದೇ ಸಂಗತಿನ ವಿವರ್‍ಸಿ ಹೇಳಿಕಾದೆ. ಕನ್ನಡಂತ ಹೇಳಿರೆ ಇಲ್ಲಿ ಸಾಲೆ ಕನ್ನಡ, ಅದ್ ಶಿಷ್ಟ ಬಾಸೆ. ಅದರ್‌ಲಿ ಸಂಸ್ಕೃತಂದ ಬಂದ ಪದಗಳೇ ಹೆಚ್ಚ್. ಮನೆ ಬಾಸೆ ಸರಾಗ ಮಾತಾಡಿಕ್ಕಾದೆ. ಶಾಲೆಲಿ ಮಾತಾಡುವ ಕನ್ನಡಲಿ ಮಾತಾಡಿಕೆ ಹೆಚ್ಚ್ ಅಬ್ಯೆಸ ಮಾಡೋಕಾದೆ. ಗೌಡ್ರ ಬಾಸೆಲಿರುವ ಬೊಯ್ಯಟನ ಕನ್ನಡಲಿ ಹೇಳಿಕ್ಕಾದುಲೆ. ಇದೇ ಊರ್‌ಗೆ ಸೇರ್‍ದ ಪದಗಳ ಮನೆಬಾಸೆಲಿ ಹೇಳಿಕೆ ಸುಲಭ. ಅರೆಗನ್ನಡ ಮಾತಾಡ್ದವಕ್ಕೆ ಸಂಸ್ಕೃತ ಶಬ್ದ ಮಾತಾಡ್ಕನ ಬಂಜ ಅದೆ. ಸಂಸ್ಕೃತ ಶಬ್ಧ ಮಾತಾಡುದು ನಮ್ಮ ಮನೆಲಿ ರೂಢಿಲಿ ಇಲ್ಲೆ. ಬ್ರಿಟಿಷ್‌ನೊವು ಕಿತ್ತೂರು ಚೆನ್ನಮ್ಮನೊಟ್ಟಿಗೆ ಕನ್ನಡ ಮಾತಾಡಿರೂ ಅದ್ ಇಂಗ್ಲೀಷ್ ಹಾಂಗೆ ಕಂಡದೆ ಅದ್ ತಪ್ಪಲ್ಲ. ಅದ್ ಅವನ ವ್ಯವಹಾರ, ಅಷ್ಟರ ಮಟ್ಟಿಗೆ ಅದ್ ಸಾಕ್. ನಮ್ಮ ತಾಲೂಕುನ ಬೇರೆ ಬೇರೆ ಜಾತ್ಯವು ನಮ್ಮ ಬಾಸೆನ ಬಾರಿ ಪೊರ್‍ಲುಲಿ ಮಾತಾಡಿವೆ. ಗಾಂಧಿನಗರದ ಮಾಪುಳೆವು, ಬಟ್ರ್‌ಗ, ದಲಿತರ್‌ಗ, ನಮ್ಮ ಬಾಷೆನ ಮಾತಾಡ್ದೊರ ನೋಡಿಕೆ ನಾವುಗೆ ಆಶ್ಚರ್ಯ ಆದೆ. ಆಗ ಅವರ ಜಾತಿ ನೆನ್ಪುಗೆ ಬಾದುಲೆ.

ಸುಳ್ಯದ ಮಟ್ಟ್‌ಗೆ ಅರೆಬಾಸೆನೇ ರಾಜ ಬಾಸೆ :

ಮನೇಲಿ, ಬಸ್‌ಲಿ, ಆಪೀಸ್, ಅಂಗಡಿಂತ ಹೇಳಿ, ಖಾಸಗಿ ಮತ್ತೆ ಸಾರ್ವಜನಿಕವಾಗಿ ಅರೆಬಾಸೆನೇ ಇಡಿಬಾಸೆ ಆಗಿರುದು ನಾವು ಕಾಣಕ್. ಕಾಲೇಜ್‌ಗಳಲ್ಲಿ ಕ್ಲಾಸ್‌ಲಿ ಪಾಠ ಮಾಡ್ಕನ ಮಾತ್ರ ಸಾಲೆ ಕನ್ನಡ, ಇಂಗ್ಲೀಸ್ ಮಾತ್‌ಕೇಳ್ದೆ. ಜಗಲಿಲಿ ಮಾತಾಡ್ದು ಅರೆಬಾಸೆನೊಳೇ. ಅದ್ ಜಾತಿಗೆ ಸೀಮಿತ ಆಗಿ ಇಲ್ಲೆ. ಅರೆಬಾಸೆಲಿ ಮಾತಾಡಿರೆ ಎಲ್ಲವೊಕೊ ಗೊತ್ತಾದೆ. ಗೌಡ್ರ ಬಾಸೆ ಬೆಳ್ಯೋದರ ಯಾರಿಂದನೂ ತಡ್ಯಕೆ ಬೊತ್ತು. ಸುಳ್ಯಲಿ ರಾಜಾರೋಶವಾಗಿ ಇರುವ ಬಾಸೇಂತ ಹೇಳಿರೆ ಗೌಡ್ರ ಬಾಸೆ. ಒಂದು ವೇಳೆ ಬಾಸೆನ ಆದಾರಲಿ ದೇಶ ಕಟ್ಟುವ ದಿನ ಬಂದರೆ ಸುಳ್ಯಕ್ಕೆ 'ಗೌಡನಾಡ್‌ತ' ಹೆಸರ್ ಬಾಕೆ ಸಾಧ್ಯುಟ್ಟು. ಉಪ ಬಾಸೆಗ ಸಾಯೆಕೆ ಬೊತ್ತು. ಅರೆಗನ್ನಡ ಉಪ ಬಾಸೆ ಅಲ್ಲಾ, ಬಾಸೆ ಸತ್ತರೆ ಆ ಬಾಸೆ ಮಾತಾಡ್ದೊವು ಸತ್ತ ಹಾಂಗೆ. ವಿಷ ತೆಗ್ದ ಹಾವುನ ಹಾಂಗೆ. ಸತ್ವ ಇಲ್ಲದ ಜನಂಗಾದವೆ. ಈಗ ನೋಡಿ ಬ್ರಿಟಿಷರ್ ನಮ್ಮ ದೇಶ ಬುಟ್ಟು ಹೋದರೂ ಅವರ ಹಾಂಗೆ ಇರುವವರ ತಯಾರ್ ಮಾಡ್ಯೇ ಹೋಗೊಳೊ. ಅವರ ಬಾಸೆ, ಅವರ ರೀತಿ ನೀತಿ, ಅವರ ಮೌಲ್ಯಗ ನಮ್ಮ ರಕ್ತದೊಟ್ಟಿಗೇ ಸೇರಿದಾಂಗುಟ್ಟು.

ಬಾಸೆ ಬಗ್ಗೆ ನಮ್ಮವರ ಯೋಚನೆ :

ಗುಟ್ಟಲಿ ಮಾತಾಡಿರೆ ನಮ್ಮ ಬಾಸೆಲಿ ಮಾತಾಡಿವೆ. ಸಾರ್ವಜನಿಕವಾಗಿ ನಮ್ಮದ್ ಸಾಲ್ದ್‌ದ್. ಒಳಯೋಚನೆ ಉಟ್ಟೊಂತ ಗೊತ್ತಾದೆ. ನಮ್ಮೊವರಲ್ಲಿ ಕೆಲವುಕೆ ಸ್ಲೋಕ ಹೇಳಿಕೆ ಆಸೆ ಆದೆ. ಕೆಲವುಕೆ ಬಾಷಣಲಿ ಇಂಗ್‌ಲೀಸ್ ಬೆರ್ಸಿಕೆ ಆಸೆ ಆದೆ. ಆದ್ರೆ ಮನೆ ಬಾಸೆಲಿ ಇರುವ ಗಾದೆ ಮಾತ್ನ ಹೇಳಿಕೆಗಳ ಸೇರ್ಸಿಕನ ಒಂದು ರೀತಿನ ಹಿಂಜರಿಕೆ, ಅಳ್‌ಕ್ ಇದ್ದಾಂಗೆ ಅನ್ಸಿದೆ. ನಮ್ಮ ಸ್ವಾಭಿಮಾನನ ಸಾರ್ವಜನಿಕ ಅಭಿವ್ಯಕ್ತಿಗೆ ಧೈರ್ಯ ಸಾಲ್ದಾಂಗೆ ಕಂಡದೆ. ಅದಕ್ಕಾಗಿನೇ ಕವಿಗೋಷ್ಠಿ ಮಾಡುವ ಆಲೋಚನೆ ಬಂದಿತ್. ಸಂಸ್ಕೃತ ನಮ್ಮ ಬಾಸೆ ಅಲ್ಲ. ನಮ್ಮ ಊರ್‍ನ ಬಾಸೆ ಅಲ್ಲ. ಅದ್ ಸತ್ತುಟೂಂತಲೇ ಲೆಕ್ಕ. ಯಾಕಂತೇಳ್ರೆ ಜನ ಸಾಮಾನ್ಯರಂತ ಹೇಳಿರೆ ರೈತರ್, ಹಳ್ಳಿಯವುಕ್ಕೆ ಮಾತಾಡಿಕಾಗದ ಬಾಸೆ. ಅದ್ ಜನ ಬಾಸೆ ಆದುಲೆ. ಮತ್ತೆ ಅದ್ ಒಳ್ಯೊದೂ ಇಲ್ಲೆ.ಹಳೆ ಗ್ರಂಥಗ ಎಲ್ಲಾ ಲ್ಯಾಟಿನ್ ಬಾಸೆಲಿ ಬರ್ದಿದ್ದೊ. ಆ ಬಾಸೆ ಮಾತಾಡೊವು ಕೆಲವೇ ಜನ ಇದ್ದೊ, ರಾಜಾಶ್ರಯಲಿ ಇದ್ದೊ. ಕಾಲ ಬದ್ಲಾತ್. ಜನರಿಗೆ ಅಧಿಕಾರ ಬಾತ್, ಜನರ ಬಾಸೆ ರಾಜಬಾಸೆ ಆತ್, ಲ್ಯಾಟಿನೇ ಮೂಲೆಗೆ ಬೀತ್. ಭಾರತಲಿ ಅದೇ ಆಗ್ತ ಉಟ್ಟು. ರಾಜರ ಕಾಲಲಿ ಪುರೋಹಿತರ್,ಪಂಡಿತರ್, ಜೋಯ್ಸರ್ ಎಲ್ಲಾ ಬಟ್ರೇ ಆಗಿದ್ದೊ. ಅವುಕ್ಕೆ ಮಾತ್ರಂತೇಳಿ ದೊಡ್ಡ ದೊಡ್ಡ ಪುಸ್ತಕ ಬರ್ದೊ. ಕಾಲ ಬದಲಾತ್. ಹಳ್ಳಿಯ ಜನ ಅಧಿಕಾರಕ್ಕೆ ಬಂದೊ, ಜನರ ಬಾಸೆ, ಕನ್ನಡನೋ ಹಿಂದಿಯೋ ರಾಜಬಾಸೆ ಆತ್. ಜನರಿಗೆ ಬೆಲೆ ಕೊಡುವ ದಿನ ಬಾಕನ ಅವರ ಬಾಸೆಗೆನೂ ಬೆಲೆ ಕೊಡಕಾಗಿ ಬಂದದೆ. ಹಾಂಗಾಗಿದೆ ನೋಡಿ ಪ್ರತಿ ರಾಜಕೀಯ ಪಕ್ಷನೂ, ಅಧಿಕಾರಕ್ಕೆ ಬರುವ ಎಲ್ಲಾ ಸರಕಾರಗಳೂ ಕನ್ನಡ ಜನಬಾಸೆಂತ ಹೇಳಿ ಅದರ್ಲೇ ಆಡಳಿತ ನಡ್ಯೊಕೂಂತ ಬಾಷಣ ಮಾಡಿವೆ. ಕಾನೂನು ತಂದವೆ. ಇದ್ ಸರಿ. ಜನರ ಬಾಸೆಗೆ ನೆಲೆ ಬೆಲೆ ಬಾರೊಕಾದ್ದೆ. ಬಾಸೆ ಪಂಡಿತ ಪರಂಪರೆ ಬೆಳ್ಸಿಕೆ ಅಲ್ಲ. ಜನಂಗಳಿಗೆ ಅರ್ಥ ಆಗದ ಸಾಹಿತ್ಯ ಬರೆಕೆ ಅಲ್ಲ. ಈ ನಮ್ಮ ಸಾಹಿತ್ಯಂತೇಳಿ ಬಾರಿ ಬೊಚ್ಚೆ ಹೊಡ್ದ ಸಾಹಿತ್ಯ ಮೂಲೆಗೆಬೀತ್. ಯಾಕಂತ ಹೇಳಿರೆ, ನಮ್ಮ ಪದ್ಯ ನೀವುಗೆನೂ ಅರ್ಥ ಆಕಿಲೆ, ನಾವುಗೆನು ಅರ್ಥ ಆದುಲೆ. ಕೆಬಿಗೆ ಕೇಳದ ಶಬ್ದ ಅದ್, ನೆಯ್ದ್ ನೆಯ್ದ್ ಚಿಕ್ಕ್ ಮಾಡಿ ಪದ್ಯಾಂತ ನಮ್ಮ ಮೋರೆಗೆ ಬಿಸಾಡಿವೆ. ಹಾಂಗಾಗಿ ಅದರ್‌ರಂದ ಮೇಲೆ ಹಳ್ಳಿಯೊವು, ಹಳ್ಳಿಲಿ ಕಲ್ತ್ ಪೇಟೆಗೆ ಹೋದ ನಮ್ಮವು ಹಳ್ಳಿ ಬಾಸೆ, ಹಳ್ಳಿಯ ಶಬ್ದಗಳ ಬಳಸಿ ಸಾಹಿತ್ಯ ರಚನೆ ಮಾಡ್ದೊ. ಅದರ್ಲಿ ಜನರ ಬಾಸೆನೂ ಇತ್ತ್. ಜನರ ಯೋಚನೆನೂ ಇತ್ತ್. ಅದ್ ಜನಂಗಳಿಗೆ ಬೇಕಾದ್ದೇ ಇತ್ತ್.

ಜಾಗತೀಕರಣ ಮತ್ತೆ ಬಾಸೆ :

ಜಾಗತೀಕರಣ ಜನರಿಗೆ ಒಳ್ಳದ್ ಮಾಡುವ ಸಂಗತೀಂತ ಕಾಂಬೊದುಲೆ. ಒಂದು ದೇಶನ ಇನ್ನೊಂದು ದೇಶ ಸ್ವಾಧೀನಲಿ ಇರ್‍ಸಿಕಾಂಡ್ ಹಳೇ ವಸಹಾತುಶಾಹಿ ಪದ್ಧತಿ ಹೋಗಿ, ಹೊಸ ರೀತಿನ ವಸಹಾತುಶಾಹಿ ಬಂದದ್ ನಮ್ಮ ಬಾಸೆಗೆ ತೊಂದರೆ ಮಾಡ್ತಾ ಉಟ್ಟು. ಹೊರ ದೇಶದ ಬಾಸೆ, ಹೊರ ದೇಶದ ಸಾಂಸ್ಕೃತಿನ ನಮ್ಮ ಮೇಲೆ ಹೇರ್‌ತ್ತಾ ಉಟ್ಟು. ನಮ್ಮೂರ್‍ನ ಅಡ್ಕೆ, ಕಾಯಿ, ಬೀಜ, ಮೆಣ್ಸ್ ಯಾರಿಗೂ ಬೇಡ, ಆದರೆ ಆಸ್ಟ್ರೇಲಿಯಾದವರ ಸೇಬು, ಆಫ್ರೀಕಾದವರ ಮುಸುಂಬಿ, ಚೀನಾದ ಬೀಗ, ಜಪಾನ್ ದೇಶದವರ ಬೈಕ್ ತಕಣೊಕೇಂತೇಳುವ ಪರಿಸ್ಥಿತಿ ನಿರ್ಮಾಣ ಆಗ್ತಾ ಉಟ್ಟು. ಅಮೇರಿಕಾದವರ ಡ್ಯಾನ್ಸ್ ಮಾಡೊಕು, ಈ ಹಿನ್ನಲೆಲಿ ನಮ್ಮ ದೇಶದ ಸಾವಿರಾರ್ ಉಪ ಬಾಸೆಗ ಸಾಯ್ತಾ ಇರ್ದರ ನಾವು ಕಾಣ್ತಾ ಒಳೊ. ನಮ್ಮ ಬಾಸೆ ಒಳದ್ದೆ ನಮ್ಮ ಕೊಣ್ತಲಿ, ಕೃಷಿ ವಿಚಾರಲಿ,ಸಂಪ್ರದಾಯಲಿ, ಕಟ್ಟ್‌ಕಟ್ಲೆಗಳ್‌ಲಿ ಅದೆಲ್ಲಾ ಕಮ್ಮಿ ಆಗ್ತಾ ಬಂದಾಂಗೆ ಬಾಸೆ ಸಾಯ್ತಾಹೋದೆ. ನಮ್ಮ ಗದ್ದೆಗ ಹೋದೋ, ಗದ್ದೆ ಬೇಸಾಯದೊಟ್ಟಿಗಿದ್ದ ಸಾಮಾನುಗ, ಅದರ ಹೆಸರ್‌ಗ, ಕ್ರಮ, ಕ್ರಮಗಳಿಗಿದ್ದ ಹೆಸ್ರ್‌ಗ ಅಗತ್ಯ ಕಳ್ಕಂಡತ್ ಹಾಂಗಾಗಿ ಆ ಶಬ್ಧಗ ನಾಶ ಆದೊ. ಒಂದು ಶಬ್ದನ ಹುಟ್ಸಿ ಹಾಕಿಕೆ ಆದುಲೆ. ನಾವು ಇಂದ್ ಹೇಳ್ತಿರೋ ಶಬ್ಧಗ/ ಪದಗ ಎಷ್ಟೋ ಸಾವಿರ ವರ್ಷಗಳ ಹಿಂದೆ ಹುಟ್ಟಿತ್. ಅಂದ್‌ಂದ ಇಂದ್‌ವರೆಗೆ ಬಾಯಿಂದ ಬಾಯಿಗೆ ಬಂದುಟು. ನಮ್ಮ ಕಾಲಲಿ, ನಾವು ಇಂಗ್ಲೀಷ್ ಕಲ್ತ್, ನಮ್ಮ ಹಿರಿಯವರ ಶಬ್ಧಗಳ ಮಾತಾಡದೆ, ಅದರ ಕೊಂದೊ. ಇದ್ ಬಾರಿ ಬೇಜಾರ್‌ನ ಸಂಗತಿ. ನಮ್ಮ ಹೊಸ ವಾತಾವರಣ ನಮ್ಮ ಹಿಂಗೆ ಮಾಡ್‌ತ್ತ ಹೇಳಿಕೆ ಸುಲಭ. ಆದರೆ ರಷ್ಯಾದವರ, ಜಪಾನ್‌ನವರ ನೋಡಿ ನಾವು ಕಲ್ಯಕೆ ತುಂಬಾ ಉಟ್ಟು. ಅವು ಅವನ ಬಾಸೆನ ಇನ್ನೂ ಬುಡ್ದತ್ಲೆ. ವಿಜ್ಞಾನಲಿ, ತಂತ್ರಶಾಸ್ತ್ರಲಿನೂ ಅವು ಮುಂದೆನೇ ಒಳೊ. ಈ ಬಗ್ಗೆ ನಾವು ಯೋಚನೆ

ಮಾಡೋಕೊಂತ ನನ್ನ ಅನ್ಸಿಕೆ.

ಅರೆಗನ್ನಡದ ಪದಕೋಶ ಮಾಡೋಕು :

ನಮ್ಮ ಬಾಸೆಲಿ ಯಾವುದೇ ವಿಷಯನ ಕೂಡ ವಿವರಿಸುವಷ್ಟ್ ಶಬ್ದಗ ಒಳೊ. ಆದರೆ ಅದರ ಉಪಯೋಗ ಮಾಡದೆ ಅದ್ ಕಾಣೆಯಾಗ್ತಾ ಉಟ್ಟು. ಆ ಶಬ್ದಗಳ ಒಳ್ಸಿಕೆ ಒಳ್ಳ ದಾರಿಂತ ಹೇಳಿರೆ ಅದರ ದಾಖಲೆ ಮಾಡ್ದು. ನಮ್ಮ ಹಿರಿಯವು ತಿಳ್ದವು. ಹಳ್ಳಿಲಿ ಕಾಡ್‌ಕರೆಲಿ ನಮ್ಮ ಬಾಸೆ ಇನ್ನೂ ಉಟ್ಟು. ಆದಷ್ಟ್ ಬೇಗ ಅವರ ಸಹಾಯ ತಕ್ಕಂಡ್ ಅದರ ಬರ್ದ್ ಇಸೊಕು. ಇಂದ್ ಕಂಪ್ಯೂಟರ್ ಉಟ್ಟು, ದಾಖಲೆ ಮಾಡಿಸುದು ಕಷ್ಟದ ಕೆಲ್ಸ ಅಲ್ಲ. ಅದೇ ಒಂದು ದೊಡ್ಡ ಸಂಪತ್ ಅದು. ಆದರ್‌ಲಿ ನಮ್ಮ ಹಿರಿಯರ ಉಸುರು ಉಟ್ಟು. ಗೌಡಯುವ ಸೇವಾ ಸಂಘಂದ ಮಾತ್ರ ಇದ್ ಸಾಧ್ಯಾಂತ ಕಂಡದೆ.

ಬಾಸೆ ಜನರ ಒಂದ್ ಮಾಡ್ದೆ. ಹಾಂಗಾಗಿ ಯಾವುದೇ ದೇಶ ಕಟ್ಟಿಕನ ಬಾಸೆ ಕೂಡ ಒಂದು ಆಧಾರ ಆದೆ. ನಮ್ಮ ರಾಜ್ಯಗಳ ರಚನೆ ಮಾಡ್ಕನಲು ಬಾಸೆಗಳ ಆಧಾರಲೇ ಮಾಡ್ಯೋಳೊ.

ನಾವು, ನಮ್ಮವು ಒಟ್ಟಾಕು, ಸಂಘಟನೆ ಬೆಳ್ಯೊಕೂಂತೇಳಿರೆ ಬಾಸೆಗೆ ಒತ್ತ್ ಕೊಡೊಕು. ಬಾಸೆನ ಬೆಳ್ಸೊಕು. ಬಾಸೆ ಮಾತಾಡೊವುಕೆ ಬೆಲೆ ಸಿಕ್ಕೊಕು.

ಕವಿಗೋಷ್ಠಿ :

ಕವಿಗೋಷ್ಠಿ ಮಾಡುವ ಕಾರಣದಿಂದಾಗಿ ಬರೆವರಲ್ಲಿ ಹೊಸ ಯೋಚನೆಗೆ ಎಡೆಮಾಡಿಕೊಟ್ಟದೆ. ಅದಕ್ಕಾಗಿ ಬರವಣಿಗೆ ಆರಂಭ ಆದೆ. ನಾಲ್ಕ್ ಜನರ ಮುಂದೆ ನಿಂತ್ ಪದ್ಯ ಓದಿ ಹೇಳುವೆ. ಸಾಹಿತ್ಯನ ಜನರ ನಡುವೆ ಎಳ್ದ್ ತಂದಾಂಗೆ ಆದೆ. ಬರೇ ಖಾಸಗಿ ಆಗಿ ಇರುವ ವ್ಯಕ್ತಿಗತ ಆಲೋಚನೆಗಳ ಎಲ್ಲವೂ ಅನುಭವಿಸುವ ಹಾಂಗೆ ಆದೆ. ಇದೊಂದು ಹತ್ತ್ ಜನ ಕೂಡ್ಯಾಡಿ ಮಾಡುವ ಕೆಲ್ಸ. ಒಬ್ಬನ ಖುಸಿನ ಎಲ್ಲವೂ ಅನುಭವಿಸುದರಿಂದ ಸಮಾಜಲಿ ಹೊಸ ವಾತಾವರಣ ಮೂಡಿ ಬಂದದೆ. ಸಾಹಿತ್ಯಂದಾಗಿ ಜನರ ಯೋಚನೆಗಳ ದಿಕ್ಕ್ ಬದ್ಲಾದೆ. ಕೆಲಸದ ದಿಕ್ಕ್ ಬದ್ಲಾದೆ. ಒಳ್ಳ ಸಾಹಿತ್ಯ ಒಳ್ಳದರ ತಾಕೆ ಸಹಾಯ ಮಾಡ್ದೆ. ಒಳ್ಳದರ ತಂದದೆ.

ಗೌಡ್ರ ಕವಿಗೋಷ್ಠಿ :

ಗೌಡ್ರ ಬಾಸೆಲಿ ಪದ್ಯಗ ಒಳೊ. ದೂರ ದೂರಕೆ ಪದ್ಯ ಬರ್ಯೆವ ಜನ ಒಳೊ. ಇವರೆಲ್ಲಾ ಒಟ್ಟು ಮಾಡುವ ಕೆಲ್ಸದ ಬಗ್ಗೆ ಅಂದ್‌ನ ಗೌಡರ ಯುವ ಸೇವಾ ಸಂಘದ ಅಧ್ಯಕ್ಷರಾಗಿದ್ದ ಮುಂಡೋಡಿ ನಿತ್ಯಾನಂದರಲ್ಲಿ ಹೇಳಕನ ಪೂರ್ಣ ಸಹಕಾರ ಮಾಡ್ಯೊಳು. ಸಂಘದ ಕಾರ್ಯಕರ್ತರ್ ಸಹಾಯಕ್ಕೆ ನಿಂತಿದ್ರೊ. ಆ ಪ್ರಕಾರ 1995 ನೇ ಇಸವಿ ಸೆಪ್ಟಂಬರ್ 9 ನೇ ತಾರೀಖ್‌ನಂದ್ ಗುತ್ತಿಗಾರ್ ಶಾಲೆಲಿ ಒಂದು ದಿನದ ಕಾರ್ಯಕ್ರಮ ಗಡ್ದ್‌ಲಿ ನಡ್ದಿತ್ತ್. ಹಿರಿಯ ಕವಿ ಮೂಲೆ ಮಜಲ್ ಶಿವರಾಯ ಮಾಸ್ಟ್ರ ಅಧ್ಯಕ್ಷತೆಲಿ ನಡ್ದ ಈ ಕವಿಗೋಷ್ಟಿಲಿ 26 ಜನ ಪದ್ಯ ಓದ್ಯೊಳೊ. ಗೌಡ್ರ ಪೈಕಿಲಿ ಇಷ್ಟು ಜನ ಒಳೊಂತ ಗೊತ್ತಾಕನ ಆಶ್ಚರ್ಯ ಆದೆ. ಮತ್ತೆ ಎಲ್ಲೊವುಕೂ ಆದ್ ಹೊಸ ಸಂಗತಿ. ಸುರುನ ಸರ್ತಿ ಹೀಂಗೆ ಒಟ್ಟಾದ್ದೆ ಅಂದ್‌ನ ವಿಶೇಷ.

ಗೌಡ ಬಾಸೆಲಿ ಪದ್ಯ ಬರ್ದವರ ಪೈಕಿ ಹೊದ್ದೆಟ್ಟಿ ಭವಾನಿಶಂಕರ ಅವರ್ದ್ ದೊಡ್ಡ ಹೆಸ್ರ್. ಪದ್ಯಲೇ ಮೋಡಿ ಮಾಡುವ ತಾಕತ್ತ್ ಅವರ್ದ್. ಈ ಸರ್ತಿ ಅವರ ಪದ್ಯ ಪುಸ್ತಕನ ಹೊರತರ್ತಾ ಒಳೊ. ಹೊದ್ದೆಟ್ಟಿಯವು ಆ ದಿನ ಅವರ ಪದ್ಯಗಳ ಓದಿ ಹಾಡಿ ಖುಷಿಕೊಟ್ಟಿದ್ರೊ. ಭಾಷಾವಿಜ್ಞಾನಿಂತ ಹೆಸರು ಹೊತ್ತ ಪ್ರೊ. ಕೋಡಿ ಕುಶಾಲಪ್ಪ ಗೌಡ್ರು, ಟಿ. ಜಿ. ಮೂಡೂರು, ಸಭೆಲಿ ನೆಂಟ್ರ ಸ್ಥಾನಲಿದ್ರೊ. ಹೀಂಗೆ ಗೌಡ್ರ ಸಾಹಿತ್ಯ, ಸಾಹಿತಿಗಳ ಒಳ್ಳೆ ಒಂದು ಕೂಟ ಅದಾಗಿತ್ತ್. ಅಂದ್ ಓದಿದ್ದ ಪದ್ಯಗಳ ಇಂದ್‌ನವರೆಗೂ ಹಾಂಗೆ ಇಸಿಕಂಡ್ ಬಂದೊಳೊ. ಇದೀಗ ಅದರ ಅಚ್ಚ್ ಹಾಕ್ಸಿ ಹಂಚುವ ಕೆಲ್ಸ ಮಾಡಿಕೆ ಗೌಡ ಯುವ ಸೇವಾ ಸಂಘ ದುಡ್ಡುನ ಸಹಾಯ ಮಾಡ್ತಾ ಉಟ್ಟು. ಅವುಕೆ ಬಂಟಿಮಲೆ ಪ್ರಕಾಶನದ ಅಭಿನಂದನೆ.

ಕವಿತೆಗಳ ಬಗ್ಗೆ :

ಆ ದಿನ ಓದಿದ್ದ ಪದ್ಯಗಳ್‌ಲಿ ಎಲ್ಲವೂ ಒಂದಕ್ಕಿಂತ ಒಂದು ಪೊರ್ಲಿತ್ತ್. ಗೌಡ ಬಾಸೆನ ಎಷ್ಟು ಲಾಯಿಕ್ ಬಳಸಿಕಣ್ಕ್‌ತ ನೋಡಿಕೆ ಶಿವರಾಯ ಮಾಸ್ಟ್ರ ಪದ್ಯ ಓದೊಕು. ಕಪ್ಪೆ, ಪ್ರಾಣಿ, ಪಕ್ಷಿ, ಊರು, ಕೇರಿ, ಸಂಗ್ತಿಗಳ ಒಳನೋಟ ಅದರ್ಲಿ ಉಟ್ಟು, ಆಧುನಿಕತೆ ಬಗ್ಗೆ ವಿಮರ್ಶೆ ಉಟ್ಟು, ಭಾಷೆ ಬಗ್ಗೆ ಹೇಳಿವೆ. ಹಾಡಿಕೆನೂ ಪೊರ್ಲು ಉಟ್ಟು, ಬಾರಿ ಸಾಮರ್ಥ್ಯದ ವ್ಯಕ್ತಿ ಅವು. ತೇಜಕುಮಾರ್ ಬಡ್ಡಡ್ಕ ನಮ್ಮವರ ಚರಿತ್ರೆನ, ಗುಟ್ಟುಲಿ ಹೇಳ್ವೆ. ಹೆಮ್ಮೆಲಿ ಹೇಳ್ವೆ. ಮದುವೆ ಗದ್ದೆನ ಗೌಜೀಂತ ಹೇಳ್ರೆ ನಮ್ಮವರ ಗೌಜಿ. ಅವುಕೆ ನಮ್ಮ ಚರಿತ್ರೆಲಿರುವ ವ್ಯಕ್ತಿಗಳ ಗೊತ್ತಿದ್ದ ಕಾರಣ ಹಾಂಗೆ ಬರ್ಯಕೆ ಸಾಧ್ಯಾದೆ. ಪ್ರಸನ್ನಂಗೆ ಅವರ ಅಜ್ಜನ ಬಗ್ಗೆ ಗೊತ್ತುಟ್ಟು. ಬಡ್ಡಡ್ಕ ಅಪ್ಪಯ್ಯ ಗೌಡ ಸಾಹಿಸಿ ಮನುಷ್ಯ. ಅವು ಒಂದು ರೀತಿಲಿ ದಂತಕತೆ. ಅವರ ಬಗ್ಗೆ ಲಾಯ್ಕ್‌ಲಿ ಬರ್ದೊಳೊ. ವಿದ್ಯಾಧರನ ಪದ್ಯಲಿ ನಮ್ಮವರ 'ನೆನ್ಪು' ಆದೆ. ಸೋತೊವು ಕಷ್ಟ ಕಾರರ್. ಸಾಹಸಿಗ, ಯಾರ್ಯಾರ್‌ದೋ ಮೋಸಕ್ಕೆ, ತಗಾದೆಗೆ ಬಲಿಯಾದವರ ಬಗ್ಗೆ ಮಾರ್ಮಿಕ ಮೋಟ ಉಟ್ಟು. ಮನುಷ್ಯರ ಜೀವನಸಾರನ ಸಣ್ಣ ಪದ್ಯದೊಳಗೆ ಕುಕ್ಕೆಟ್ಟಿ ಜಯಪ್ರಕಾಶ್ ಹಿಡ್ದಿಶೊಳೊ. ಗಂಡನ ಬಗ್ಗೆ ಇರುವ ಪ್ರೀತಿ, ತವಕನ ಗಂಡು ಹೆಂಣ್ ಸಂಬಂಧದ ಬಗ್ಗೆ ಕುಸುಮಾ ಕುಕ್ಕೆಟ್ಟಿ ಶಕ್ತಿಶಾಲಿಯಾಗಿ ಬರ್ದೊಳೊ. ಜೂಲಿಂತೇಳುವ ನಾಯಿನ ಬಗ್ಗೆ ಸತ್ಯಪ್ರಕಾಶ ದೇರಪ್ಪಜ್ಜನ ಮನೆಯವು ಬರ್ದ ಪದ್ಯ ನಾಯಿನೊಟ್ಟಿಗೆ ನಿಲ್ಲುದುಲೆ. ನಮ್ಮ ಬೇನೆ, ಬೇಜಾರ್, ಬದುಕುತ್ತಿರುವ ರೀತಿನ ವಿವರ್ಸಿ ಹೇಳ್ದೆ. ಭೂಮಿ ಮಾತಾಡ್ದೊರ, 'ಯೆತೆ' ಪದ್ಯಲಿ ಬಾಬು ಮಾಸ್ಟ್ರ ಬರ್ದೊಳೊ. ಪರಿಸರ ಪ್ರೇಮ, ಪ್ರಾಣಿದಯೆ, ಜೀವಸಮತೋಲನ ಹೀಂಗೆ ಇಂದ್‌ನ ವಿಚಾರಗಳ

ಪ್ರಾಣಕೊಟ್ಟ ದೇವರು ಸ್ವಾತಂತ್ರ್ಯವನ್ನು ಕೊಟ್ಟ.

ಕಾಳಜಿ ಕಂಡದೆ. ನಮ್ಮವರ ದುರಾಭ್ಯಾಸಗಳ ಬಗ್ಗೆ ಜಾನಪದ ಪದ್ಯದ ದಾಟಿಲಿ ಯು. ಸು. ಗೌಡ್ರು ಎಚ್ಚರಿಕೆ ಕೊಟ್ಟವೆ. ಬಡ್ಡಡ್ಕದ ವೇದಾವತಿ ಅನಂತ ಸ್ವತ ರಾಜಕಾರಣಿ ಕೂಡಾ. ಸಮಾಜಲಿ ಓಟುನ ರಾಜಕೀಯ ಮಾಡ್ದವರ ಬಗ್ಗೆ ಕಿವಿಮಾತ್ ಹೇಳಿವೆ. ಮೇಪತ ಹೈದನ ಚಿತ್ರಣ ಕಣ್ಣಿಗೆ ಕಟ್ಟುವ ಹಾಂಗೆ ಬರ್ದ್ನೊಳೊ. ರೇಷ್ಮಾ ಪ್ರಾಯಲಿ ಸಣ್ಣವಳಾದ್ರು ಜೀವನಾನುಭವ ದೊಡ್ಡದುಟ್ಟು. ಎರಡೂ ಪದ್ಯಗಳ್‌ಲಿ ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ವಿವರಣೆ ಉಟ್ಟು. ಚೈತನ್ಯ ಸ್ವಾಮಿಗ ಭಕ್ತಿರಸ ಸಾರಗಳ ಪದ್ಯಲಿ, ಕೊಟ್ಟೊಳೊ. ಅಲ್ಲದೇ ಗೌಡ ಕವಿಗಳ ಸ್ವಾಗತಿಸುವ ಪದ್ಯ ಸಕಾಲಿಕ. ಮಲ್ಲಾರ ಲಲಿತಾಜ ಅವರ್ದ್ ವೈವಿಧ್ಯದ ವಸ್ತು ನಿರೂಪಣೆ. ಗಾಂಧಿನ ಬಗ್ಗೆ ಹೇಳಿವೆ. ಹೆಣ್ಣ್‌ನ ಸಾಮರ್ಥ್ಯದ ಬಗ್ಗೆ ಆಶಾಭಾವನೆ ಉಟ್ಟು. ಸಾಮಾಜಿಕ ಸಾಂಸಾರಿಕ ಚಿತ್ರಣ ಉಟ್ಟು. ಮೂಲತಃ ಕಾದಂಬರಿಕಾರರಾದರೂ ಪದ್ಯ ಕೂಡಾ ಅವುಕೆ ಸಿದ್ಧಿಸಿಟ್ಟು. ಕಮಲಾ ಬಾಲಚಂದ್ರ ಗಣಪತಿ ಹಾಲು ಕುಡ್ದ ವಿಚಾರನ ಪದ್ಯಲಿ ಹೇಳಿವೆ. ಸಣ್ಣ ಘಟನೆನ ರಂಗಾಗಿ ಹೇಳುವ ಕೌಶಲ್ಯ ಬಡ್ಡಡ್ಕ ಚಂದ್ರಮತಿದ್. 'ಮುರಾರಿ', 'ಫ್ಯಾಶನ್', ಬಾಯ್ ಫ್ರೆಂಡ್, ನನ್ನಣ್ಣ ಹೀಂಗೆ ಚುಟುಕಾಗಿ ತಮಾಷೆಲಿ ವಿಷಯ ತಿಳ್ಸಿವೆ. ಮಾಧವ ಹರ್ಲಡ್ಕ ಇಷ್ಟ್ ಲಾಯಿಕ್ ಪದ್ಯ ಬರ್ದವೇಂತ ಬಹಳ ಮಂದಿಗೆ ಗೊತ್ತಿಲ್ಲೆ. ಬಂಟಕಾಡ್‌ಲಿ ಗಾರ್ಡ್ ಆಗಿದ್, ಹಂಪಿಲಿ ಮರ ಬೆಳ್ಸಿದ ಸೂಪಿ ಬ್ಯಾರಿನ ಮೂಲಕ ಪರಿಸರ ಪ್ರಜ್ಞೆ ಬೆಳೆಸುವ ಕವನ ಬಾರಿ ಲಾಯ್ಕುಟ್ಟು. ಮಾಧವ ಹೆಚ್ಚು ಬರ್ಯದಿದ್ದರೆ ನಾವುಗೆ ನಷ್ಟ. ದೇಶಭಕ್ತಿಗೀತೆನ ಅರೆಬಾಸೆಲಿ ಬರ್ದ ಕೀರ್ತಿ ಅಡ್ಪಂಗಾಯ ಸಾಂತಪ್ಪನವರದ್. ಪ್ರೇಮ ಕವನ ಬರ್ಯೋದು ಒಂದು ಪ್ರಾಯಲಿ ಸಹಜ. ಆದರೆ ಅದರ ಲಾಯ್ಕಲಿ ಬರ್ಯೊದು ಎಲ್ಲವುಕಾದುಲೆ. ಅದರ ಹದಮೀರದಾಂಗೆ ಬರೆಯುವ ಕಲೆ ಜಯರಾಮ ದೇರಪ್ಪಜ್ಜನ ಮನೆಯವುಕೆ ಸಿದ್ಧಿಸಿಟು. ನಮ್ಮ ಹಿರಿಯ ಪಂಡಿತರ ಪೈಕಿ ಡಿ. ಜಿ. ನಡ್ಕ ಕೂಡ ಒಬ್ಬ. ಗೌಡರ ಚರಿತ್ರೆ ಬಗ್ಗೆ ಅವುಕ್ಕೆ ಗೊತ್ತಿದ್ದಷ್ಟ್ ಯಾರಿಗೂ ಗೊತ್ತಿಲ್ಲೆಂತೇಳೊಕಾದೆ. ಆದರೆ ಅವರ ಪದ್ಯಲಿ ಇಂದ್‌ನ ಸಾಮಾಜಿಕ ಕೌಟುಂಬಿಕ ಸಂಗತಿಗಳ ನವಿರಾಗಿ ಬರ್ದ್ನೊಳೊ. ಹಾಂಗೇನೇ ನಮ್ಮ ಯುವ ಕವಿ ಹಾಡಿಕಲ್ಲು ಜಯರಾಮ ಅವರ ಪದ್ಯಗಳಲ್ಲಿ ಪಕೃತಿ ಚಿತ್ರಣ, ಮಾನವ ಸಂಬಂಧದ ವಿವರ ಸಿಕ್ಕಿದೆ. ಶೋಭಾ ದೊಡ್ಡಿಕಾನ ನಮ್ಮ ನಡುಲಿ ಇರುವ ಒಳ್ಳೆ ಕವಿ. ಒಟ್ಟ್‌ಲಿ ನೋಡಿರೆ ನಮ್ಮ ಮಹಿಳೆಯರ ಪೈಕಿ ಬಹಳ ಜನಕ್ಕೆ ಬರ್ಯಕೆ ಬಂದದೆ. ಮಾತ್ರ ಅಲ್ಲ ಒಳ್ಳೆ ಬರ್ಯವ್ವೆ. ಬೇಜಾರ್‌ನ ಸಂಗ್ತೀತ ಹೇಳಿರೆ ಅದಾಗಿ ಇಂದ್‌ಗೆ ಎಂಟ್ ವರ್ಸಾತ್. ಅದ್ ಬೆಳ್ದದ್ ಕಾಂಬೊದುಲೆ. ಹಾಂಗಾಗಿ ಅದರ ದಾಖಲೆ ಮಾಡಿಕಾಗಿ ಈ ಪುಸ್ತಕ ಅಚ್ಚ್ ಹಾಕಿಕೆ ಹೊರ್ಟ್ಬದ್ ಇಂದ್ ಕೂಡ ನಮ್ಮ ತಾಲೂಕುನ ಪ್ರತಿಷ್ಠಿತ ಸಾಮಾಜಿಕ ಸಂಘಟನೆ ಆದ ಯುವ ಸೇವಾ ಸಂಘದ ಪ್ರಾಯೋಜಕತ್ವಲಿ ಈ ಯೋಜನೆ ಕಾರ್ಯರೂಪಕ್ಕೆ ಬರ್ತಾ ಉಟ್ಟು.

ಪದ್ಯ ಬರ್ದವ್ ಒಂದಷ್ಟು ಜನ ನಮ್ಮವೇ ಆದರೂ ಗೌಡ ಬಾಸೆಲಿ ಬರ್ದಿತ್ಲೆ. ಒಬ್ಬ ಇಂಗ್ಲೀಸ್‌ಲಿ ಬರ್ದಿದ್ದೊ, ಮತ್ತೆ ಕೆಲವು ಸಾಲೆ ಕನ್ನಡಲಿ ಬರ್ದಿದ್ದೊ. ಅದರಲ್ಲಿ ಅರೆಗನ್ನಡಕ್ಕೆ ಅನುವಾದ ಮಾಡಿರನೇ ಪೊರ್ಲುಂತೇಳಿ ಅದಕ್ಕೆ ಸರ್ಯಾದ ಜನ ಆಕುಂತ ಹುಡ್ಕಿಕೆ ಹೊರ್ಟೊ. ಆಗ ನಮ್ಮ ಸಹಾಯಕ್ಕೆ ಬಂದದ್ ಪರಿಸರ ಕವಿ ಸಂಜೀವ ಕುದ್ಪಾಜೆ ಮತ್ತು ಯಶವಂತ ಕಡೆಕಲ್ಲು. ಇಬ್ಬೊರು ಸೇರಿ ಬಾರೀ ಪೊರ್ಲುಲಿ ಅದರ ಅನುವಾದ ಮಾಡ್ಯೊಳು. ಅದಿರ್ಲಿ ಗೌಡ್ರ, ಸಂಸ್ಕೃತೀನ ಗಂಧ ಪರಿಮಳ ಬೆರ್ಸಿ ಸರ್ಯಾದ ಪದ ಪ್ರಯೋಗ ಮಾಡ್ ಕಂಡದೆ. ಅವುಕೆ ಅಭಿನಂದನೆ.

ಇನ್ನ್ ನೀವು ಈ ಪುಸ್ತಕನ ತಕಂಡ್ ಓದಿ ಬರ್ದವ್‌ಕೆ ಬೆಂಬಲ ಕೊಡೋಕು, ಬಂಟಮಲೆ ಪ್ರಕಾಶನ ನಿಮ್ಮದೂಂತ ತಿಳ್ಕಂಡ್ ಸಹಕಾರ ಕೊಡೋಕೂಂತ ಕೇಳಿಕಂಡವೆ. ಗೌಡ್ರ ಬಾಸೆಲಿ ಇನ್ನೂ ಹೆಚ್ಚಿನ ಸಾಹಿತ್ಯ ಸೃಷ್ಟಿ ಆಗ್ಲೀಂತ ಹಾರೈಕೆ.

-ಎ.ಕೆ. ಹಿಮಕರ

ವಿಷಯ ಸೂಚನೆ : ಮಡಿಕೇರಿಯಲ್ಲಿರುವ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯವರು ಈ ಬಗ್ಗೆ ಗಮನ ಹರಿಸುವಂತಾಗಬೇಕು

-ಸಂ-

ಪಾರಾಣೆ ಗೌಡ ಸಮಾಜದ ವಾರ್ಷಿಕೋತ್ಸವ

ವೆಂಕಟರಮಣ ಸ್ವಾಮಿ ಗೌಡ ಸಮಾಜದ 32ನೇ ವಾರ್ಷಿಕ ಮಹಾ ಸಭೆಯು 9-2-2003 ರಂದು ಕುಲ್ಲಚೆಟ್ಟೀರ ಮುತ್ತಪ್ಪನವರ ಅಧ್ಯಕ್ಷತೆಯಲ್ಲಿ ಪಾರಾಣೆ ಪ್ರೌಢಶಾಲೆಯಲ್ಲಿ ನಡೆಯಿತು.

ಸಭೆಗೆ ಮುಖ್ಯ ಅತಿಥಿಯಾಗಿ ಕೊಡಗು ಗೌಡ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶ್‌ರವರು ಆಗಮಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಅವರು ಸಮಾಜದ ನೂತನ ಕಟ್ಟಡಕ್ಕೆ ಸಹಾಯಾರ್ಥವಾಗಿ 5,000 ರೂ.ಗಳ ಚೆಕ್ಕನ್ನು ನೀಡಿದರು. ಮತ್ತೊಬ್ಬ ಅಥಿತಿ ನಿವೃತ್ತ ಉಪ ತಹಶೀಲ್ದಾರ್ ಬಿಟ್ಟೀರ ಸಿ. ಕಾರ್ಯಪ್ಪ ಅವರು ಇದೇ ಸಂದರ್ಭದಲ್ಲಿ ಮಾತನಾಡಿದರು.

ನೂತನ ಆಡಳಿತ ಮಂಡಳಿಯ ಚುನಾವಣೆ ನಡೆದು ಕಿರುಂದಾಡು ಗ್ರಾಮದ ಬಿಟ್ಟೀರ ಎ. ರಾಮಯ್ಯನವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಬಲಮುರಿ ಗ್ರಾಮದ ಕೊಟ್ಟಕೇರಿಯನ ಸೋಮಣ್ಣ, ಕಾರ್ಯದರ್ಶಿಯಾಗಿ ದೇವಜನ ಪ್ರೇಮ ಸದಸ್ಯರುಗಳಾಗಿ ನಾಟೋಳನ ಈಶ್ವರ, ಕೈ ಕಾಡು ಗ್ರಾಮದ ಕುಲ್ಲಚೆಟ್ಟೀರ ಬಾಲಕೃಷ್ಣ, ಬಾವಲಿ ಗ್ರಾಮದ ಕುಟ್ಟನ ಬೆಳ್ಯಪ್ಪ ಮತ್ತು ಇಗ್ಗುಡ ಅಯ್ಯಣ್ಣ, ಬಾಕೀಲನ ಸುಮಿತ್ರ, ನರಿಯಂದಡದಿಂದ ಪೊಕ್ಕೂಳಂಡ ಚಂಗಪ್ಪ ಮತ್ತುಬೆಳ್ಳಿಯಂಡ್ರ ದೇವಕ್ಕಿ, ಮರಂದೋಡ ಗ್ರಾಮದ ಚಂಡೀರ ಜಗದೀಶ್ ಮತ್ತು ಐಯೇಟೀರ ಜನಾರ್ಧನ ಅವರನ್ನು ಆರಿಸಲಾಯಿತು. ಅಲ್ಲದೆ ಸಲಹಾ ಸಮಿತಿಗೆ ಬಿಟ್ಟೀರ ಕಾರ್ಯಪ್ಪ, ಮುಕ್ಕಾಟೀರ ಕುಶಾಲಪ್ಪ, ಪಾಡಿಚೆಟ್ಟೀರ ಭೀಮಯ್ಯ ಮತ್ತು ದೇವಜನ ಉತ್ತಪ್ಪನವರುಗಳನ್ನು ಆರಿಸಲಾಗಿದೆಯೆಂದು ತಿಳಿದು ಬಂದಿದೆ.

ಗೌಡ ಯುವ ಸಮಾವೇಶ ಸುಳ್ಯ - 2003 : *ಸಮಾವೇಶ ನಿರ್ದೇಶಕರ ಮೊದಲ ಮಾತುಗಳು*



ಆತ್ಮೀಯರೇ,

ನಮ್ಮ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಸಂಘಟನೆಯ ಹಿತ ದೃಷ್ಟಿಯಿಂದ 1995 ರಲ್ಲಿ ರಾಜಕೀಯ ರಹಿತವಾಗಿ ಸ್ಥಾಪನೆಗೊಂಡ 'ಸುಳ್ಯ ತಾಲೂಕು ಗೌಡರ ಯುವ ಸೇವಾ ಸಂಘ"ಹಲವಾರು ಕೆಲಸ ಕಾರ್ಯಗಳನ್ನು ಹಮ್ಮಿಕೊಂಡು ಅತ್ಯಂತ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಾ ಬರುತ್ತಿದೆ.

1997 ರಲ್ಲಿ ನಮ್ಮ ಸಂಘದ ಆಶ್ರಯದಲ್ಲಿ ಸ್ಥಾಪನೆಗೊಂಡ "ಶ್ರೀ ವೆಂಕಟರಮಣ ಕ್ರೆಡಿಟ್ ಕೋ ಓಪರೇಟಿವ್ ಸೊಸೈಟಿ" ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ಸುಳ್ಯದ ಜನರ ಆರ್ಥಿಕ ವ್ಯವಹಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ. 2001 ನೇ ಶೈಕ್ಷಣಿಕ ವರ್ಷದಿಂದ ಸುಳ್ಯದ ನೆರೆಯಲ್ಲಿರುವ ಉಬರಡ್ಕ ಮಿತ್ತೂರು ಗ್ರಾಮಕ್ಕೆ ಸೇರಿದ ಕೊಡಿಯಾಲಬೈಲು ಎಂಬಲ್ಲಿ "ಮಹಾತ್ಮಗಾಂಧಿ ಮಲ್ನಾಡ್ ಪ್ರೌಢ ಶಾಲೆ"ಯನ್ನು ಆರಂಭಿಸಿ ಈಗಾಗಲೇ 8 ಮತ್ತು 9 ನೇ ತರಗತಿಗಳು ನಡೆಯುತ್ತಿದೆ. ನಮ್ಮ ಈ ಸಮಾವೇಶ ನಡೆಯುತ್ತಿರುವ ಈ ಸುಂದರ ಪರಿಸರದಲ್ಲಿ ಈ ಪ್ರೌಢ ಶಾಲಾ ಸಂಕೀರ್ಣ 7 ಎಕ್ರೆ ಜಾಗವನ್ನು ಹೊಂದಿದ್ದು ಈಗಾಗಲೇ 12 ಲಕ್ಷ ರೂ. ಗಳ ವೆಚ್ಚದ ಭವ್ಯ ಕಟ್ಟಡವೊಂದು ಈಗ ನಮ್ಮೆದುರು ತಲೆಯೆತ್ತಿ ನಿಂತಿದೆ. ಇವುಗಳ ಜೊತೆಗೆ ನಮ್ಮ ಜನಾಂಗದ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕೂಡಾ ಸಹಾಯ ಹಸ್ತ ನೀಡಲಾಗಿದೆ. ನಮ್ಮ ಈ ಎಲ್ಲಾ ಚಟುವಟಿಕೆಗಳ ಯಶಸ್ಸಿನ ಹಿನ್ನಲೆಯಲ್ಲಿ ನಮಗೆ ಪ್ರೋತ್ಸಾಹ, ಬೆಂಬಲ ಹಾಗೂ ಮಾರ್ಗದರ್ಶನ ನೀಡುತ್ತಿರುವ ನಮ್ಮ ಜನಾಂಗ ಬಾಂಧವರನ್ನು ನಾವು ಸದಾ ನೆನೆಯುತ್ತಿದ್ದೇವೆ.

ಮುಂದೆ ನಮ್ಮ ಜನಾಂಗದ ಜನರಿಗೆ ಅನುಕೂಲವಾಗುವಂತಹ ಸುಂದರ ಸಭಾಭವನ, ನಮ್ಮ ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ವಸ್ತು ಸಂಗ್ರಹಾಲಯ, ವಿಶಾಲವಾದ ಕ್ರೀಡಾಂಗಣ, ಯುವ ಜನತೆಗಾಗಿ ವೃತ್ತಿ ಕೌಶಲ ತರಬೇತಿ ಕೇಂದ್ರಗಳ ಸ್ಥಾಪನೆ ಮುಂತಾದ ಮಹತ್ತರ ಯೋಜನೆಗಳ ಅನುಷ್ಠಾನ ನಮ್ಮ ಮುಂದಿರುವ ಕನಸುಗಳು.

ಈ ದಿಸೆಯಲ್ಲಿ ಸುಳ್ಯ ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ನಮ್ಮ ಸಂಘದ ಗ್ರಾಮ ಸಮಿತಿಗಳನ್ನು ರೂಪಿಸಿಕೊಂಡು ಎಲ್ಲಾ ಹಳ್ಳಿ ಹಳ್ಳಿಯ ನಮ್ಮ ಜನಾಂಗ ಬಾಂಧವರನ್ನು ಕೂಡ ನಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಪ್ರತೀ ವರ್ಷವೂ ನಮ್ಮ ಜನಾಂಗದ ವಾರ್ಷಿಕ ಸಮಾವೇಶ, ಕ್ರೀಡಾ ಕೂಟ, ಕಲೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸುವ ಉದ್ದೇಶವನ್ನು ಹೊಂದಿರುತ್ತೇವೆ. ಈ ಕನಸುಗಳೊಂದಿಗೆ ಈ ದ್ದಿನ ನಮ್ಮ ಗೌಡ ಜನಾಂಗದ ಬೃಹತ್ ಸಮಾವೇಶವನ್ನು ನಮ್ಮ ಸಂಘದ ಆಶ್ರಯದಲ್ಲಿ ಸಂಘಟಿಸಲಾಗಿದೆ.

ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೊಳಪಟ್ಟ ನಮ್ಮ ಗೌಡ ಜನಾಂಗದ ಹಿನ್ನಲೆ ಮತ್ತು ನಮ್ಮ ಪೂರ್ವಜರ ಹಿರಿಮೆಯನ್ನು ಅರಿತುಕೊಳ್ಳುವಿಕೆ, ನಮ್ಮ ಜನಾಂಗದ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ, ನಮ್ಮ ಜನಾಂಗದ ಸಾಧಕರ ಗುರುತಿಸುವಿಕೆ, ಪರಸ್ಪರ ಪರಿಚಯ ಮತ್ತು ಸೌಹಾರ್ದತೆ, ನಮ್ಮ ಜನಾಂಗದ ದುರ್ಬಲರಿಗೆ ಶೋಷಿತರಿಗೆ ಮತ್ತು ಅವಕಾಶ ವಂಚಿತರಿಗೆ ನೆರವಾಗುವಿಕೆ, ನಮ್ಮ ಜನಾಂಗದ ವ್ಯವಸ್ಥಿತ ಸಂಘಟನೆ ಮೊದಲಾದ ಉದ್ದೇಶಗಳನ್ನು ಹಿತದೃಷ್ಠಿಯಲ್ಲಿರಿಸಿಕೊಂಡು ಈ ಸಮಾವೇಶವನ್ನು ಯೋಜಿಸಲಾಗಿದೆ. ಈ ಉದ್ದೇಶಗಳ ಹಿನ್ನಲೆಯಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿತದೃಷ್ಟಿಯ ವಿಚಾರಗೋಷ್ಠಿ, ಹಿರಿಯ ಕಿರಿಯ ಸಾಧಕರಿಗೆ ಸನ್ಮಾನ, ಜನಾಂಗದ ಹಿರಿಮೆ ಮತ್ತು ಗರಿಮೆಯನ್ನು ಪ್ರತಿಬಿಂಬಿಸುವ ಸ್ಮರಣ ಸಂಚಿಕೆ ಜನಾಂಗದ ಪ್ರತಿಷ್ಠಿತರಿಂದ ಅತಿಥಿ ಉಪನ್ಯಾಸ, ಯುವಕ ಯುವತಿಯರಿಗೆ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮ, ಸಹಬೋಜನ ಮೊದಲಾದ ಕಾರ್ಯಕ್ರಮಗಳನ್ನು ಈ ಸಮಾವೇಶದಲ್ಲಿ ಅಳವಡಿಸಿಕೊಂಡಿರುತ್ತೇವೆ.

ಸುಳ್ಯ ತಾಲ್ಲೂಕು ಮತ್ತು ಆಸುಪಾಸಿನ ಬಹು ಸಂಖ್ಯಾತ ಜನಾಂಗವಾದ ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೊಳಪಟ್ಟ ನಮ್ಮ ಗೌಡ ಜನಾಂಗ ಮತ್ತು ನಮ್ಮ ನೆಂಟರಿಷ್ಟರು ಹಾಗೂ ಬಂಧು ಬಾಂಧವರು ಈ ಸಮಾವೇಶದ ಮೂಲಕ ಒಂದು ಕಡೆ ಕಲೆತು, ಬೆರೆತು ಸಂಘಟನೆಗೊಂಡು ಒಂದು ನಿರ್ದಿಷ್ಟ, ವ್ಯವಸ್ಥಿತ ಹಾಗೂ ಬಲಿಷ್ಠ ಶಕ್ತಿಯಾಗಿ ಹೊರ ಹೊಮ್ಮುವಂತಾಗಿ ನಮ್ಮ ಜನಾಂಗದ ಏಳಿಗೆಗೆ ನಾವುಗಳೆಲ್ಲರೂ ಕಾರಣಕರ್ತರಾಗುವುದರೊಂದಿಗೆ ಸಮಾವೇಶದ ಸಂಘಟಕರ ಶ್ರಮಕ್ಕೆ ಸಾರ್ಥಕತೆ ಬರಲಿ ಎಂಬುದೇ ನಮ್ಮ ಹಾರೈಕೆ.

-ಕುರುಂಜಿ ಗಂಗಾಧರ, ಸಮಾವೇಶ ನಿರ್ದೇಶಕರು.

ಸಂಗಾತಿ

ಈ ಹಿಂದೆ ಮುದ್ರಿಸಲು ಕಳಿಸಿದೆಯಲ್ಲಾ ಸಂಗಾತಿ
ನನ್ನ ಕಥೆ ಕವನ ನೋಡಿ ಆಯಿತೆ ವಾಂತಿ
ಇದರಿಂದ ಸಿಕ್ಕಿಲ್ಲವಲ್ಲ ಮನಸ್ಸಿಗೆ ಶಾಂತಿ
ಹೊರಟು ಹೋಯಿತಲ್ಲಾ ಕವನ ಬರೆಯುವ ಸ್ಪೂರ್ತಿ

ಹೆಚ್ಚು ಬೇಧ ಭಾವ ಮಾಡದೆ ಇಟ್ಟರಿ ಪ್ರೀತಿ
ಇದರಿಂದ ಇಡೀ ಊರಲ್ಲಿ ಹರಡುವುದು ಕೀರ್ತಿ
ಎಲ್ಲವರ ಪ್ರೀತಿ ವಿಶ್ವಾಸವೇ ನಿಮಗೆ ಸಿಗುವ ಆಸ್ತಿ
ನನ್ನ ಮನಸ್ಸಿನ ಬೇಜಾರಕ್ಕೆ ಬರೆದೆ ಈ ರೀತಿ.

ಬಗುಳಿ ಬಗುಳಿ ರಾಗ
ಉಗುಳಿ ಉಗುಳಿ ರೋಗ
ಹೋಗುಳಿ ಹೋಗುಳಿ ಜಾಗ

-ಕಟ್ರತನ ದೇವಯ್ಯ, ಮೂಡಿಗೆರೆ.

ತಾಳ್ಮೆಯೇ ಯಶಸ್ಸಿನ ಗುಟ್ಟು.

ನನ್ನ ಮಾತ್ ಸ್ವಲ್ಪ ಕೇಳ್ರೀ!!

ಈಗಿನ ಕಾಲದಾಗ ಏನಾಗ್ಯೆತಿ ಅಂದ್ರ ಹೇಳ್ತೀನಿ ಕೇಳ್ರಿ.

ಉದ್ದುದ್ದ ಕಟ್ಟಡಗಳಾಗ್ಯೆತ, ಅಗಲಗಲ ರಸ್ತೆಗಳಾಗ್ಯೆತ ಆದ್ರ ಮನುಷ್ಯನ ಮನಸ್ಸು ಚಿಕ್ಕದಾಗ್ಯೆತಿ, ಕೋಪ ಮೂಗಿನ ತುದಿಯಲ್ಲಿ ಪಕ್ಕನೆ ಹತ್ತುಕೊತ್ತೆತ.

ಹೆಚ್ಚು ಖರ್ಚು ಮಾಡಿದ್ರೂ ಸಂತೋಷ ಕಡಿಮೆಯಾಗ್ಯೆತ. ದೊಡ್ಡ ದೊಡ್ಡ ಮನೆ ಕಟ್ಟುತ್ತೀವಿ ಸಂಸಾರ ಚಿಕ್ಕದಿರತ್ಯೆತ. ಕೆಲಸ ಜಾಸ್ತಿ ಮಾಡ್ತೀವಿ. ಸಮಯ ಕಡಿಮೆ ಐತೆ. ಹೆಚ್ಚು ಹೆಚ್ಚು ಓದ್ತೀವಿ ಆದ್ರ ಯೋಚನಾ ಶಕ್ತಿ ಕಡಿಮೆ ಐತಿ. ಎಷ್ಟೊಂದು ಹೊಸ ಔಷಧಿ ಕಂಡು ಹಿಡಿದವ್ರೆ ಆದ್ರೆ ಖಾಯಿಲೆ ಎಷ್ಟೊಂದು ಹೆಚ್ಚುಕೊಂಡ್ಯೆತ.

ಆಸ್ತಿ ಜಾಸ್ತಿ ಮಾಡುಕೋತೀವಿ ಆದ್ರ ಮನುಷತ್ವ ಎಷ್ಟು ಕಡಿಮೆ ಆಗ್ಯೆತಿ.

ಕಡಿಮೆ ಮಾತಾಡಿ, ಕಡಿಮೆ ಪ್ರೀತಿ ಮಾಡಿ, ದ್ವೇಷ ಮಾತ್ರ ಹೆಚ್ಚು ಮಾಡಿಕೊಂಡಿದ್ದೀವಿ. ಚಂದ್ರಲೋಕಕ್ಕೂ ಹೋಗಿ ಬಂದೀವಿ ರೀ. ಆದ್ರ ಪಕ್ಕದ ಬೀದಿ ದಾಟಿಕೊಂಡು ನೆರೆಮನೆಗೆ ಹೋಗೋದು ಎಷ್ಟು ತ್ರಾಸ ಆಗತ್ಯೆತೆರೀ.

ಹೊರಗಿನ ಬಾಹ್ಯಾಕಾಶನ್ನೆಲ್ಲಾ ಅಳೆದು ಹಾಕಿದ್ದೀವಿ, ಆದ್ರೂನೂ ಒಳಗಿನ ಮಂಗ ಮನಿಸ್ಸಿನ ಹತೋಟಿಗೆ ತರಕ್ಕಾಗಂಗಿಲ್ರಿ. ಹೆಚ್ಚು ಸಂಬಳ ತಂಗೋಡ್ರೂನೂ ನೀತಿ, ನಿಯಮ ತುಂಬಾ ಕಡಿಮೇರಿ.

ಆಹಾ.... ಎಷ್ಟೊಂದು ಸ್ವಾತಂತ್ರ್ಯ ಆದ್ರೂ ಸಂತೋಷ ಕಡಿಮೆ. ನಾನಾ ತೆರನಾದ ಭಾರಿಭೋಜನ ಇದ್ರೂನೂ ಅದ್ರಲ್ಲೇನೂ ಸತ್ವ ಇಲ್ಲಾರೀ. ಗಂಡ ಹೆಂಡ್ರಿಬ್ರೂ ದುಡೀತಾರ, ಆದ್ರ ವಿಚ್ಛೇದನಗಳೂ ಜಾಸ್ತೀರಿ.

ಮನೆಗಳು ಏನ್ ಚಂದವಾದವೆ ರೀ, ಆದ್ರೆ ಮನಗಳೆಲ್ಲಾ ಮುರಿದ್ ಹೋಗವೆ ರೀ.

ಅದಕ್ಕೇರಿ ನಾ ಹೇಳೋದು, ಈ ನಿಮಿಷದಿಂದ ಯಾವ ಸಂತೋಷಾನೂ ಮುಂದಕ್ಕೆ ಹಾಕ್ಕೊಬ್ಯಾಡ್ರಿ. ಪ್ರತಿ ನಿಮಿಷ ಹೆಚ್ಚು ಜ್ಞಾನ ಸಂಪಾದಿಸಿರಿ, ಹೆಚ್ಚು ಓದಿರಿ, ತೊಂದರೆಗಳನ್ನ ಬದಿಗೆ ಒತ್ತಿಟ್ಟು ಕೊಂಚ ಹೊತ್ತು ಕೂತು ಸೂರ್ಯಾಸ್ತದ ಸೌಂದರ್ಯಾನಾ ಸವಿಯಿರಿ.

ನಿಮ್ಮ ಪ್ರೀತಿಯ ಮನೆಯವರೊಂದಿಗೆ ಹೆಚ್ಚು ಸಮಯಾನ ಕಳೆಯಿರಿ. ನಿಮಗಿಷ್ಟವಾದದ್ದೆಲ್ಲಾ ತಿನ್ನಿರಿ, ನೋಡಬೇಕಾದ ಎಲ್ಲಾ ಜಾಗಾನೂ ಲಗೂನ ನೋಡ್ರಿ. ಕೊಂಡುಕೋಬೇಕಂತಿರೋ ಬೈಕ್ಸ್ ಜಲ್ದಿ ಕೊಂಡುಕೋಳ್ಳಿ ಕಟ್ಟಬೇಕಂತಿರೋ ಮನೀನ ಹೆಂಗಾರೂ ಮನಸ್ಮಾಡಿ ಕಟ್ಟ್‌ಬುಡ್ರಿ. ತಟ್ಟಬೇಕಂತಿರೋ ಚೆಲುವೆಯ ಮನಸ್ಸನ್ನ ತಡಮಾಡ್ದೆ ಹೋಗಿ ತಟ್ರೀ.

ಈ ಸಮಯಾನ ಸೋಮಾರಿಯಾಗಿ ನಿದ್ದೆ ಮಾಡಿ ಕೈ ಜಾರಕ್ಕೆ ಬಿಟ್ರೀ, ನೀವು ಕೊನೆಯವರೆಗೆ ನೋಡಿ ಕೆಟ್ರಿ. ಹಾಂಗ್ ಮಾಡಿದ್ರೆ ನೋಡಿ ನಿಮ್ಮ ಬಾಳಿನ ಪ್ರತಿಯೊಂದು ನಿಮಿಷ ಸಂತೋಷವಾಗಿ ಕಳೀತ್ಯೆತ.

ಈಗ್ಲೆ ಹೋಗಿ ನಿನ್ನೆ ಮೆಚ್ಚಿದ ಆ ಹೊಸ ಬಟ್ಟೆನ ಕೊಂಡ್‌ಕೊಂಡು ತೊಟ್ಟುಕೋರಿ, ಆ ಸೀಸೆಯೊಳಗಿನ ಬೆಲೆಬಾಳುವ ಸುಗಂಧನ ಇಂದೇ ಹಚ್ಚಿರಿ, ನಿಮ್ಮ ಬಾಳಿನ ಶಬ್ದ ಕೋಶದಿಂದ ಆಗ್ಲಿ ನೋಡೋಣ "ಯಾವಾಗ್ಲಾದ್ರೂ ಮಾಡೋಣು" ಎಂಬ ಪದಗಳ್ನ ಕಿತ್ತೂಗೀರಿ. ನಿಮ್ಮ ಪ್ರೀತಿಯ ಮನೆ ಮಂದೀಗೆಲ್ಲಾ ನಿಮಗ ಅವರ್ನ ಕಂಡ್ರೆ ಎಷ್ಟೊಂದು ಪಿರೀತಿ ಅಂತ ಇಂದೇ ಹೇಳಿಕೋರಿ. ಪ್ರತೀ ದಿನ ಮುಂಜಾವಿಗೆ ನಿಮಗೆ 2 ಘಂಟೆ ವಯಸ್ಸಾಗಿಬಿಟ್ಟಿರತ್ಯೆತಿ!

ನಿಮ್ಮಗೆಳೆಯನ ಈ ವಿನಂತಿ ಆಲಿಸಿರಿ. ಪ್ರತೀ ಗಂಟೆ, ಪ್ರತಿ ನಿಮಿಷ, ಪ್ರತಿ ಸೆಕೆಂಡ್ ನಿಮಗೆ "ಸ್ಪೆಷಲ್ " ಆಗಿರ್ಬೇಕ್‌ರೀ. ಆದ್ರಿಂದ ನಿಮ್ಮ ಸಮಯಾನ ಬೇಸರದಿಂದ ಕಳೀತೀರೋ ಇಲ್ಲಾ ನಗ್ತಾ ನಗ್ತಾ ಕಳೀತೀರೋ ನೀವೇ ನಿರ್ಧರಿಸಿರಿ.

-ಎಡಿಕೇರಿ ಸುದರ್ಶನ್, ಬೆಂಗಳೂರು.

ಶುಭ ವಿವಾಹ

1. ಮೈಸೂರು ನಿವಾಸಿ ಕುದುಪಜೆ ಕುಶಾಲಪ್ಪ ಮತ್ತು ಕಮಲಾಕ್ಷಿ ದಂಪತಿಗಳ ಪುತ್ರಿ ಸುಶ್ಮಾಳಿಗೂ ಮತ್ತು ಕೆ. ಆರ್. ನಗರದ ಶ್ರೀಮತಿ ಮತ್ತು ಶ್ರೀ ಡಾ|| ರಮೇಶ್‌ನವರ ಮಗ ರಾಜೇಶನಿಗೂ ದಿನಾಂಕ 6-2-2003 ರಂದು ಮೈಸೂರಿನ ವಿಜಯನಗರದ 2 ನೇ ಹಂತದಲ್ಲಿರುವ 'ದಿವ್ಯಾರೂಪ' ಕಲ್ಯಾಣ ಮಂಟಪದಲ್ಲಿ ಬಹು ಸುಂದರವಾಗಿ ನಡೆಯಿತು.

2. ಮಡಿಕೇರಿ ನಿವಾಸಿ ಕೂಡಕಂಡಿರ ದಿ|| ಪೊನ್ನಪ್ಪ (ಅಡ್ವಕೇಟ್) ಮತ್ತು ಪ್ರೇಮಾ ದಂಪತಿಗಳ ಪುತ್ರಿ ಚಿತ್ರಲೇಖಳಿಗೂ ಹಾಗೂ ಮಡಿಕೇರಿ ನಗರದ ಕೌನ್ಸಿಲರ್ ಯಲ್ಲಪ್ಪನ ಮನೆ ಶ್ರೀ ಬಿ. ಎಂ. ಎಲ್ಲಪ್ಪ ಮತ್ತು ಶಿವಮ್ಮ ದಂಪತಿಗಳ ಪ್ರಥಮ ಪುತ್ರ ರಾಜೇಶ್‌ನಿಗೂ ದಿನಾಂಕ 10-2-2003 ರಂದು ಮಡಿಕೇರಿಯಲ್ಲಿರುವ ಕೆಳಗಿನ ಗೌಡ ಸಮಾಜದಲ್ಲಿ ಮದುವೆಯು ಬಾರಿ ವಿಜೃಂಭಣೆಯಿಂದ ನಡೆಯಿತು.

3. ಮಡಿಕೇರಿ ನಿವಾಸಿ ದಾಯನ ದಿ|| ಅಪ್ಪಣ್ಣ ಹಾಗೂ ಪಾರ್ವತಿಯವರ ಪುತ್ರಿ ತೇಜಕುಮಾರ್‌ನಿಗೂ ಮತ್ತು ಮೊಣ್ಣಂಗೇರಿ ಗ್ರಾಮದ ಹೊಸೂಕ್ಲು ಗಣಪತಿಯವರ ಮಗಳು ಯಶೋಧಳಿಗೂ ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ಮದುವೆಯು ವಿಜೃಂಭಣೆಯಿಂದ ದಿನಾಂಕ 7-2-2003 ರಲ್ಲಿ ನಡೆಯಿತು.

4. ಮೈಸೂರು ನಿವಾಸಿ ಸೂಂತೋಡು ಎಸ್. ಚಂದ್ರಶೇಖರ್ ಮತ್ತು ಶೈಲಜಾ ದಂಪತಿಗಳ ಪುತ್ರ ದೇವಿ ಪ್ರಸಾದನಿಗೂ ಹಾಗೂ ಮೈಸೂರು ನಿವಾಸಿ ಶ್ರೀಮತಿ ಮತ್ತು ಶ್ರೀ ಗೋವಿಂದ್‌ನವರ ಮಗಳು ಛಾಯಾರತಿಗೂ ದಿನಾಂಕ 20-2-2003 ರಂದು ಮೈಸೂರಿನಲ್ಲಿರುವ ಹೋಟೇಲ್ ದಾಸ್‌ಪ್ರಕಾಶ್‌ನಲ್ಲಿ ನಡೆಯಿತು.

ಹಲವು ತಂದೆ ತಾಯಂದಿರನ್ನು ಒಂದುಗೂಡಿಸುವ ನೈಸರ್ಗಿಕ ಸೇತುವೆ ಮಕ್ಕಳು.

ಸಂಗಾತಿ - ಉದ್ಯೋಗ

ಏರ್‌ಫೋರ್ಸ್‌ನ ಟೆಕ್ನಿಕಲ್ ಟ್ರೇಡ್‌ಗಳಲ್ಲಿ ಏರ್‌ಮ್ಯಾನ್ ಹುದ್ದೆಗಳು

ಏರ್‌ಫೋರ್ಸ್‌ನಲ್ಲಿ ಟೆಕ್ನಿಕಲ್ (ಇಂಟರ್ ಮೀಡಿಯೆಟ್) ಟ್ರೇಡ್‌ಗಳಲ್ಲಿ (ಗ್ರೂಪ್ X) ಏರ್‌ಮ್ಯಾನ್ ಆಗಿ ಉದ್ಯೋಗ ಪಡೆಯಲು ಅವಿವಾಹಿತ ಪುರುಷ ಅಭ್ಯರ್ಥಿಗಳಿಗೆ ಅವಕಾಶಗಳಿವೆ.

ಅರ್ಹತೆ : ಫಿಸಿಕ್ಸ್, ಮ್ಯಾತ್ಸ್, ಇಂಗ್ಲೀಶ್ ಕಲಿತು ಕನಿಷ್ಠ 50% ಅಂಕಗಳೊಂದಿಗೆ + 2 ಪಿಯುಸಿ ಅಥವಾ ಆಟೋಮೊಬೈಲ್/ ಮೆಕಾನಿಕಲ್/ ಇಲೆಕ್ಟ್ರಿಕಲ್/ ಇಲೆಕ್ಟ್ರಾನಿಕ್ಸ್/ಕಂಪ್ಯೂಟರ್ ಸಯನ್ಸ್ ನಲ್ಲಿ ಮೂರು ವರ್ಷದ ಡಿಪ್ಲೋಮಾ.

ವಯೋಮಿತಿ : ಅಭ್ಯರ್ಥಿಗಳು 1982 ಜುಲೈ 1 ಮತ್ತು 1987 ಜುಲೈ 1 ಈ ದಿನಾಂಕಗಳ ನಡುವೆ ಜನಿಸಿರಬೇಕು.

ಶಾರೀರಿಕ ಅರ್ಹತೆ : ಕನಿಷ್ಠ 152.5cm ಎತ್ತರ 75 ಸೆ. ಮೀ. ಎದೆ ಅಳತೆ ಮತ್ತು ಪ್ರಾಯ ಹಾಗೂ ಎತ್ತರಕ್ಕೆ ತಕ್ಕಂತೆ ತೂಕ ಹೊಂದಿರಬೇಕು.

ತರಭೇತಿಯ ಅವಧಿಯಲ್ಲಿ ರೂ 2850/- ರಂತೆ ಮಾಸಿಕ ಸ್ಟೈಫಂಡ್ ಲಭ್ಯವಾಗುತ್ತದೆ. ಅರ್ಜಿಯ ಮಾದರಿ ಯಂತೆ 30cmX20cm ಅಳತೆಯ ಅರ್ಜಿಯನ್ನು ತಯಾರಿಸಿ ತುಂಬಿಸಿ ಕೆಳಗಿನ ದಾಖಲೆಗಳನ್ನು ಜೊತೆಗಿಟ್ಟು ಕಳುಹಿಸಬೇಕು.

a) ಪಾಸ್‌ಪೋರ್ಟ್ ಅಳತೆಯ 3 ಕಲರ್ ಫೋಟೋಗಳು (ಒಂದನ್ನು ಅರ್ಜಿಯಲ್ಲಿ ಅಂಟಿಸಬೇಕು, ಇನ್ನೆರಡು ಅರ್ಜಿಯ ಮೇಲ್ಭಾಗದಲ್ಲಿ ಪಿನ್ ಮಾಡಬೇಕು)

b) 5ರೂ.ಸ್ಟಾಂಪ್ ಹಚ್ಚಿದ 24 cm X 10 cm ಅಳತೆಯ ಸ್ವ-ವಿಳಾಸದ ಕವರ್ (ಇದನ್ನು ಅರ್ಜಿಯ ಹಿಂಬದಿಯಲ್ಲಿ ಅಂಟಿಸಬೇಕು.

c) ಪ್ರಾಯ, ಅರ್ಹತೆಗೆ ಸಂಬಂಧಿಸಿದ ಪ್ರಮಾಣಪತ್ರಗಳ ದೃಢೀಕೃತ ಪ್ರತಿಗಳು

ಅರ್ಜಿಯಲ್ಲಿ ಅಂಕಗಳ ಸರಿಯಾದ ಶೇಕಡಾವನ್ನು ಬರೆಯಬೇಕು ಎರಡು ಪದಗಳ ನಡುವೆ ಒಂದು ಬಾಕ್ಸ್ ಖಾಲಿ ಬಿಡಬೇಕು. ಒಂದು ಅಂಕೆ ಮಾತ್ರ ಬರೆಯುವುದಾದಲ್ಲಿ ಎಡಭಾಗದಲ್ಲಿ 'O' ಸೇರಿಸಬೇಕು. ಕವರ್‌ನ ಮೇಲೆ "Application for technical (Intermediate) Trades' ಎಂದು ಕ್ಯಾಪಿಟಲ್ ಅಕ್ಷರಗಳಲ್ಲಿ ಬರೆಯಬೇಕು.

ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ ಮಾರ್ಚ್ ತಿಂಗಳ 10 ನೇ ತಾರೀಖು. ಅರ್ಜಿಯನ್ನು ಸಾಮಾನ್ಯ ಅಂಚೆಯಲ್ಲಿಯೇ ಸಲ್ಲಿಸಬೇಕು. ವಿವರಗಳಿಗೆ www.careerairfore.nic.in

ವಿಳಾಸ : The President, Central Airmen Selection Board, P.B. No. 11807, New Delhi - 110 010

ಹೆಚ್ಚಿನ ವಿವರಗಳಿಗೆ 17-2-2003 ರ ವಿಜಯಕರ್ನಾಟಕ ನೋಡಿ.

ಬಿಎಸ್‌ಎಫ್‌ನಲ್ಲಿ ಕಾನ್‌ಸ್ಟೇಬಲ್ 959 ಹುದ್ದೆ

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಮತ್ತು ಪಾಂಡಿಚೇರಿ ರಾಜ್ಯಗಳ ಅರ್ಹ ಪುರುಷ ಅಭ್ಯರ್ಥಿಗಳಿಂದ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ), ಹುದ್ದೆಗಳಿಗೆ ನೇಮ ಕಾತಿಗಾಗಿ ಗಡಿಭದ್ರತಾ ಪಡೆ ಅರ್ಜಿಗಳನ್ನು ಆಹ್ವಾನಿಸಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ. 3050-75-3950-80-4590ರ ಶ್ರೇಣಿಯಲ್ಲಿ ವೇತನ ದೊರೆಯುತ್ತದೆ.

ಅರ್ಹತೆ : ಎಸ್. ಎಸ್. ಎಲ್. ಸಿ. /ತತ್ಸಮಾನ

ವಯೋಮಿತಿ : 18-23 (01-03 - 2003 ಕ್ಕೆ). ಎತ್ತರ ಕನಿಷ 70 cm.

SC/ST ಯವರಿಗೆ 5 ವರ್ಷ, OBC ಯವರಿಗೆ 3 ವರ್ಷ ಸಡಿಲಿಕೆಯನ್ನು ಗರಿಷ್ಠ ವಯೋಮಿತಿಯಲ್ಲಿ ನೀಡಲಾಗಿದೆ.

(ಅಭ್ಯಥಿಗಳು ಯಾವ ರೀತಿಯ ಊನ ಹೊಂದಿರಬಾರದು. ಒಳ್ಳೆಯ ವರ್ಣ ಹೊಂದಿರಬೇಕು. ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಆರೋಗ್ಯವಂತರಾಗಿರಬೇಕು)

ಮಾಜಿ ಸೈನಿಕರಿಗೆ ದೈಹಿಕ ಅರ್ಹತೆಯ ನಿರ್ಬಂಧಗಳಿಲ್ಲ. ಸರಕಾರಿ ನೌಕರರು NOC ಸಲ್ಲಿಸಬೇಕು.

ಆಯ್ಕೆ: ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅರ್ಹ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಆಯ್ಕೆಯ ಪರೀಕ್ಷೆಗಳಿಗೆ ಹಾಜರಾಗಬೇಕು (ವಿದ್ಯಾರ್ಹತೆ, ಪ್ರಾಯ, ಡೊಮಿಸೈಲ್, ಜಾತಿ ಪ್ರಮಾಣ ಪತ್ರಗಳು, PP ಅಳತೆಯ ಫೋಟೋ, ಆಡ್ಮಿಟ್ ಕಾರ್ಡ್ ಇತ್ಯಾದಿಗಳೊಂದಿಗೆ)

ಅರ್ಜಿ ಸಲ್ಲಿಕೆ : ಕೊಟ್ಟಿರುವ ಮಾದರಿಯಂತೆ ಅರ್ಜಿಯನ್ನು ತಯಾರಿಸಿ ತುಂಬಿಸಿ 20 ರೂ. ಮೌಲ್ಯದ DD/IPO(DIG/ Commandent STC, BSF, Bangalore - 63 ಹೆಸರಿನಲ್ಲಿ) ವಯೋಮಿತಿ, ವಿದ್ಯಾರ್ಹತೆ, ಡೊಮಿಸೈಲ್, ಜಾತಿ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳು 5 ರೂ. ಸ್ಟಾಂಪ್ ಹಚ್ಚಿದ 23cm X 10 cm ಅಳತೆಯ ಸ್ವ-ವಿಳಾಸದ ಕವರ್ ಇವುಗಳ ಜೊತೆಗೆ ಕಳುಹಿಸಬೇಕು.

ಅರ್ಜಿಯಲ್ಲಿ ಹಾಗೂ ಆಡ್ಮಿಟ್ ಕಾರ್ಡ್‌ನಲ್ಲಿ PP ಅಳತೆಯ ಫೋಟೋ ಅಂಟಿಸಿ ಗೆಜೆಟೆಡ್ ಆಫೀಸರರಿಂದ ದೃಢೀಕರಿಸಬೇಕು (SC/STಯವರಿಗೆ ಶುಲ್ಕ ವಿಲ್ಲ)ಅರ್ಜಿಯನ್ನು **10-03-2003** ರ ಮೊದಲು ಕೆಳಗಿನ ವಿಳಾಸಕ್ಕೆ ತಲುಪುವಂತೆ ಸಾಮಾನ್ಯ ಅಂಚೆಯಲ್ಲಿ ಕಳುಹಿಸಬೇಕು

DIG/Commandant STC,
BSF, Bangalore P.O.,
AFS Yelahanka,
Bangalore - 560 063

ಹೆಚ್ಚಿನ ಮಾಹಿತಿಗಳಿಗೆ 17-02-2002 ರ ವಿಜಯ ಕರ್ನಾಟಕ ನೋಡಿರಿ.

ಯುಕೋ ಬ್ಯಾಂಕಿನಲ್ಲಿ 250 ಆಫೀಸರ್ ಹುದ್ದೆ

ಕೊಲ್ಕತ್ತಾ ಕೇಂದ್ರವಾಗಿರುವ ಯುಕೋಬ್ಯಾಂಕಿನಲ್ಲಿ 250 ಆಫೀಸರ್ ಹುದ್ದೆಗಳಿದ್ದು ನೇಮಕಾತಿಗಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ. ವಿವರಗಳು ಹೀಗಿವೆ.

1. ರಿಸ್ಕ್ ಮ್ಯಾನೇಜ್‌ಮೆಂಟ್ /ಇನ್ ವೆಸ್ಟ್‌ಮೆಂಟ್ ಕ್ಷಟ್ರೆಶರಿ, ಪ್ಯಾರಾ ಬ್ಯಾಂಕಿಂಗ್ (ಮರ್ಚಂಟ್ ಬ್ಯಾಂಕಿಂಗ್)/ಕ್ರೆಡಿಟ್/ ಇನ್‌ಸ್ಪೆಕ್ಷನ್ / ಇಂಟರ್‌ನ್ಯಾಶನಲ್ ಬ್ಯಾಂಕಿಂಗ್ /ಅಕೌಂಟ್ಸ್)

ಹುದ್ದೆಗಳ ಸಂಖ್ಯೆ : 54 (SC-8, ST-3, OBC - 14 ಅಂಗವಿಕಲರಿಗೆ (OH)-2)

ಅರ್ಹತೆ : ಸಂಬಂಧಪಟ್ಟ ವಿಷಯದಲ್ಲಿ ಪ್ರಥಮ ದರ್ಜೆ ಪದವಿ /PG/PG ಡಿಪ್ಲೋಮಾ /CA/ICWA/CFA/ಫೈನಾನ್ಸ್ ಅಥವಾ ಬ್ಯಾಂಕಿಂಗ್ ಸ್ಪೆಷಲೈಸೇಶನ್ ಜೊತೆಗೆ MBA.

2. ಮಾರ್ಕೆಟಿಂಗ್ ಆಫೀಸರ್

ಹುದ್ದೆಗಳ ಸಂಖ್ಯೆ : 18(SC-2, ST-1, OBC -4, OH-1)

ಅರ್ಹತೆ : ಮಾರ್ಕೆಂಟಿಂಗ್‌ನಲ್ಲಿ ಪ್ರಥಮ ದರ್ಜೆ ಪದವಿ /PG/ PG ಡಿಪ್ಲೋಮಾ.

4. D.I.T. ಆಫೀಸರ್

ಹುದ್ದೆಗಳ ಸಂಖ್ಯೆ : 124 (SC-19, ST-9, OBC-34 OH4)

ಅರ್ಹತೆ : ಕಂಪ್ಯೂಟರ್ ಸಯನ್ಸ್‌ನಲ್ಲಿ ಪ್ರಥಮ ದರ್ಜೆಯಲ್ಲಿ B/E./ B.Tech./ MCA/PG ಅಥವಾ ಪದವಿ ಮತ್ತು ಕಂಪ್ಯೂಟರ್ 'B' ಲೆವೆಲ್.

4. ಲಾ. ಆಫೀಸರ್

ಹುದ್ದೆಗಳ ಸಂಖ್ಯೆ : 17 (SC-2, ST-1, OBC-4, OH-1)

ಅರ್ಹತೆ : ಪ್ರಥಮ ದರ್ಜೆಯಲ್ಲಿ ಕಾನೂನು ಪದವಿ

5. ಇಕಾನಾಮಿಕ್ಸ್ & ಸ್ಟ್ಯಾಟಿಸ್ಟೀಶಿಯನ್

ಹುದ್ದೆಗಳ ಸಂಖ್ಯೆ : 6(OBC-1, OH-1)

ಅರ್ಹತೆ : ಇಕಾನಾಮಿಕ್ಸ್ /ಸ್ಟಾಟಿಸ್ಟಿಕಲ್‌ನಲ್ಲಿ ಪ್ರಥಮ ದರ್ಜೆ ಪದವಿ

6. ಹಿಂದಿ (ಒ.ಎಲ್.)ಆಫೀಸರ್

ಹುದ್ದೆಗಳ ಸಂಖ್ಯೆ : 10(SC-2, ST-1, OBC-3, OH-1)

ಅರ್ಹತೆ : ಇಂಗ್ಲೀಷ್ ಒಂದು ವಿಷಯವಾಗಿ ಪದವಿ ಹಂತದಲ್ಲಿ ಕಲಿತು ಹಿಂದಿಯಲ್ಲಿ PG ಅಥವಾ ಇಂಗ್ಲೀಷ್ ಮತ್ತು ಮತ್ತು ಹಿಂದಿ ಪದವಿಯಲ್ಲಿ ಕಲಿತಿದ್ದು ಸಂಸ್ಕೃತದಲ್ಲಿ PG

7. ಇಂಜಿನಿಯರ್ (ಸಿವಿಎಲ್)

ಹುದ್ದೆಗಳ ಸಂಖ್ಯೆ : 5)OBC-1, OH-1, ಆಂಶಿಕ ಕಿವುಡು ಇದ್ದವರಿಗೆ ಒಂದು)

ಅರ್ಹತೆ : ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಪದವಿ.

8. ಸೆಕ್ಯುರಿಟಿ ಆಫೀಸರ್

ಹುದ್ದೆಗಳ ಸಂಖ್ಯೆ : 10 (SC-1, OBC-2, OH-1ಆಂಶಿಕ ಕಿವುಡು ಇದ್ದವರಿಗೆ -1)

ಅರ್ಹತೆ : ಪ್ರಥಮ ದರ್ಜೆಯಲ್ಲಿ ಪದವಿ /PG ಇನ್‌ಸ್ಪೆಕ್ಟರ್ ರ್‍ಯಾಂಕಿನಲ್ಲಿ ಆಫೀಸರ್ (ಆರ್ಮಿ /ಪ್ಯಾರಾ ಮಿಲಿಟರಿ /ಪೋಲಿಸ್) ಆಗಿ 5 ವರ್ಷದ ಅನುಭವ.

9. D.I.T. ಆಫೀಸರ್

ಹುದ್ದೆಗಳು : 03 (OH-1)

ಅರ್ಹತೆ : ಇಲೆಕ್ಟ್ರಾನಿಕ್ಸ್ / ಕಂಪ್ಯೂಟರ್ ಸಯನ್ಸ್/ ಕಮ್ಯೂನಿಕೇಶನ್‌ನಲ್ಲಿ ಪ್ರಥಮ ದರ್ಜೆ BE/ B.Tech ಅಥವಾ MCA/ ಕಂಪ್ಯೂಟರ್ ಸಯನ್ಸ್‌ನಲ್ಲಿ PG ಅಥವಾ ಪ್ರಥಮ ದರ್ಜೆ ಪದವಿ ಮತ್ತು ಕಂಪ್ಯೂಟರ್ B ಲೆವಲ್ Routers, Switches, RAS, ISON, ADSL, WLL, CDMA, VOIP, VSAT ಎಂಬ ಟೆಕ್ನಾಲಜಿ ಹಾಗೂ TCP/IP, SNMP, POP-3, IMAP. SMTP HTTP ಎಂಬ ಟೆಕ್ನಾಲಜಿಗಳನ್ನು ತಿಳಿದಿರಬೇಕು. ನೆಟ್ ವರ್ಕಿಂಗ್‌ನಲ್ಲಿ 2 ವರ್ಷಗಳ ಅನುಭವ.

10. D.I.T. ಆಫೀಸರ್

ಹುದ್ದೆಗಳು : 03 (OBC-1, OH-1)

ಅರ್ಹತೆ : ಮೇಲೆ ಹೇಳಿದ ವಿದ್ಯಾರ್ಹತೆ ಮತ್ತು ನೆಟ್‌ವರ್ಕಿಂಗ್‌ನಲ್ಲಿ 4 ವರ್ಷದ ಅನುಭವ.

ವಯೋಮಿತಿ : ಹುದ್ದೆ (1)ರಿಂದ (8) : 21-30 ವರ್ಷ ಹುದ್ದೆ (9) ರಿಂದ (10) : ಗರಿಷ್ಟ 35 ವರ್ಷ

(2003 ಜನವರಿ 1ರ ಆಧಾರದಲ್ಲಿ ಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. SC/ST ಯವರಿಗೆ 5 ವರ್ಷ, OBC ಯವರಿಗೆ 3 ವರ್ಷ ಮತ್ತು ವಿಕಲಾಂಗರಿಗೆ 10 ವರ್ಷ ಸಡಿಲಿಕೆ ನೀಡಲಾಗುತ್ತದೆ)

ಮೊದಲ 8 ಹುದ್ದೆಗಳಿಗೆ ನೇಮಕಾತಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಆಧಾರದಲ್ಲಿ 9 ಮತ್ತು 10 ನೇ ಹುದ್ದೆಗಳಿಗೆ ಸಂದರ್ಶನ ಮಾತ್ರ ಇರುವುದು. ಕರ್ನಾಟಕದ ಪರೀಕ್ಷಾ ಕೇಂದ್ರ ಬೆಂಗಳೂರು (ಕೋಡ್ ನಂ. 11) ಸಮೀಪದ ಇತರ ಪರೀಕ್ಷಾ ಕೇಂದ್ರಗಳು ಚೈನ್ನೈ (14). ಹೈದರಬಾದ್ (23). ಲಿಖಿತ ಪರೀಕ್ಷೆ ಮೇ 25 ರಂದು ನಡೆಯುತ್ತದೆ.

ಪರೀಕ್ಷಾ ಶುಲ್ಕ ರೂ. 145/- (SC/ST/ಅಂಗವಿಕಲರಿಗೆ ರೂ. 25/-.) "UCO Bank Recruitment Accout 2002" ಎಂಬ ಹೆಸರಿನಲ್ಲಿ ಮುಂಬೈನಲ್ಲಿ ಪಾವತಿಯಾಗುವಂತೆ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್ ಮೂಲಕ ಶುಲ್ಕ ಪಾವತಿಸಬೇಕು. SC/ST ಅಂಗವಿಕಲರು ಸಂಬಂಧಿಸಿದ ದಾಖಲೆಯ ಪ್ರತಿಯನ್ನು ಸಲ್ಲಿಸಬೇಕು. ಅರ್ಜಿಯಲ್ಲಿ ಅಭ್ಯರ್ಥಿಯ ಫೋಟೋ ಅಂಟಿಸಿ ಅದರಲ್ಲಿ ಸಹಿ ಮಾಡಬೇಕು. ಇತರ ಯಾವುದೇ ಪ್ರಮಾಣ ಪತ್ರಗಳ ಪ್ರತಿಗಳನ್ನು ಸಲ್ಲಿಸಬೇಕಾಗಿಲ್ಲ. ಕವರ್‌ನ ಮೇಲೆ ಸೀರಿಯಲ್ ನಂ., ಹುದ್ದೆಯ ಹೆಸರು ಮತ್ತು ಪರೀಕ್ಷಾ ಕೇಂದ್ರ ಇವುಗಳನ್ನು ಬರೆಯಬೇಕು. ಒಂದಕ್ಕಿಂತ ಹೆಚಚು ಹುದ್ದೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು. ತುಂಬಿಸಿದ ಅರ್ಜಿಯನ್ನು ಮಾರ್ಚ್ 8 ರ ಮೊದಲು ಕೆಳಗಿನ ವಿಳಾಸಕ್ಕೆ ತಲುಪುವಂತೆ ಸಾಮಾನ್ಯ ಅಂಚೆಯಲ್ಲಿ ಕಳುಹಿಸಬೇಕು.

The Director,Institute of Banking Personnel Selection, Post Box No. 7501, Goregaon (West), Mumbai - 400 104.

ಹೆಚ್ಚಿನ ವಿವರಗಳಿಗೆ 12-2-2002 ರ ವಿಜಯ ಕರ್ನಾಟಕ ಪತ್ರಿಕೆ ನೋಡಿರಿ.



ಕುರುಂಜಿ ಗಂಗಾಧರ

ಸುಳ್ಯ ಗೌಡ ಯುವ ಸಂಘಟನೆ - 2003

ಸಂಘಟನೆಯ "ಮಾಸ್ಟರ್ ಮೈಂಡ್" ನಿಷ್ಣಾಂತ ವ್ಯಕ್ತಿ, ಪ್ರಾಂಶುಪಾಲ ಕುರುಂಜಿ ಗಂಗಾಧರ ಗೌಡರು ಈ ಸಮಾವೇಶದ ಯಶಸ್ವಿ ನಿರ್ದೇಶಕರು. ಯಶಸ್ವೀ ಸಮ್ಮೇಳನವೊಂದರ ಸಮರ್ಥ ನಿರ್ದೇಶನದ ಹೊಣೆ ಹೊತ್ತು ಈ ಕಾಯದ ನಾಯಕನಾಗಿ ಕಂಗೊಳಿಸಿದ ಗಂಗಾಧರ್‌ನವರಿಗೆ ನಮ್ಮೆಲ್ಲರ ಹೃತ್ಪೂರ್ವಕ ಶುಭ ಹಾರೈಕೆಗಳು.

ಯಿಂದ : ಪಟ್ಟಡ ತಿಮ್ಮಯ್ಯ ಪೊನ್ನಪ್ಪ ಮತ್ತು ಸಂಸಾರ
ಭವಾನಿ, ಪ್ರೀತಿ, ಅನಿತ್, ಅವಂದೂರು. ದೂರವಾಣಿ : 245639



ಯಂ. ಆರ್. ರಶ್ಮಿ

ವಿ. ವಿ. ಪ್ರತಿನಿಧಿಯಾಗಿ ರಾಷ್ಟ್ರಮಟ್ಟದಲ್ಲಿ ಸ್ಪರ್ಧೆ

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ಬಿ. ಎಸ್ಸಿ., ವಿದ್ಯಾರ್ಥಿನಿ ಯಂ. ಆರ್. ರಶ್ಮಿ ಇತ್ತೀಚೆಗೆ ಕೊಟ್ಟಾಯಂನಲ್ಲಿ ನಡೆದ ಅಖಿಲ ಭಾರತ ಅಂತರ್ ವಿಶ್ವ ವಿದ್ಯಾನಿಲಯ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿದ್ದರು. ಈಕೆ ಮೊಂಟಡ್ಕ ರಾಮಚಂದ್ರ ಹಾಗೂ ವಾಣಿ ವಿಲಾಸ ದಂಪತಿಯ ಪುತ್ರಿ.

ವಿನಂತಿ : ಕೊಡಗು ಸಂಗಾತಿ ಪತ್ರಿಕೆಯ ಚಂದ ನವೀಕರಣ

ಸಾಕಷ್ಟು ಬಾರಿ ನವೀಕರಣಕ್ಕಾಗಿ ಪೋಸ್ಟ್ ಕಾರ್ಡಿನಲ್ಲಿಯೂ, ಪತ್ರಿಕೆ ಒಳಗಡೆ "ಜ್ಞಾಪನ ಪತ್ರವನ್ನು ಸಹ ಕಳುಹಿಸಿ ಆಗಿದೆ. ಸನ್ಮಾನ್ಯ ಪತ್ರಿಕೆಯ ಚಂದದಾರರು ಕೂಡಲೇ ನವೀಕರಿಸುವುದು. ಪತ್ರಿಕೆ ಕಠಿಣ ಹಾದಿಯಲ್ಲಿದೆ. ಹಲವು ಉತ್ತಮ ಕೆಲಸವನ್ನು ಸಹ ಮಾಡುತ್ತಿದೆ. ಪತ್ರಿಕೆ ಬಗ್ಗೆಯ ಊಹಾ ಪೋಹಗಳಿಗೆ ದಯವಿಟ್ಟು ಕಿವಿಗೊಡದಿರಿ. ಪತ್ರಿಕೆ ತನ್ನ ಹಿಂದಿನ ನಿಲುವಿನಲ್ಲೆ ಮುಂದುವರಿಯುತ್ತಿದೆ. ಸಂಗಾತಿ ತಮ್ಮ ಸದಸ್ಯತನದ ನವೀಕರಣಕ್ಕಾಗಿ ಹಾತೊರೆಯುತ್ತಿದೆ. ಪ್ರತಿಯೊಬ್ಬರ ಮನೆ ಮನೆಗೂ ವಸೂಲಾತಿಗೆ ಬರಲು ಸಂಗಾತಿಗೆ ಕಷ್ಟ ವೆನಿಸಿದೆ. ಪ್ರತಿಯೊಬ್ಬ ಓದುಗರು ಒಲೆಗೊಂದರಂತೆ ಕೊಂಡು ಓದಿದಲ್ಲೂ, ಮತ್ತು ಒಬ್ಬ ಚಂದದಾರ ಒಬ್ಬ ಸದಸ್ಯನಂತೆ ಚಂದ ಸದಸ್ಯರನ್ನುಹೊಸದಾಗಿ ನೀಡಿದಲ್ಲೂ, ಅದುವೆ ನಮಗೆ ದೊಡ್ಡ ಸಂಗತಿ. ಪತ್ರಿಕೆ ನಿಮ್ಮದು. ಪ್ರಯತ್ನ ನಮ್ಮದು. ಫಲಾಫಲ ನಾಡಿಗೆ ಹಾಗೂ ಜನಾಂಗಕ್ಕೆ. " ಒಂದು ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿಯೆಂಬ" ಶ್ಲೋಕದಲ್ಲಿ ನಂಬಿಕೆ ನಮಗಿದೆ. ಮರೆಯದೆ ತಪ್ಪದೆ ನವೀಕರಿಸಿ ಸಹಕರಿಸುವುದು.

-ಪಟ್ಟಡ ಪ್ರಭಾಕರ, ಗೌರವ ಸಂಪಾದಕ.

*ಕೊಡಗು ಸಂಗಾತಿ ತನ್ನ **6** ನೇ ವರ್ಷ ಮುಗಿಸಿದ ಈ ಸಂದರ್ಭದಲ್ಲಿ ನನ್ನ ಶುಭ ಹಾರೈಕೆಗಳು, ದೇವರು ದೊಡ್ಡವನು.*
ಪ್ರೊ॥ ಪೂಜಾರಿ ಮೊಣಪ್ಪ, ಬೆಂಗಳೂರು.

ಬೇಕಾಗಿದೆ

ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿ ನಿವೇಶನ ಮಾರುವವರು, ಕೊಳ್ಳುವವರು ಇದ್ದಲ್ಲೂ ಕೂಡಲೇ ಸಂಪರ್ಕಿಸಿ.
C/o 0821 / 404290, 513501



ಜನನ : 25-7-1957
ಮರಣ : 24-1-2003

ಪೊರೆಯನ ಬೋಪಣ್ಣ ಗೋಪಾಲ (ಗೋವಿಂದ)


ಕುಯ್ಯಂಗೇರಿ ಗ್ರಾಮ, ಮಡಿಕೇರಿ ತಾಲ್ಲೂಕು.

ಮೂಲತ ಕುಯ್ಯಂಗೇರಿ ನಿವಾಸಿ ಹಾಲಿ ಬೊಂಬಾಯಿಯಲ್ಲಿ ಉದ್ಯೋಗದಲ್ಲಿದ್ದು ದಿನಾಂಕ 24-1-2003 ರಂದು ಬೊಂಬಾಯಿಯಲ್ಲಿ ರೈಲು ಅಪಘಾತದಲ್ಲಿ ವಿಧಿವಶವಾದ ಸಂದರ್ಭದಲ್ಲಿ ಮತ್ತು ಶುದ್ಧ, ತಿಥಿಗಳ ಅಪರ ಕ್ರಿಯೆಗಳಲ್ಲಿ ಬಂದು ಸಹಕರಿಸಿ, ಪತ್ರ ಮೂಲಕವಾಗಿಯೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿಯೂ ನಮ್ಮ ದುಃಖದಲ್ಲಿ ಪಾಲ್ಗೊಂಡು ಸಂತೈಸಿದ ಎಲ್ಲಾ ಒಂದು ಮಿತ್ರರಿಗೂ ಹಿತೈಷಿಗಳಿಗೂ ಕುಟುಂಬದವರಿಗೂ, ನೆರೆಕೆರೆ, ಊರಿನವರಿಗೆ ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಪತ್ನಿ : ಘನವತಿ (ಘನು)
ಮಗ : ಮಧು
ಪ್ರಕಟಣೆ : ಪೋರೆಯನ ಆನಂದ, ಮ್ಯಾನೇಜರ್, ಕೊಡಗು ಗೌಡ ವಿದ್ಯಾರ್ಥಿ ನಿಲಯ, ಮೈಸೂರು.
ಶ್ರೀಮತಿ ಪೋರೆಯನ ಯಶೋಧ ಆನಂದ, ಹಿರಿಯ ಶುಶ್ರೂಶಕಿ, ಬಿಳಿಕೆರೆ

Ph. : 415983

Reg. No. KA/SK/MYS-88/2003 Registered : 10-01-96 TCI Kar. 09592



ಶುಭಾಶಯಗಳು

ದಿನಾಂಕ 6-2-2003 ರ ಗುರುವಾರ ನಮ್ಮ ಮಕ್ಕಳ ಮದುವೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ 'ದಿವ್ಯರೂಪ' ಕಲ್ಯಾಣ ಮಂಟಪದಲ್ಲಿ ನಡೆದ ಸಂದರ್ಭದಲ್ಲಿ ನೀವೆಲ್ಲಾ ಬಂಧು ಆಶೀರ್ವಾದ ಮಾಡಿದ್ದಿರಿ. ನಮಗೆಲ್ಲರಿಗೂ ತುಂಬಾ ಸಂತೋಷ ತಂದಿದೆ. ನೀವುಗಳಿಗೆಲ್ಲಾ ನಮ್ಮ ಕುಲಗುರು ವೆಂಕಟರಮಣ ಮತ್ತೆ ಆದಿ ಕಾವೇರಿ ಮಾತೆ ಸಹ ಆಯಿರಾರೋಗ್ಯ ಸುಖ ಸಂಪತ್ತು ನೀಡಿ ಸಹಕರಿಸಲಿ ಎಂದು ಈ ಮೂಲಕ ಶುಭ ಹಾರೈಸುವೆವು.

ಕುದುಪಜೆ ಸುಶ್ಮ ಮತ್ತು ರಾಜೇಶ್, ಇಂಜಿನಿಯರ್
S/o ರಮೇಶ್

ಯಿಂದ :
ಕುದುಪಜೆ ಕೆ.ಕೆ. ಕುಶಾಲಪ್ಪ
ಮತ್ತು ಕೆ. ಕಮಲಾಕ್ಷಿ
ವಿಳಾಸ : # 788, ಕಾಂಟೂರ್ ರಸ್ತೆ, ಗೋಕುಲಂ 3ನೇ ಹಂತ, ಮೈಸೂರು - 2
ದೂರವಾಣಿ : 513047

ಡಾ॥ ರಮೇಶ್
ಶ್ರೀಮತಿ ರೀತಾ
ಕೆ. ಆರ್. ನಗರ, ಮೈಸೂರು
ದೂರವಾಣಿ : 662778




ಮೇಜರ್ ಮೊಟ್ರ ನಂಜಪ್ಪ ವಾಸುದೇವ್ ಅವರಿಗೆ ಚೀಫ್ ಆಫ್ ಆರ್ಮಿ ಸ್ಟಾಫ್ ಪದಕ ಪ್ರಧಾನ

ಭಾರತ -ಪಾಕ್ ಗಡಿ ಪ್ರದೇಶದಲ್ಲಿ ಆಪರೇಷನ್ ಪರಾಕ್ರಮ ಕಾರ್ಯಾಚರಣೆಯಲ್ಲಿ ಕರ್ತವ್ಯನಿರತರಾಗಿದ್ದ ಜಿಲ್ಲೆಯ ಮೇಜರ್ ಮೊಟ್ರ ನಂಜಪ್ಪ ಅವರು 10 ಸಾವಿರ 'ಲ್ಯಾಂಡ್ ಮೈನ್ಸ್'ಗಳನ್ನು 15 ಕಿ. ಮೀ. ಅಂತರದಲ್ಲಿ ನಿಗದಿತ ಸಮಯದಲ್ಲಿ ಯಾವದೇ ಹಾನಿಯಾಗದ ರೀತಿಯಲ್ಲಿ ವಿಶ್ಲೇಷಣೆ ಮಾಡುವ ಮೂಲಕ ಈ ಸಾಧನೆ ಮಾಡಿದ ಕೊಡಗಿನ ಪ್ರಥಮ ಯೋಧರಾಗಿದ್ದಾರೆ.

ಈ ಸಾಧನೆಗಾಗಿ ಮೇಜರ್ ವಾಸುದೇವ್ ಅವರಿಗೆ ಯೋಧ ಸೇವಾ ಪದಕಕ್ಕಾಗಿ ಶಿಫಾರಸು ಮಾಡಲಾಗಿದೆಯಲ್ಲದೆ ಈಗಾಗಲೇ ವಾಸುದೇವ್ ಅವರಿಗೆ ಚೀಫ್ ಆಫ್ ಆರ್ಮಿ ಸ್ಟಾಫ್ ಪದಕ ದೊರೆತಿದೆ. ಜನವರಿ 26 ರಂದು ಈ ಪದಕ ಹಾಗೂ ಪ್ರಶಸ್ತಿ ಪತ್ರವನ್ನು ಪ್ರಧಾನ ಮಾಡಲಾಗಿದೆ. ಶ್ರೀಯುತರು ಹೆರವನಾಡಿನ ದಿ. ಮೊಟ್ರ ನಂಜಪ್ಪ ಅವರ ಪುತ್ರರಾಗಿದ್ದಾರೆ.

ಅರಳಿದ ಪ್ರತಿಭೆ



ಅಚ್ಚುಪಟ್ಟೀರ ರಕ್ಷಿತ್

ಮೈಸೂರು ವಾಸಿಯಾದ ಅಚ್ಚುಪಟ್ಟೀರ ಪುಟ್ಟಪ್ಪ ಮತ್ತು ಮನೋರಮರವರ ಹಾಗೂ ಪುತ್ತೂರಿನ ಸಂತ ಫಿಲೋಮಿನಾ ವಸತಿ ಪ್ರೌಢಶಾಲೆಯಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ ಪುತ್ರನಾದ ಅಚ್ಚುಪಟ್ಟೀರ ರಕ್ಷಿತ್ ಈತನು ಹೆಬ್ಬಾಳ 2 ನೇ ಹಂತದಲ್ಲಿ ವಾಸವಾಗಿರುವ ಮೊಳ್ಳೇರ ಚಿದಾನಂದರವರ ಉತ್ತಮ ಕರಾಟೆ ಮಾರ್ಗದರ್ಶನದಲ್ಲಿ ಕಳೆದ ಸಾಲಿನ ಕೇರಳದ ಸುಲ್ತಾನ ಬತೇರಿಯಲ್ಲಿ ಜರುಗಿದ ನ್ಯಾಶನಲ್ ಕುಮಟೆ ಮತ್ತು ಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹಾಗೂ 2002-03 ನೇ ಸಾಲಿನಲ್ಲಿ ನಂಜನಗೂಡಿನಲ್ಲಿ ನಡೆದ ಅಖಿಲ ಭಾರತ ಕರಾಟೆ ಮತ್ತು ಕೋಬುಡೋ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ಹೆತ್ತವರಿಗೆ ಹಾಗೂ ಕಲಿಸಿದ ಗುರುಗಳಿಗೆ ಕೀರ್ತಿ ತಂದಿದ್ದಾನೆ.

ಈತನಿಗೆ ಶುಭ ಕೋರುವವರು

ಅಜ್ಜ : ಅಚ್ಚುಪಟ್ಟೀರ ಈರಪ್ಪ
ಅಜ್ಜಿ : ಅಚ್ಚುಪಟ್ಟೀರ ಅಕ್ಕಯ್ಯ, ಅಕ್ಕ : ರೇಷ್ಮಾ

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.